| 6010 | 0245-00676458-000027 | RAMESH G | 110 | 111.7 |
| 6025 | 0245-04069682-000009 | RENUKA | 15.4 | 15.4 |
| 6011 | 0245-04069682-000010 | RENUKA | 5.6 | 5.6 |
| 6011 | 0245-04069682-000011 | RENUKA | 5 | 5.9 |
| 7147 | 0245-07292860-000001 | RITINAINA GOWDA | 1175 | 1178 |
| 6025 | 0245-04065690-000010 | ROOPA | 14.8 | 14.5 |
| 6025 | 0245-04065690-000011 | ROOPA | 58 | 59 |
| 6025 | 0245-04065690-000012 | ROOPA | 90 | 100 |
| 6025 | 0245-04145054-000004 | RUKMINI K | 55 | 57.3 |
| 6025 | 0245-04109164-000004 | SANDHYARANI A M | 35.5 | 35.5 |
| 6025 | 0245-04109164-000006 | SANDHYARANI A M | 26.5 | 26.5 |
| 6025 | 0245-04109164-000007 | SANDHYARANI A M | 35 | 35.7 |
| 6015 | 0245-07251306-000006 | SANGEETHA | 400 | 400 |
| 6015 | 0245-07251306-000008 | SANGEETHA | 548 | 540 |
| 6015 | 0245-07251306-000005 | SANGEETHA | 210 | 211.6 |
| 6011 | 0245-07251306-000003 | SANGEETHA | 13 | 15.6 |
| 6025 | 0245-07251306-000006 | SANGEETHA | 824 | 757 |
| 7147 | 0245-07251306-000009 | SANGEETHA KUMAR VIJAY | 514 | 514 |
| 6025 | 0245-04071454-000003 | SANTHOSH | 28.7 | 29.3 |
| 6011 | 0245-04071454-000034 | SANTHOSH | 44 | 44.9 |
| 6011 | 0245-04071454-000040 | SANTHOSH | 35 | 36.4 |
| 6011 | 0245-04071454-000041 | SANTHOSH | 28 | 28.2 |
| 6011 | 0245-04141636-000001 | SANTHOSH N | 7.3 | 8.5 |
| 6010 | 0245-04000974-000008 | SATISH | 24.5 | 25.5 |
| 6011 | 0245-04138886-000001 | SAVARI | 7.5 | 7.8 |
| 6011 | 0245-04138886-000002 | SAVARI | 6.6 | 6.6 |
| 6011 | 0245-04138886-000003 | SAVARI | 6 | 6.1 |
| 6010 | 0245-02961863-000394 | SHARWAN | 25 | 26.5 |
| 6010 | 0245-02961863-000398 | SHARWAN | 35 | 35.5 |
| 6010 | 0245-02961863-000399 | SHARWAN | 16.6 | 17.6 |
| 6025 | 0245-04000207-000011 | SRINIVAS R | 33 | 33 |
| 6025 | 0245-04000207-000012 | SRINIVAS R | 60.5 | 60.5 |
| 6015 | 0245-04000207-000014 | SRINIVAS R | 85.6 | 85.6 |
| 6025 | 0245-07247611-000001 | SRINIVASA | 266 | 357.8 |
| 6025 | 0245-07200127-000002 | SUDHENDRARAJ | 535 | 535.4 |
| 6025 | 0245-07200127-000004 | SUDHENDRARAJ | 125.8 | 131 |
| 6025 | 0245-04151170-000001 | SUNIL ANNAPPA GURAV | 16.5 | 16.5 |
| 6025 | 0245-04151730-000001 | SUNITHA | 17.5 | 18.9 |
| 6011 | 0245-02800730-000118 | TEJARAM | 54.7 | 54.7 |
| 6011 | 0245-02800730-000120 | TEJARAM | 252 | 257.7 |
| 6011 | 0245-03040736-000008 | TEKAL SEENAPPA | 37 | 38 |
| 6010 | 0245-02995598-000845 | UGMA | 45 | 48.9 |
| 6010 | 0245-02995598-000853 | UGMA | 52 | 52 |
| 7147 | 0245-07310755-000001 | VARUN U | 689 | 711 |
| 6025 | 0245-04151719-000001 | VENKATA GIRI VEERA | 30.5 | 27.5 |
| 6025 | 0245-04060292-000011 | VENKATESHAN | 35 | 35 |
| 6025 | 0245-04060292-000012 | VENKATESHAN | 30 | 31.5 |

Bank reserves right to postpone/ cancel auction without assigning any reason.

Date : 23.03.2021, Place : Bangalore Sd/- (Branch Manager)


# ಸಿವಿಲ್ ಕಾನ್‌ಸ್ಟೆಬಲ್ ಲಿಖಿತ ಪರೀಕ್ಷೆಗೂ ನಕಲಿ ಅಭ್ಯರ್ಥಿ!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ನಗರ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಗಾಗಿ ನಡೆದ ಲಿಖಿತ ಪರೀಕ್ಷೆಗೂ ನಕಲಿ ಅಭ್ಯರ್ಥಿ ಹಾಜರಾಗಿದ್ದ ಸಂಗತಿ ತನಿಖೆಯಿಂದ ಹೊರಬಿದ್ದಿದ್ದು, ಈ ಸಂಬಂಧ ಅಭ್ಯರ್ಥಿಯೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ನೇಮಕಾತಿಗಾಗಿ ಅರ್ಜಿ ಸಲ್ಲಿಸಿದ್ದ ಕೆಲ ಅಸಲಿ ಅಭ್ಯರ್ಥಿಗಳ ಪರವಾಗಿ, ನಕಲಿ ಅಭ್ಯರ್ಥಿಗಳು ಲಿಖಿತ ಹಾಗೂ ದೈಹಿಕ ಪರೀಕ್ಷೆಗೆ ಹಾಜರಾಗಿದ್ದರು ಎಂಬ ಮಾಹಿತಿ ಲಭ್ಯವಾಗಿತ್ತು. ತನಿಖೆ ನಡೆಸಿದಾಗ ಲಿಖಿತ ಪರೀಕ್ಷೆಗೆ ನಕಲಿ ಅಭ್ಯರ್ಥಿ ಹಾಜರಾಗಿದ್ದು ಪತ್ತೆಯಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'2020ರ ಸೆಪ್ಟೆಂಬರ್ 20ರಂದು ನಡೆದಿದ್ದ ಪರೀಕ್ಷೆಗೆ ಅಸಲಿ ಅಭ್ಯರ್ಥಿ ಕಾಶಪ್ಪ ಎಮ್ಮಿನವರ್ ಪರವಾಗಿ ನಕಲಿ ಅಭ್ಯರ್ಥಿ ಕಾಶಿನಾಥ್ ತೆಲಸಂಗ್ ಎಂಬಾತ ಹಾಜರಾಗಿದ್ದ. ಯಾರಿಗೂ ಅನುಮಾನ ಬಾರದಂತೆ ಪರೀಕ್ಷೆಯನ್ನೂ ಬರೆದಿದ್ದ. ಅಸಲಿ ಅಭ್ಯರ್ಥಿ ಕಾಶಪ್ಪ,

ಬಸವರಾಜ್ ಹೊನಕುಪ್ಪಿ

ಕಾಶಪ್ಪ ಎಮ್ಮಿನವರ್

ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ದೈಹಿಕ ಪರೀಕ್ಷೆಗೆ ಅರ್ಹತೆ ಪಡೆದುಕೊಂಡಿದ್ದ' ಎಂದೂ ತಿಳಿಸಿದರು.

'ಬಾಗಲಕೋಟೆಯ ಜಮಖಂಡಿ ತಾಲ್ಲೂಕಿನ ಚಿಕ್ಕಲ್ಕಿಯ ಕಾಶಪ್ಪನನ್ನು ಬಂಧಿಸಲಾಗಿದ್ದು, ಆತನ ಪರ ಪರೀಕ್ಷೆ ಬರೆದಿದ್ದ ಬಾಗಲಕೋಟೆ ಜಿಲ್ಲೆಯ ಕಾಶಿನಾಥ್ ತಲೆಮರೆಸಿಕೊಂಡಿದ್ದಾನೆ. ಇವರಿಬ್ಬರ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದೂ ಹಿರಿಯ ಅಧಿಕಾರಿ ಮಾಹಿತಿ ನೀಡಿದರು.

**ದೈಹಿಕ ಪರೀಕ್ಷೆಯಲ್ಲೂ ನಕಲಿ:** 'ಸಿವಿಲ್ ಕಾನ್‌ಸ್ಟೆಬಲ್ ದೈಹಿಕ ಪರೀಕ್ಷೆಗೆ ನಕಲಿ ಅಭ್ಯರ್ಥಿ ಕಳುಹಿಸಿದ್ದ ಅಸಲಿ ಅಭ್ಯರ್ಥಿ ಬಸವರಾಜ್ ಹೊನಕುಪ್ಪಿ ಎಂಬಾತನನ್ನು ಮಂಗಳವಾರ ಬಂಧಿಸಲಾಗಿದೆ. ಆತನ ಪರ ಪರೀಕ್ಷೆಗೆ ಹಾಜರಾಗಿದ್ದ ನಕಲಿ ಅಭ್ಯರ್ಥಿ ಸೌರಭ್ ತಲೆಮರೆಸಿಕೊಂಡಿದ್ದಾನೆ' ಎಂದು ಅಧಿಕಾರಿ ಹೇಳಿದರು.

'ಗೋಕಾಕ್ ತಾಲ್ಲೂಕಿನ ಬಸವರಾಜ್, ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದ. ಸ್ನೇಹಿತನೇ ಆದ ಬೆಳಗಾವಿ ಜಿಲ್ಲೆಯ ಸ್ನೇಹಿತ ಸೌರಭ್‌ನನ್ನು ತನ್ನ ಪರವಾಗಿ ದೈಹಿಕ ಪರೀಕ್ಷೆಗೆ ಕಳುಹಿಸಿದ್ದ' ಎಂದು ಅಧಿಕಾರಿ ತಿಳಿಸಿದರು.

### ವಿಡಿಯೊ ಪರಿಶೀಲನೆಗೆ ಸಮಿತಿ ರಚನೆ

ಕೆಎಸ್‌ಆರ್‌ಪಿ ಕಾನ್‌ಸ್ಟೆಬಲ್ ನೇಮಕಾತಿ ಪ್ರಕ್ರಿಯೆಯಲ್ಲಿ ಹಾಜರಾಗಿದ್ದ ನಕಲಿ ಅಭ್ಯರ್ಥಿಗಳನ್ನು ಪೊಲೀಸರು ಇತ್ತೀಚೆಗಷ್ಟೇ ಬಂಧಿಸಿದ್ದಾರೆ. ಇದೀಗ, ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಯಲ್ಲೂ ನಕಲಿ ಅಭ್ಯರ್ಥಿಗಳು ಕಂಡುಬಂದಿದ್ದಾರೆ.

ಪರೀಕ್ಷೆಗೆ ಹೆಚ್ಚಿನ ಸಂಖ್ಯೆಯಲ್ಲಿ ನಕಲಿ ಅಭ್ಯರ್ಥಿಗಳು ಹಾಜರಾಗಿರುವ ಮಾಹಿತಿ ಲಭ್ಯವಾಗಿರುವುದರಿಂದ, ನೇಮಕಾತಿ ಪ್ರಕ್ರಿಯೆಯ ವಿಡಿಯೊ ಪರಿಶೀಲನೆಗಾಗಿ ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯ ಸದಸ್ಯರು, ಪರೀಕ್ಷೆಗಳ ವಿಡಿಯೊ ವೀಕ್ಷಿಸಿ ನಕಲಿ ಅಭ್ಯರ್ಥಿಗಳನ್ನು ಪತ್ತೆ ಮಾಡುತ್ತಿದ್ದಾರೆ.

#### 'ಹಣಕ್ಕಾಗಿ ಕೆಲಸ'

'ಪದವಿ ಮುಗಿಸಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ ಆರೋಪಿಗಳು, ಹಣಕ್ಕಾಗಿ ನಕಲಿ ಅಭ್ಯರ್ಥಿಗಳಾಗಿ ಪರೀಕ್ಷೆಗೆ ಹಾಜರಾಗಿದ್ದರು. ಈ ಬಗ್ಗೆ ಅವರೇ ಹೇಳಿಕೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

## ಸುದ್ದಿ 2 ನಿಮಿಷ

### 'ಕೆಂಪೇಗೌಡ' ನಿರ್ಮಾಪಕ ಬಂಧನ

**ಬೆಂಗಳೂರು:** ಡ್ರಗ್ಸ್ ಪ್ರಕರಣದಲ್ಲಿ ಭಾಗಿಯಾದ ಆರೋಪದಡಿ ಸಿನಿಮಾ ನಿರ್ಮಾಪಕ ಶಂಕರಗೌಡ ಅವರನ್ನು ಗೋವಿಂದಪುರ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆಗಳು ಸೇರಿ ಹಲವರನ್ನು ಇತ್ತೀಚೆಗಷ್ಟೇ ಬಂಧಿಸಿದ್ದ ಪೊಲೀಸರು, ₹ 4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದರು. ಆರೋಪಿಗಳು ನೀಡಿದ್ದ ಮಾಹಿತಿ ಆಧರಿಸಿ ಬಿಗ್‌ಬಾಸ್ ರಿಯಾಲಿಟಿ ಶೋ ಸ್ಪರ್ಧಿ ಮಸ್ತಾನ್ ಚಂದ್ರ ಅವರ ಮನೆ ಹಾಗೂ ನಿರ್ಮಾಪಕ ಶಂಕರಗೌಡ ಕಚೇರಿ ಮೇಲೆ ದಾಳಿ ಮಾಡಿದ್ದರು.

ಪ್ರಕರಣ ಸಂಬಂಧ ಶಂಕರಗೌಡ ಅವರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಹೆಚ್ಚಿನ ವಿಚಾರಣೆ ನಡೆಸಿದ್ದರು. ಇದೀಗ ಸೂಕ್ತ ಪುರಾವೆಗಳು ಲಭ್ಯವಾಗಿದ್ದರಿಂದ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಅವರನ್ನು ಬಂಧಿಸಿದ್ದಾರೆ.

'ಕೆಂಪೇಗೌಡ ಸೇರಿದಂತೆ ಹಲವು ಸಿನಿಮಾ ನಿರ್ಮಾಣ ಮಾಡಿದ್ದ ಶಂಕರಗೌಡ, ತಮ್ಮದೇ ಕಚೇರಿ ಹಾಗೂ ಇತರೆಡೆ ಪಾರ್ಟಿಗಳನ್ನು ಆಯೋಜಿಸಿ, ಅಲ್ಲಿಗೆ ಬರುತ್ತಿದ್ದ ಅತಿಥಿಗಳಿಗೆ ಡ್ರಗ್ಸ್ ಕೊಡುತ್ತಿದ್ದರು. ಡ್ರಗ್ಸ್ ಖರೀದಿಸಲು ಹಣವನ್ನೂ ನೀಡುತ್ತಿದ್ದರು ಎಂಬುದು ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

**ಕಚೇರಿ ಸಿಬ್ಬಂದಿ ಹೇಳಿಕೆ ದಾಖಲು:** ಪ್ರಕರಣದಲ್ಲಿ ಶಂಕರೇಗೌಡ ಅವರ ಕಚೇರಿಯ ವ್ಯವಸ್ಥಾಪಕ ಹಾಗೂ ಸಿಬ್ಬಂದಿಗೆ ನೋಟಿಸ್ ನೀಡಿದ್ದ ಪೊಲೀಸರು, ವಿಚಾರಣೆ ನಡೆಸಿ ಹೇಳಿಕೆ ಪಡೆದುಕೊಂಡಿದ್ದರು.

ಶಂಕರಗೌಡ ಅವರೇ ಡ್ರಗ್ಸ್ ಸೇವನೆ ಮಾಡುತ್ತಿದ್ದ ಅನುಮಾನ ಪೊಲೀಸರಿಗೆ ಇದೆ. ಶಂಕರಗೌಡ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರ ವರದಿ ಬರುವುದು ಬಾಕಿ ಇದೆ.

### ತುರಹಳ್ಳಿ ಅರಣ್ಯಕ್ಕೆ ಬೆಂಕಿ

**ಬೆಂಗಳೂರು:** ತುರಹಳ್ಳಿ ಅರಣ್ಯ ಪ್ರದೇಶದಲ್ಲಿ ಮಂಗಳವಾರ ಬೆಂಕಿ ಕಾಣಿಸಿಕೊಂಡಿದೆ.

'ಸಂಜೆ ಐದು ಗಂಟೆ ಸುಮಾರಿಗೆ ಅರಣ್ಯದಲ್ಲಿ ಬೆಂಕಿ ಕಾಣಿಸಿಕೊಂಡಿತು. ಇದು ಸ್ಥಳೀಯರ ಗಮನಕ್ಕೆ ಬಂದ ಕೂಡಲೇ ಅರಣ್ಯ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದ ಅರಣ್ಯ ಸಿಬ್ಬಂದಿ ಬೆಂಕಿ ನಂದಿಸಿದರು. ಅಂದಾಜು ಐದು ಎಕರೆಯಷ್ಟು ಅರಣ್ಯದ ಪ್ರದೇಶಕ್ಕೆ ಹಾನಿಯಾಗಿದೆ' ಎಂದು ಸ್ಥಳೀಯ ನಿವಾಸಿ ಮಂಜುನಾಥ್ ಚಾಂದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಇಲ್ಲಿ ಬೆಂಕಿ ಬಿದ್ದಿರುವುದು ಇದೇ ಮೊದಲ ಬಾರಿ ಅಲ್ಲ. 15 ದಿನಗಳ ಹಿಂದೆಯೂ ಬೆಂಕಿ ಕಾಣಿಸಿಕೊಂಡಿತ್ತು. ಅರಣ್ಯಕ್ಕೆ ತಡೆಗೋಡೆಗಳನ್ನು ನಿರ್ಮಿಸಲಾಗಿದ್ದರೂ, ಇಂತಹ ಅವಘಡಗಳು ಸಂಭವಿಸುತ್ತಿವೆ' ಎಂದರು.

ಈ ಬಗ್ಗೆ ಪ್ರತಿಕ್ರಿಯೆಗೆ ಅರಣ್ಯಾಧಿಕಾರಿ ಲಭ್ಯರಾಗಲಿಲ್ಲ.

## ಚಂದ್ರಾ ಲೇಔಟ್ ಠಾಣೆ ಪೊಲೀಸರಿಂದ ಮೂವರ ಬಂಧನ

# ಸ್ನೇಹಿತೆ ಮಾತನಾಡಿಸಲು ಬಂದಿದ್ದವನ ಸುಲಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸ್ನೇಹಿತೆ ಮಾತನಾಡಿಸಲೆಂದು ಮನೆಗೆ ಬಂದಿದ್ದ ಸೈಫನ್ ಎಂಬುವರನ್ನು ಬೆದರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಮೂವರನ್ನು ಚಂದ್ರಾಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಕೆ.ಜಿ.ಹಳ್ಳಿಯ ಪಿಳ್ಳಣ್ಣ ಗಾರ್ಡನ್ ನಿವಾಸಿ ಜಾಕೀರ್ ಹುಸೇನ್ (30), ವೆಂಕಟೇಶಪುರದ ಶಾಬಾಜ್ ಖಾನ್ (25) ಹಾಗೂ ಫಾಜಿಲ್ (23) ಬಂಧಿತರು. ಅವರಿಂದ ₹ 3 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ

ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ ಹಾಗೂ ದ್ವಿಚಕ್ರ ವಾಹನ

ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಪಶ್ಚಿಮ ಬಂಗಾಳದ ಸೈಫನ್, ನಗರದ ಆಭರಣ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ತಮ್ಮ ರಾಜ್ಯದವರೇ ಆದ ಯುವತಿಯರಿಬ್ಬರ ಜೊತೆ ಸ್ನೇಹ ಬೆಳೆಸಿದ್ದರು. ಅವರಿಬ್ಬರು ಯುವತಿಯರು, ಚಂದ್ರಾ ಲೇಔಟ್ ಠಾಣೆ ವ್ಯಾಪ್ತಿಯ ಭೈರವೇಶ್ವರನಗರದಲ್ಲಿ ವಾಸವಿದ್ದರು. ಅವರನ್ನು ಮಾತನಾಡಿಸಲು ಸೈಫನ್, ಆಗಾಗ ಮನೆಗೆ ಬಂದು ಹೋಗುತ್ತಿದ್ದರು' ಎಂದೂ ತಿಳಿಸಿದರು.

**ಯುವತಿ ಜೊತೆ ಮಾತನಾಡಿದ್ದಕ್ಕೆ ಕೃತ್ಯ:** 'ಆರೋಪಿ ಜಾಕೀರ್ ಬಟ್ಟೆ ವ್ಯಾಪಾರಿ. ಸೈಫನ್ ಸ್ನೇಹಿತೆಯಾದ ಯುವತಿ ಜೊತೆಯೇ ಸ್ನೇಹ ಹೊಂದಿದ್ದ. ಸೈಫನ್ ಆಗಾಗ ಯುವತಿ ಮನೆಗೆ ಬಂದು ಹೋಗುತ್ತಿದ್ದರಿಂದ ಕೋಪಗೊಂಡಿದ್ದ ಆರೋಪಿ, ಸಹಚರರ ಜೊತೆ ಸೇರಿ ಕೃತ್ಯ ಎಸಗಿದ್ದ' ಎಂದು ಪೊಲೀಸರು ಹೇಳಿದರು.

'ಇದೇ 13ರಂದು ಮಳಿಗೆಯಲ್ಲಿದ್ದ ಚಿನ್ನಾಭರಣವನ್ನು ಗ್ರಾಹಕರಿಗೆ ತೋರಿಸಲೆಂದು ಹೊರಟಿದ್ದ ಸೈಫನ್, ಮಾರ್ಗಮಧ್ಯೆಯೇ ಸ್ನೇಹಿತೆಯರ ಮನೆಗೆ ಹೋಗಿದ್ದರು.'

ವಿಷಯ ಗೊತ್ತಾಗುತ್ತಿದ್ದಂತೆ ಮನೆಗೆ ಬಂದಿದ್ದ ಆರೋಪಿ, ಸೈಫನ್ ಜೊತೆ ಜಗಳ ಮಾಡಿದ್ದ. ಸೈಫನ್ ಬಳಿಯಿದ್ದ ಚಿನ್ನಾಭರಣ ಸುಲಿಗೆ ಮಾಡಿಕೊಂಡು ಆರೋಪಿ ಪರಾರಿಯಾಗಿದ್ದ.

# ಕೋವಿಡ್: ಸಜ್ಜಾಗಲು ಖಾಸಗಿ ಆಸ್ಪತ್ರೆಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವ ಕಾರಣ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಗುರುತಿಸಿರುವ ಸರ್ಕಾರ, ಸೋಂಕಿತರ ಸಂಖ್ಯೆ ಇನ್ನಷ್ಟು ಏರಿಕೆ ಕಂಡಲ್ಲಿ ಚಿಕಿತ್ಸೆಗೆ ಸಜ್ಜಾಗಲು ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿದೆ.

ಈ ಸಂಬಂಧ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರ ಜತೆಗೆ ಸಭೆ ನಡೆಸಿ, ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲು ತಿಳಿಸಲಾಗಿದೆ. ಕಳೆದ ವರ್ಷ ಜೂನ್ ಬಳಿಕ ನಗರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಏರುಗತಿ ಪಡೆಯುತ್ತಿದ್ದಂತೆ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿತ್ತು. ಹಲವರು ಚಿಕಿತ್ಸೆ ಸಂಬಂಧ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಹೀಗಾಗಿ, ಖಾಸಗಿ ಆಸ್ಪತ್ರೆಗಳನ್ನು ವಿಶ್ವಾಸಕ್ಕೆ ಪಡೆದು, ಶಿಫಾರಸು ಅನುಸಾರ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿತ್ತು. 73 ಮಧ್ಯಮ ಮತ್ತು ದೊಡ್ಡ ಗಾತ್ರದ ಆಸ್ಪತ್ರೆಯನ್ನು ಗುರುತಿಸಲಾಗಿತ್ತು. ಈಗ 200ಕ್ಕೂ ಅಧಿಕ ಹಾಸಿಗೆಗಳಿರುವ ಆಸ್ಪತ್ರೆಗಳನ್ನು ಮಾತ್ರ ಮೊದಲ ಹಂತದಲ್ಲಿ ಚಿಕಿತ್ಸೆಗೆ ಆಯ್ಕೆ ಮಾಡಲು ಸರ್ಕಾರ ಮುಂದಾಗಿದೆ.

ಸದ್ಯ ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿಕ್ಟೋರಿಯಾ, ಬೌರಿಂಗ್ ಮತ್ತು ಲೇಡಿ ಕರ್ಜನ್, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯ ಜತೆಗೆ ಆರೋಗ್ಯ ಇಲಾಖೆಯಡಿ ಸೇವೆ ನೀಡುತ್ತಿರುವ ಕೆ.ಸಿ. ಜನರಲ್, ಜಯನಗರ ಸಾರ್ವಜನಿಕ ಆಸ್ಪತ್ರೆ ಸೇರಿದಂತೆ 15 ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಹಾಸಿಗೆಗಳ ವ್ಯವಸ್ಥೆಯನ್ನು ಸಮರ್ಪಕವಾಗಿ ನೋಡಿಕೊಳ್ಳಲು ಪ್ರತಿ ಆಸ್ಪತ್ರೆಗೂ ತಲಾ ಒಬ್ಬರು ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ಕೋರಮಂಗಲದ ಒಳಾಂಗಣ ಕ್ರೀಡಾಂಗಣ, ಹಜ್ ಭವನ ಹಾಗೂ ಜಿಕೆವಿಕೆಯಲ್ಲಿ ಕೋವಿಡ್ ಆರೈಕೆ ಕೇಂದ್ರ ಸಜ್ಜುಗೊಳಿಸಿ, ಸೇವೆ ನೀಡಲು ಆರೋಗ್ಯ ಇಲಾಖೆಯು ಬಿಬಿಎಂಪಿಗೆ ಶಿಫಾರಸು ಮಾಡಿತ್ತು. ಈಗಾಗಲೇ ಕೋರಮಂಗಲದ ಒಳಾಂಗಣ ಕ್ರೀಡಾಂಗಣ ಚಿಕಿತ್ಸೆಗೆ ಸಜ್ಜಾಗಿದೆ.

'ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಾಣುತ್ತಿರುವುದರಿಂದ ಚಿಕಿತ್ಸೆಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ಬಹುತೇಕ ಪ್ರಕರಣಗಳಲ್ಲಿ ಸೋಂಕಿತರಿಗೆ ಲಕ್ಷಣಗಳು ಬಹಿರಂಗವಾಗಿ ಗೋಚರಿಸುತ್ತಿಲ್ಲ. ಹೀಗಾಗಿ, ಅಂತಹವರಿಗೆ ಕೋವಿಡ್ ಆರೈಕೆ ಕೇಂದ್ರಗಳಲ್ಲಿಯೇ ಚಿಕಿತ್ಸೆ ಒದಗಿಸಬಹುದು. ಖಾಸಗಿ ಆಸ್ಪತ್ರೆಗಳ ಜತೆಗೆ ಕೂಡ ಮಾತುಕತೆ ನಡೆಸಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಅರ್ಧಕ್ಕೂ ಅಧಿಕ ಹಾಸಿಗೆಗಳು ಭರ್ತಿಯಾದಲ್ಲಿ 200ಕ್ಕೂ ಅಧಿಕ ಹಾಸಿಗೆಗಳಿರುವ ಖಾಸಗಿ ಆಸ್ಪತ್ರೆಗಳನ್ನು ಬಳಸಿಕೊಳ್ಳಲಾಗುತ್ತದೆ. ಸದ್ಯ ತೀವ್ರ ನಿಗಾ ಘಟಕಗಳ (ಐಸಿಯು) ಹಾಸಿಗೆ ಕೂಡ ಕೊರತೆಯಿಲ್ಲ' ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

### 24 ಗಂಟೆ: 2 ಸಾವಿರ ದಾಟಿದ ಕೋವಿಡ್

**ಬೆಂಗಳೂರು:** ರಾಜ್ಯದಲ್ಲಿ ನಾಲ್ಕೂವರೆ ತಿಂಗಳ ಬಳಿಕ ಕೋವಿಡ್ ಪೀಡಿತರ ಸಂಖ್ಯೆ 24 ಗಂಟೆಗಳ ಅವಧಿಯಲ್ಲಿ 2 ಸಾವಿರ (2,010) ದಾಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟೂ ಏರಿಕೆ ಕಂಡಿದ್ದು, ಸದ್ಯ 15,595 ಮಂದಿ ಸೋಂಕಿತರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕಳೆದ ನ.14ರಂದು 2,154 ಪ್ರಕರಣಗಳು ವರದಿಯಾಗಿದ್ದವು. ಬಳಿಕ ಸೋಂಕಿತರ ಸಂಖ್ಯೆ ಇಳಿಮುಖ ಕಂಡಿತ್ತು. ಸತತ ಏಳು ದಿನಗಳು ಸಾವಿರದ ಗಡಿ ದಾಟಿದ್ದ ಹೊಸ ಪ್ರಕರಣಗಳ ಸಂಖ್ಯೆ, ಈಗ ಮತ್ತಷ್ಟು ಏರಿಕೆಯತ್ತ ಮುಖಮಾಡಿದೆ. ಸೋಂಕಿತರಲ್ಲಿ ಸದ್ಯ 136 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಮೂವರು ಹಾಗೂ ಹಾಸನ, ಕಲಬುರ್ಗಿಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,449ಕ್ಕೆ ತಲುಪಿದೆ.

**ಬೆಂಗಳೂರಿನಲ್ಲಿ ಏರಿಕೆ:** ಚಾಮರಾಜನಗರ ಬಿಟ್ಟು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಹೊಸದಾಗಿ 1,280 ಪ್ರಕರಣಗಳು ವರದಿಯಾಗಿವೆ. 5 ದಿನಗಳ ಅವಧಿಯಲ್ಲಿ 5,428 ಮಂದಿ ಸೋಂಕಿತರಾಗಿದ್ದಾರೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 4.19 ಲಕ್ಷ ದಾಟಿದೆ.

ಕಲಬುರ್ಗಿಯಲ್ಲಿ ಕೂಡ ಸೋಂಕಿತರ ಸಂಖ್ಯೆ ಏರುಗತಿ ಪಡೆದುಕೊಂಡಿದ್ದು, ಹೊಸದಾಗಿ 129 ಪ್ರಕರಣಗಳು ದೃಢಪಟ್ಟಿವೆ. ಮೈಸೂರಿನಲ್ಲಿ ಮತ್ತೆ 100 ಪ್ರಕರಣಗಳು ಖಚಿತಪಟ್ಟಿವೆ. ಅಲ್ಲಿ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 54,972ಕ್ಕೆ ತಲುಪಿದೆ. ಬೀದರ್‌ನಲ್ಲಿ 76, ದಕ್ಷಿಣ ಕನ್ನಡದಲ್ಲಿ 74, ತುಮಕೂರಿನಲ್ಲಿ 40 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

#### 'ವೈದ್ಯಕೀಯ ಕಾಲೇಜುಗಳಲ್ಲಿ ವ್ಯವಸ್ಥೆ'

'ಈ ಹಿಂದೆ ಕೋವಿಡ್ ಪ್ರಕರಣಗಳು ಏರಿಕೆ ಕಂಡಾಗ ಸರ್ಕಾರ ಶಿಫಾರಸು ಮಾಡಿದ ರೋಗಿಗಳಿಗೆ ಚಿಕಿತ್ಸೆ ಒದಗಿಸಲಾಗಿತ್ತು. ಪ್ರಕರಣಗಳ ಸಂಖ್ಯೆ ಇನ್ನಷ್ಟು ಹೆಚ್ಚಳವಾದಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಳ್ಳಲು ಸರ್ಕಾರ ತಿಳಿಸಿದೆ. ಮೊದಲು ವೈದ್ಯಕೀಯ ಕಾಲೇಜುಗಳಲ್ಲಿ ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲಿ ಕೂಡ ಹಾಸಿಗೆ ಭರ್ತಿಯಾದಲ್ಲಿ 200ಕ್ಕೂ ಅಧಿಕ ಹಾಸಿಗೆ ಒಳಗೊಂಡಿರುವ ಆಸ್ಪತ್ರೆಗಳನ್ನು ಗುರುತಿಸಿ, ಸೇವೆ ನೀಡಲಾಗುತ್ತದೆ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

'ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಕೆಲ ಪ್ರಕರಣಗಳ ಚಿಕಿತ್ಸಾ ವೆಚ್ಚವನ್ನು ಆಸ್ಪತ್ರೆಗಳಿಗೆ ಈವರೆಗೂ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಪಾವತಿಸಿಲ್ಲ. ಚಿಕಿತ್ಸಾ ವೆಚ್ಚವನ್ನು ಒದಗಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಲಾಗಿದೆ' ಎಂದು ಹೇಳಿದರು.

### ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

| | ವಿಶ್ವ | ಭಾರತ | ರಾಜ್ಯ |
|---|---|---|---|
| ಒಟ್ಟು ಪ್ರಕರಣ | 12.44 ಕೋಟಿ ▲ | 1.172 ಕೋಟಿ ▲ | 9,73,657 ▲ ಒಟ್ಟು ಸೋಂಕಿತರು |
| ಸಕ್ರಿಯ ಪ್ರಕರಣ | 2.12 ಕೋಟಿ ▼ | 3.62 ಲಕ್ಷ ▲ | 15,595 ▲ |
| ಗುಣಮುಖ | 10.04 ಕೋಟಿ ▲ | 1.11 ಕೋಟಿ ▲ | 9,45,594 ▲ |
| ಸಾವು | 27.38 ಲಕ್ಷ ▲ | 1.60 ಲಕ್ಷ ▲ | 12,449 ▲ |
| ದಿನದ ಏರಿಕೆ: ಹೊಸ ಪ್ರಕರಣ | 4.37 ಲಕ್ಷ ▼ | 40,611 ▼ | 2,010 ▼ |
| ದಿನದ ಏರಿಕೆ: ಗುಣಮುಖ | 4.68 ಲಕ್ಷ ▲ | 29,735 ▲ | 677 ▲ |
| ದಿನದ ಏರಿಕೆ: ಸಾವು | 6,188 ▼ | 197 ▼ | 05 ▲ |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 53,386 ಬ್ರೆಜಿಲ್ ▲; 45,748 ಅಮೆರಿಕ ▲; 15,798 ಫ್ರಾನ್ಸ್ ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 71.75 ಅಮೆರಿಕ ▼; 39.09 ಫ್ರಾನ್ಸ್ ▲; 12.54 ಬ್ರೆಜಿಲ್ ▲

ಎಲ್ಲಿ ಹೆಚ್ಚು ಸಾವು: 53,589 ಮಹಾರಾಷ್ಟ್ರ ▲; 12,618 ತಮಿಳುನಾಡು ▲; 10,963 ದೆಹಲಿ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 25.33 ಮಹಾರಾಷ್ಟ್ರ ▲; 11.05 ಕೇರಳ ▲; 8.94 ಆಂಧ್ರಪ್ರದೇಶ ▲

136 ಐಸಿಯುನಲ್ಲಿ ಇರುವವರು

ಪ್ರಜಾವಾಣಿ ಗ್ರಾಫಿಕ್ಸ್

### ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,19,838 ಒಟ್ಟು ಸೋಂಕಿತರು

4,04,515 ಗುಣಮುಖರಾದವರು; 10,766 ಸಕ್ರಿಯ ಪ್ರಕರಣ; 4,556 ಸಾವು

ಮಂಗಳವಾರದ ಏರಿಕೆ: 1,280 ದೃಢಪಟ್ಟ ಪ್ರಕರಣ; 399 ಗುಣಮುಖ; 3 ಸಾವು

### ಒಂದೇ ಕುಟುಂಬದ ಐವರಿಗೆ ಕೋವಿಡ್

**ಬೆಂಗಳೂರು:** ನಾಗರಬಾವಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಒಂದೇ ಕುಟುಂಬದ ಐವರು ಕೋವಿಡ್ ಸೋಂಕು ಹೊಂದಿರುವುದು ಮಂಗಳವಾರ ದೃಢಪಟ್ಟಿದೆ.

ಮೊದಲು ವೃದ್ಧರೊಬ್ಬರಿಗೆ ಕೋವಿಡ್ ದೃಢಪಟ್ಟಿತ್ತು. ಅವರ ಜೊತೆ ಸಂಪರ್ಕದಲ್ಲಿದ್ದ ನಾಲ್ವರಲ್ಲೂ ಸೋಂಕು ಪತ್ತೆಯಾಗಿದೆ. ಈ ಸಮುಚ್ಚಯದ ಮೊದಲ ಮಹಡಿಯ 40 ಮಂದಿಯನ್ನು ಕ್ವಾರಂಟೈನ್ ಮಾಡಲಾಗಿದೆ. ಸಮೀಪದಲ್ಲೇ ಇರುವ ಸರ್ಕಾರಿ ಶಾಲೆಯ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಕೊರೊನಾ ಪರೀಕ್ಷೆಗೆ ಒಳಪಡಿಸಲಾಗಿದೆ.

'ಸೋಂಕಿತರ ಸಂಖ್ಯೆ ಹೆಚ್ಚಿದಂತೆ ಕೋವಿಡ್ ಪರೀಕ್ಷೆಯ ಪ್ರಮಾಣವನ್ನೂ ಹೆಚ್ಚಿಸಲಾಗಿದೆ. ಮಂಗಳವಾರ ಒಟ್ಟು 40 ಸಾವಿರ ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಹೆಚ್ಚು ಪರೀಕ್ಷೆ ನಡೆಸಿ ಸೋಂಕು ಹರಡುವಿಕೆಯನ್ನು ತಡೆಯುವುದು ನಮ್ಮ ಉದ್ದೇಶ' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ. ಕೆ.ವಿಜಯೇಂದ್ರ ತಿಳಿಸಿದರು.

### ಹಲ್ಲೆ; ನೋಂದಣಿ ಸಂಖ್ಯೆಯಿಂದ ಸಿಕ್ಕಿಬಿದ್ದ ಆರೋಪಿಗಳು

**ಬೆಂಗಳೂರು:** ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯ ಬಂಕೊಂದರ ಕ್ಯಾಷಿಯರ್ ಮೇಲೆ ಹಲ್ಲೆ ಮಾಡಿ ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಫೆ. 24ರಂದು ನಡೆದಿದ್ದ ಕೃತ್ಯದ ದೃಶ್ಯ ಬಂಕ್‌ನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಕೃತ್ಯದ ಬಳಿಕ ಆರೋಪಿಗಳು ಕಾರಿನಲ್ಲಿ ಪರಾರಿಯಾಗಿದ್ದರು. ಅದರ ನೋಂದಣಿ ಸಂಖ್ಯೆ ಆಧರಿಸಿ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

# ₹ 900 ಪಡೆಯಲು ₹3.85 ಲಕ್ಷ ಕಳೆದುಕೊಂಡ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಬ್ಯಾಂಕ್ ಖಾತೆಯಿಂದ ಕಡಿತವಾಗಿದ್ದ ₹ 900 ವಾಪಸು ಪಡೆಯಲು ಸಹಾಯವಾಣಿ ಸಂಪರ್ಕಿಸಿದ್ದ ಗ್ರಾಹಕರೊಬ್ಬರು, ಆನ್‌ಲೈನ್ ವಂಚಕರ ಜಾಲದಲ್ಲಿ ಸಿಲುಕಿ ₹ 3.85 ಲಕ್ಷ ಕಳೆದುಕೊಂಡಿದ್ದಾರೆ.

ಈ ವಂಚನೆ ಸಂಬಂಧ ನಗರದ ಪಶ್ಚಿಮ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೂರುದಾರರು ಇಂಡಸ್ ಇಂಡ್ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದಾರೆ. ಅವರ ಖಾತೆಯಿಂದ ಮಾ. 16ರಂದು ₹ 900 ಕಡಿತವಾಗಿತ್ತು. ಆ ಬಗ್ಗೆ ವಿಚಾರಿಸಲು ಅವರು ಸಹಾಯವಾಣಿಗೆ ಕರೆ ಮಾಡಿದ್ದರು. ಪ್ರತಿನಿಧಿಗಳು ಕರೆ ಸ್ವೀಕರಿಸಿರಲಿಲ್ಲ. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲ ನಿಮಿಷಗಳ ನಂತರ ದೂರುದಾರರಿಗೆ ಕರೆ ಮಾಡಿದ್ದ ವಂಚಕರು, ಬ್ಯಾಂಕ್ ಪ್ರತಿನಿಧಿಗಳೆಂದು ಹೇಳಿಕೊಂಡಿದ್ದರು. ಸಮಸ್ಯೆ ಕೇಳಿದ್ದ ವಂಚಕರು, ₹ 900 ವಾಪಸು ನೀಡುವುದಾಗಿ ಹೇಳಿ ನಂಬಿಸಿದ್ದರು. ಬ್ಯಾಂಕ್ ಖಾತೆ ಮಾಹಿತಿ ಹಾಗೂ ಒನ್ ಟೈಂ ಪಾಸ್‌ವರ್ಡ್ (ಒಟಿಪಿ) ಪಡೆದಿದ್ದ ಆರೋಪಿಗಳು, ದೂರುದಾರ ಖಾತೆಯಿಂದ ಹಂತ ಹಂತವಾಗಿ ₹ 3.85 ಲಕ್ಷವನ್ನು ಬೇರೆ ಖಾತೆಗಳಿಗೆ ವರ್ಗಾಯಿಸಿಕೊಂಡು ವಂಚಿಸಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

'ಬ್ಯಾಂಕ್ ಸಹಾಯವಾಣಿ ಪ್ರತಿನಿಧಿಗಳ ಹೆಸರಿನಲ್ಲಿ ಆರೋಪಿಗಳು ವಂಚಿಸಿದ್ದಾರೆ. ಪ್ರಕರಣ ದಾಖಲಾಗುತ್ತಿದ್ದಂತೆ ಬ್ಯಾಂಕ್‌ಗೂ ಪತ್ರ ಬರೆದು ಮಾಹಿತಿ ಕೋರಲಾಗಿದೆ. ಹಣ ವರ್ಗಾವಣೆ ಆಗಿರುವ ಖಾತೆಗಳ ವಿವರಗಳನ್ನು ಸಂಗ್ರಹಿಸಿ ತನಿಖೆ ಮುಂದುವರಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

### ಹಿರಿಯ ರಾಜಕಾರಣಿ ಎಂ.ಪಿ.ನಾಡಗೌಡ ಅಭಿಮತ

# ಹಿಂದಿ ಹೇರಿಕೆ ವಿರೋಧಿಸಿದ್ದ ಲೋಹಿಯಾ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನೀವು ದುಬಾರಿ ಪ್ರಧಾನ ಮಂತ್ರಿ. ನಿಮಗಾಗಿಯೇ ಪ್ರತಿನಿತ್ಯ ₹25 ಸಾವಿರ ಖರ್ಚು ಮಾಡಲಾಗುತ್ತಿದೆ. ಇದರಿಂದ ಜನಸಾಮಾನ್ಯರಿಗೆ ಹೊರೆಯಾಗುತ್ತಿದೆ ಎಂದು ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ರಾಮಮನೋಹರ ಲೋಹಿಯಾ ಪತ್ರ ಬರೆದಿದ್ದರು. ಅಂತಹ ದಿಟ್ಟ, ನೇರ ನಡೆ, ನುಡಿಯ ವ್ಯಕ್ತಿತ್ವ ಅವರದ್ದು' ಎಂದು ಹಿರಿಯ ರಾಜಕಾರಣಿ ಎಂ.ಪಿ.ನಾಡಗೌಡ ಮಂಗಳವಾರ ಹೇಳಿದರು.

ಭಾರತ ಯಾತ್ರಾ ಕೇಂದ್ರ, ಲೋಕನಾಯಕ ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ, ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಹಾಗೂ ಡಾ.ರಾಮಮನೋಹರ ಲೋಹಿಯಾ ಸಮತಾ ವಿಚಾರ ಟ್ರಸ್ಟ್ ಜಂಟಿಯಾಗಿ ಆಯೋಜಿಸಿದ್ದ ಲೋಹಿಯಾ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚಿಂತಕ ಕೆ.ಎಸ್.ನಾಗರಾಜ್, 'ಪ್ರಾದೇಶಿಕ ಭಾಷೆಗೆ ಹೆಚ್ಚಿನ ಮನ್ನಣೆ ನೀಡಬೇಕೆಂದು ಲೋಹಿಯಾ ಅವರು ಆ ಕಾಲದಲ್ಲೇ ಒತ್ತಾಯಿಸಿದ್ದರು. ಆ ಮೂಲಕ ಹಿಂದಿ ಹೇರಿಕೆಯನ್ನು ಬಲವಾಗಿ ವಿರೋಧಿಸಿದ್ದರು. ಅವರು ತಮ್ಮ ಕೊನೆಯ ದಿನಗಳಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಇಡೀ ಮಾನವ ಕುಲಕ್ಕೆ ಮಾದರಿಯಾಗಿದ್ದರು. ಇಂದಿನ ರಾಜಕಾರಣಿಗಳಿಂದ ಇದನ್ನು ನಿರೀಕ್ಷಿಸಲು ಸಾಧ್ಯವೇ' ಎಂದು ಪ್ರಶ್ನಿಸಿದರು.

ಲೋಹಿಯಾ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಗಣ್ಯರು. (ಎಡದಿಂದ) ಕೆ.ವಿ. ನಾಗರಾಜ ಮೂರ್ತಿ, ಎಂ.ಪಿ.ನಾಡಗೌಡ, ಕೆ.ಎಸ್.ನಾಗರಾಜ್, ಟಿ.ಪ್ರಭಾಕರ್, ಅನಿತಾ ಪ್ರದೀಪ್ ವೆಂಕಟರಾಮ್, ಕಾಳಪ್ಪ, ಪ್ರದೀಪ್ ವೆಂಕಟರಾಮ್ ಹಾಗೂ ನರೇಂದ್ರ ಇದ್ದಾರೆ —ಪ್ರಜಾವಾಣಿ ಚಿತ್ರ

ಬರಹಗಾರ ಮಂಗ್ಳೂರ ವಿಜಯ, 'ವರ್ಷದಲ್ಲಿ ಒಂದು ದಿನ ಲೋಹಿಯಾ ಅವರನ್ನು ಸ್ಮರಿಸಿದರೆ ಸಾಲದು. ಅವರ ತತ್ವ, ಆದರ್ಶಗಳನ್ನು ಉಳಿಸಿ ಬೆಳೆಸುವ ಕೆಲಸ ಆಗಬೇಕು. ಅದನ್ನು ಮುಂದಿನ ಪೀಳಿಗೆಯವರಿಗೂ ವರ್ಗಾಯಿಸಬೇಕು. ಈ ಉದ್ದೇಶ ಸಾಕಾರಗೊಳ್ಳಬೇಕಾದರೆ ನಾವು ಮೊದಲು ಯುವಕರನ್ನು ಒಗ್ಗೂಡಿಸಬೇಕು. ಅವರ ಮನಸ್ಸಿನಲ್ಲಿ ಸಮಾಜವಾದದ ಬೀಜ ಬಿತ್ತಿ ಅದನ್ನು ಪೋಷಿಸಬೇಕು' ಎಂದು ಅಭಿಪ್ರಾಯಪಟ್ಟರು.

ಸಮಾಜವಾದಿ ಚಿಂತಕ ಕಾಳಪ್ಪ 'ಸರ್ವಾಧಿಕಾರಿ ಶಕ್ತಿಗಳು ಇಂದು ಕೇಕೆ ಹಾಕಿ ನಗುತ್ತಿವೆ. ಅವರ ಅಟ್ಟಹಾಸವನ್ನು ಅಡಗಿಸುವ ಶಕ್ತಿಯನ್ನು ಸಮಾಜವಾದ ಕಳೆದುಕೊಂಡಿಲ್ಲ. ಕಾಲಚಕ್ರ ತಿರುಗುತ್ತಲೇ ಇರುತ್ತದೆ. ನಿರಂಕುಶ ಪ್ರಭುತ್ವ ಕೊನೆಗೊಳ್ಳುವ ಕಾಲ ಸಮೀಪಿಸುತ್ತಿದೆ' ಎಂದರು.

ಪ್ರದೀಪ್ ವೆಂಕಟರಾಮ್, ಕೆ.ವಿ. ನಾಗರಾಜಮೂರ್ತಿ, ದಯಾನಂದ್ ಕೋಲಾರ, ಟಿ.ಪ್ರಭಾಕರ್, ಅಲಿಬಾಬಾ, ನರೇಂದ್ರ ಹಾಗೂ ಸುಷ್ಮಿತಾ ಇದ್ದರು.

## ನಗರದಲ್ಲಿ ಇಂದು

**ವಿಶ್ವ ಕ್ಷಯ ರೋಗ ದಿನ:** ಉದ್ಘಾಟನೆ–ಆರೋಗ್ಯ ಸಚಿವ ಕೆ.ಸುಧಾಕರ್, ಅಧ್ಯಕ್ಷತೆ–ಶಾಸಕ ದಿನೇಶ್ ಗುಂಡೂರಾವ್, ಆಯೋಜನೆ–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಸ್ಥಳ–ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಳಿಗ್ಗೆ 10

**'ಭುಂಗ್ರೂ' ನೀರು ಕೊಯ್ಲು ತಂತ್ರಗಾರಿಕೆ ಕುರಿತು ವಿಚಾರ ಸಂಕಿರಣ:** ಅತಿಥಿಗಳು–'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಬೆಂಗಳೂರು ವಿಶ್ವವಿದ್ಯಾಲಯದ ಭೂಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕ್ ಡಿ.ಹಂಜಗ್, ಮಾತನಾಡುವವರು–ಭುಂಗ್ರೂ ತಂತ್ರಜ್ಞಾನದ ಸಂಶೋಧಕ ಬಿಪ್ಲಬ್‌ಕೇತನ್ ಪಾಲ್, ಆರ್.ಉಪೇಂದ್ರ ಶೆಟ್ಟಿ, ಆಯೋಜನೆ, ಸ್ಥಳ–ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಆವರಣ, ಗುರುರಾಯನಪುರ, ರಾಮೋಹಳ್ಳಿ ಅಂಚೆ, ಬೆಂಗಳೂರು ದಕ್ಷಿಣ, ಮಧ್ಯಾಹ್ನ 3

**ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್ ಪ್ರಕಟಿಸಿರುವ ಪುಸ್ತಕಗಳ ಬಿಡುಗಡೆ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ, ಅಧ್ಯಕ್ಷತೆ–ಟ್ರಸ್ಟ್ ಅಧ್ಯಕ್ಷ ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿಗಳು–ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶ ಕುಮಾರ್ ಹೊಸಮನಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ, ಪುಸ್ತಕಗಳು–ಸಾತ್ವಿಕತೆಯ ಪ್ರತಿರೂಪ, ಇಹದ ತಳಹದಿಯಲ್ಲಿ ದಿಟದ ದರ್ಶನ, ಕೆ.ಎಸ್.ನರಸಿಂಹಸ್ವಾಮಿ ಸಾಹಿತ್ಯ ಸೂಚಿ, ಎಲ್ಲರಿಗೊಳಿತನು ಬಯಸಲಿ ಕವನ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5

**ಕೇಂದ್ರ ಸರ್ಕಾರದ ಹೊಸ ಇಂಟರ್ನೆಟ್ ನಿಯಂತ್ರಣ ನಿಯಮಗಳಿಂದ ಮಾಧ್ಯಮ ಸ್ವಾತಂತ್ರ್ಯಕ್ಕೆ ಹಾಗೂ ಓದುಗರ ಹಕ್ಕಿಗೆ ಧಕ್ಕೆ ಕುರಿತು ಸಾರ್ವಜನಿಕ ಸಭೆ:** ಮಾತನಾಡುವವರು–ಧನ್ಯ ರಾಜೇಂದ್ರನ್, ಶಿವಸುಂದರ್, ನವೀನ್ ಸೂರಿಂಜೆ, ಆಯೋಜನೆ–ಎಐಪಿಎಫ್, ಸ್ಥಳ–ಯುವಿಸಿಇ ಅಲುಮ್ನಿ ಅಸೋಸಿಯೇಷನ್ ಸಭೆ, ಸಂಜೆ 5

**'ನವೋಲ್ಲಾಸ ರಂಗಸಂಭ್ರಮ' ಸಮಾರೋಪ ಹಾಗೂ 'ಮೇಕಪ್ ನಾಣಿ' ಪ್ರಶಸ್ತಿ ಪ್ರದಾನ:** ಅತಿಥಿಗಳು–ರಂಗ ನಿರ್ದೇಶಕ ಬಿ.ವಿ.ರಾಜಾರಾಂ, ಹಿರಿಯ ನಟ ಬಾಬು ಹಿರಣ್ಣಯ್ಯ, ಹಿರಿಯ ಕಲಾವಿದೆ ಸುಧಾ ಬೆಳವಾಡಿ, ಪುರಸ್ಕೃತರು–ಬಿ.ಎಂ.ರಾಮಚಂದ್ರ, ಆಯೋಜನೆ–ಅಂತರಂಗ, ಸ್ಥಳ–ಸೇವಾಸದನ, ಮಲ್ಲೇಶ್ವರ, ಸಂಜೆ 6.30

### ಕೋವಿಡ್ 2ನೇ ಅಲೆ: ಸಚಿವ ಅಶ್ವತ್ಥನಾರಾಯಣ ಸಮಾಲೋಚನೆ

# 'ಪದವಿ: ಆಫ್‌ಲೈನ್ ತರಗತಿ, ಪರೀಕ್ಷೆ ಬದಲಾವಣೆ ಇಲ್ಲ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೋವಿಡ್ ಕಾರಣಕ್ಕೆ ಪದವಿ ಕೋರ್ಸ್‌ಗಳಿಗೆ ಕಾಲೇಜುಗಳಲ್ಲಿ ನೇರ ತರಗತಿಗಳನ್ನು (ಆಫ್‌ಲೈನ್) ಸ್ಥಗಿತಗೊಳಿಸುವುದಿಲ್ಲ. ಪರೀಕ್ಷೆಗಳೂ ನಿಗದಿತ ವೇಳಾಪಟ್ಟಿಯಂತೆಯೇ ನಡೆಯಲಿವೆ' ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಕೋವಿಡ್ ಪ್ರಕರಣಗಳ ಏರಿಕೆ ಹಿನ್ನೆಲೆಯಲ್ಲಿ ಪರಿಸ್ಥಿತಿ ಅವಲೋಕಿಸಿದ ಅವರು, 'ವಿವಿಧ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಈಗ ನಿಗದಿಯಾಗಿರುವಂತೆ ಪರೀಕ್ಷೆಗಳು ನಡೆಯಲಿವೆ. ಸರ್ಕಾರ ಹೊರಡಿಸಿರುವ ಮಾದರಿ ವೇಳಾಪಟ್ಟಿಯಂತೆ, ವಿಶ್ವವಿದ್ಯಾಲಯಗಳ ನಿಗದಿತ ವೇಳಾಪಟ್ಟಿ ಪ್ರಕಾರ ಆಫ್ ಲೈನ್ ತರಗತಿಗಳು ಮುಂದುವರಿಯಲಿವೆ' ಎಂದು ತಿಳಿಸಿದರು.

'ಕೋವಿಡ್ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಲು ಎಲ್ಲ ವಿಶ್ವವಿದ್ಯಾಲಯಗಳಿಗೆ ಹಾಗೂ ಕಾಲೇಜುಗಳಿಗೆ ಸೂಚನೆ ನೀಡಲಾಗಿದೆ' ಎಂದರು.

'ವಿಶ್ವವಿದ್ಯಾಲಯಗಳು, ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳಲ್ಲಿ 2020-21ನೇ ಸಾಲಿನ ಶೈಕ್ಷಣಿಕ ಚಟುವಟಿಕೆ ಮೇಲೆ ಎರಡನೇ ಅಲೆ ಬೀರುವ ಪರಿಣಾಮಗಳ ಕುರಿತು ಸಮಾಲೋಚನೆ ನಡೆಸಿದ್ದೇನೆ. ಮುಖ್ಯಮಂತ್ರಿ ಜತೆಗೂ ಚರ್ಚಿಸಿದ್ದೇನೆ. ಈಗ ನಡೆಯುತ್ತಿರುವ ಹೈಯರ್ ಸೆಮಿಸ್ಟರ್ ಪರೀಕ್ಷೆಗಳ ಬಗ್ಗೆ ಮತ್ತು ನಡೆಯಬೇಕಾದ ಲೋಯರ್ ಸೆಮಿಸ್ಟರ್ ಪರೀಕ್ಷೆಗಳ ಬಗ್ಗೆ ಚರ್ಚಿಸಲಾಗಿದೆ. ವಿಶ್ವವಿದ್ಯಾಲಯಗಳಿಂದ ಪಡೆದ ಮಾಹಿತಿಯನ್ನು ಪರಾಮರ್ಶಿಸಲಾಯಿತು' ಎಂದರು.

ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆಯಡಿ ನಡೆಸುತ್ತಿರುವ ಹಾಸ್ಟೆಲ್‌ಗಳನ್ನು ಮುಂದುವರಿಸಲು ಆಯಾ ಇಲಾಖೆಗಳನ್ನು ಕೋರಲಾಗುವುದು. ವಿಶ್ವವಿದ್ಯಾಲಯಗಳ ಕ್ಯಾಂಪಸ್, ಮಹಾವಿದ್ಯಾಲಯಗಳು ಹಾಗೂ ಹಾಸ್ಟೆಲ್‌ಗಳಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದೂ ಸೂಚಿಸಿದರು.

ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ.ಕುಮಾರನಾಯ್ಕ್, ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಡಾ. ತಿಮ್ಮೇಗೌಡ, ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲ ಜೋಷಿ, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪ್ರದೀಪ್ ಸಭೆಯಲ್ಲಿದ್ದರು.

### ಕಾನೂನು ವಿ.ವಿ ಪರೀಕ್ಷೆ ಮುಂದೂಡಲು ಆಗ್ರಹ

**ಬೆಂಗಳೂರು:** 'ಕೊರೊನಾ ಎರಡನೇ ಅಲೆ ಶುರುವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪರೀಕ್ಷೆಗಳನ್ನು ನಡೆಸುವುದು ಸೂಕ್ತವಲ್ಲ. ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಕಾನೂನು ವಿಶ್ವವಿದ್ಯಾಲಯವು ಇದೇ 26ರಿಂದ ನಡೆಸಲು ನಿರ್ಧರಿಸಿರುವ ಪರೀಕ್ಷೆಗಳನ್ನು ಮುಂದೂಡಬೇಕು' ಎಂದು ಅಖಿಲ ಕರ್ನಾಟಕ ಸ್ನಾತಕೋತ್ತರ ಪದವೀಧರ ವೇದಿಕೆಯ ಕಾರ್ಯಾಧ್ಯಕ್ಷೆ ಬಿ.ಎನ್.ದಿವ್ಯ ಆಗ್ರಹಿಸಿದ್ದಾರೆ.

'ಕರ್ನಾಟಕದಲ್ಲಿರುವ ಕಾನೂನು ಕಾಲೇಜುಗಳಲ್ಲಿ ತಮಿಳುನಾಡು, ಕೇರಳ ಹಾಗೂ ಇನ್ನಿತರ ರಾಜ್ಯಗಳ ವಿದ್ಯಾರ್ಥಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವರು ಪರೀಕ್ಷೆಯ ವೇಳೆ ತಮ್ಮ ಊರುಗಳಿಂದ ನಗರಕ್ಕೆ ಬರುತ್ತಾರೆ. ಹೋಟೆಲ್ ಹಾಗೂ ಲಾಡ್ಜ್‌ಗಳಲ್ಲಿ ವಾಸವಿರುತ್ತಾರೆ. ಇವರು ಪರೀಕ್ಷೆಗೆ ಹಾಜರಾದರೆ ಎಲ್ಲಿ ಕೊರೊನಾ ಹರಡುವುದೊ ಎಂಬ ಭಯ ಎಲ್ಲರಲ್ಲೂ ಆವರಿಸಿದೆ. ಕಾನೂನು ಕಾಲೇಜಿನ ಸಿಬ್ಬಂದಿ ಕೂಡ ಆತಂಕದಲ್ಲೇ ಪರೀಕ್ಷೆಗಳನ್ನು ನಡೆಸುವ ಅನಿವಾರ್ಯತೆಗೆ ಸಿಲುಕಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಕೋವಿಡ್ ಪರೀಕ್ಷಾ ಪ್ರಮಾಣ ಪತ್ರ ತರುವುದನ್ನು ಕಡ್ಡಾಯಗೊಳಿಸಿಲ್ಲ. ಜೊತೆಗೆ ವಿಶ್ವವಿದ್ಯಾಲಯವು ಅಗತ್ಯ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವಲ್ಲೂ ವಿಫಲವಾಗಿದೆ. ಇಷ್ಟೆಲ್ಲಾ ಅವಾಂತರಗಳ ನಡುವೆಯೇ ಪರೀಕ್ಷೆ ನಡೆಸುವುದು ಎಷ್ಟು ಸರಿ' ಎಂದು ಪ್ರಶ್ನಿಸಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ಅಕ್ಷಯಗೆ 'ಈ ಹೊತ್ತಿಗೆ ಪ್ರಶಸ್ತಿ'

ಅಕ್ಷಯ ಪಂಡಿತ್

**ಬೆಂಗಳೂರು:** ಸಾಗರದ ಅಕ್ಷಯ ಪಂಡಿತ್ ಅವರ 'ಬಯಲಲಿ ತೇಲುತ ತಾನು' ಅಪ್ರಕಟಿತ ಕಥಾ ಸಂಕಲನವು 'ಈ ಹೊತ್ತಿಗೆ ಕಥಾ ಪ್ರಶಸ್ತಿ'ಗೆ ಆಯ್ಕೆಯಾಗಿದೆ. ಪ್ರಶಸ್ತಿ ₹ 10 ಸಾವಿರ ಹಾಗೂ ಫಲಕವನ್ನು ಒಳಗೊಂಡಿದೆ.

ವಿಮರ್ಶಕ ಡಾ.ಓ.ಎಲ್. ನಾಗಭೂಷಣಸ್ವಾಮಿ ಅವರು ತೀರ್ಪುಗಾರರಾಗಿದ್ದರು. 26 ವಯೋಮಿತಿ ಒಳಗಿನವರಿಗೆ ಆಯೋಜಿಸಿದ ಕಥಾ ಸ್ಪರ್ಧೆಗೆ ಯೋಗ್ಯವಾದ ಕಥೆಗಳು ಬರದ ಕಾರಣ ಬಹುಮಾನವನ್ನು ನೀಡುತ್ತಿಲ್ಲ. ಇದಕ್ಕೆ ಪರ್ಯಾಯವಾಗಿ ಮುಂದಿನ ದಿನಗಳಲ್ಲಿ ಎರಡು ದಿನಗಳ ಆನ್‌ಲೈನ್ ಕಥಾ ಕಮ್ಮಟವನ್ನು ಏರ್ಪಡಿಸಲಾಗುತ್ತದೆ. ಈ ವರ್ಷ ಸ್ಪರ್ಧೆಯಲ್ಲಿ ಭಾಗವಹಿಸಿದ ಕಥೆಗಾರರಿಗೆ ಉಚಿತ ಪ್ರವೇಶ ನೀಡುವ ಮೂಲಕ ಅಗತ್ಯ ಮಾರ್ಗದರ್ಶನ ಒದಗಿಸಲಾಗುತ್ತದೆ. ಈ ಮೂಲಕ ಪ್ರೋತ್ಸಾಹಿಸಲಾಗುತ್ತದೆ. ಸಾಹಿತಿ ಚಿದಂಬರ ನರೇಂದ್ರ ಅವರು ಈ ವಿಭಾಗದ ತೀರ್ಪುಗಾರರಾಗಿದ್ದರು ಎಂದು ಈ ಹೊತ್ತಿಗೆ ವ್ಯವಸ್ಥಾಪಕ ಟ್ರಸ್ಟಿ ಜಯಲಕ್ಷ್ಮಿ ಪಾಟೀಲ್ ತಿಳಿಸಿದ್ದಾರೆ.

ಬೆಂಗಳೂರಿನ ಜೆ.ಪಿ.ನಗರದ ಕಪ್ಪಣ್ಣ ಅಂಗಳ ಸಭಾಂಗಣದಲ್ಲಿ ಮೇ 1ರಂದು ಹೊನಲು ಕಾರ್ಯಕ್ರಮ ನಡೆಯಲಿದ್ದು, ಅಂದೇ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

### 'ಡಿಜಿಟಲ್ ಏಜ್' ಕೃತಿಗೆ ಬೇಡಿಕೆ

**ಬೆಂಗಳೂರು:** ಲೇಖಕ ನಿತಿನ್ ಸೇಥ್ ಹೊರತಂದಿರುವ 'ವಿನ್ನಿಂಗ್ ಇನ್ ದಿ ಡಿಜಿಟಲ್ ಏಜ್; ಸೆವೆನ್ ಬಿಲ್ಡಿಂಗ್ ಬ್ಲಾಕ್ಸ್ ಆಫ್ ಸಕ್ಸಸ್‌ಫುಲ್ ಡಿಜಿಟಲ್ ಟ್ರಾನ್ಸ್‌ಫಾರ್ಮೇಷನ್' ಪುಸ್ತಕವು ಅಮೆಜಾನ್‌ನಲ್ಲಿ ಹೆಚ್ಚು ಮಾರಾಟವಾದ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಭಾರತದ ಡಿಜಿಟಲ್ ರೂಪಾಂತರದ ಯಶೋಗಾಥೆಯನ್ನು ಈ ಕೃತಿಯಲ್ಲಿ ಅನಾವರಣಗೊಳಿಸಲಾಗಿದೆ.

### ನಿವೇಶನ ಖರೀದಿಗೆ ಅವಕಾಶ

**ಬೆಂಗಳೂರು:** ಕೆಎನ್‌ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಮೈಸೂರು ರಸ್ತೆಯ ಬಳಿ 23 ಎಕರೆಯಲ್ಲಿರುವ 'ಕೆಎನ್‌ಎಸ್ ನೆಸ್ಟರ್' ಬಡಾವಣೆಯಲ್ಲಿ ನಿವೇಶನಗಳ ಖರೀದಿಗೆ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿದೆ. ಸದರಿ ಬಡಾವಣೆಯು ರಾಜರಾಜೇಶ್ವರಿ ದಂತ ಕಾಲೇಜು ಹಾಗೂ ಕೆಂಗೇರಿ ಮೆಟ್ರೊ ನಿಲ್ದಾಣಕ್ಕೆ ಸಮೀಪದಲ್ಲಿದೆ. ಬಡಾವಣೆಯಲ್ಲಿ ಒಟ್ಟು 404 ವಿವಿಧ ಅಳತೆಯ ನಿವೇಶನಗಳು ಲಭ್ಯ. ಆಸಕ್ತರು ನಿವೇಶನ ಖರೀದಿಗೆ www.knsnester.com ವೆಬ್‌ಸೈಟ್ ಮೂಲಕ ನೋಂದಾಯಿಸಿಕೊಳ್ಳಬಹುದು ಹಾಗೂ 8880662233 ಕರೆ ಮಾಡಬಹುದು.

ಕರ್ನಾಟಕ ದಲಿತ ಉದ್ದಿಮೆದಾರರ ಸಂಘವು ನಗರದಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪುಷ್ಪನಮನ ಸಲ್ಲಿಸಿದರು. ಶಾಸಕ ಎಚ್.ಕೆ.ಕುಮಾರಸ್ವಾಮಿ, ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್, ಶಾಸಕ ಎಂ.ಚಂದ್ರಪ್ಪ, ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಹಾಗೂ ಸಂಘದ ಪದಾಧಿಕಾರಿಗಳು ಇದ್ದರು

### ಸಚಿವರಿಂದಲೇ ಭೂಕಬಳಿಕೆ– ಪರಿಷತ್ತಿನಲ್ಲಿ ಕಾಂಗ್ರೆಸ್ ಆಪಾದನೆ

# ಬೈರತಿ ವಿರುದ್ಧ ಆರೋಪ: ತನಿಖೆ– ಸಚಿವ ಅಶೋಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆ.ಆರ್. ಪುರ ಕ್ಷೇತ್ರದ ವ್ಯಾಪ್ತಿಯ ಮಹದೇವಪುರ ಗ್ರಾಮದ ಸರ್ವೆ ನಂಬರ್ 199ರ ಸರ್ಕಾರಿ ಜಮೀನನ್ನು ಸ್ಥಳೀಯ ಶಾಸಕರೂ ಆಗಿರುವ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಮತ್ತು ಅವರ ಬೆಂಬಲಿಗರು ಕಬಳಿಸಿ, ಮಾರಾಟ ಮಾಡಿದ್ದಾರೆ ಎಂಬ ಆರೋಪದ ಕುರಿತು ತನಿಖೆ ನಡೆಸಿ, ಕ್ರಮ ಕೈಗೊಳ್ಳುವುದಾಗಿ ಕಂದಾಯ ಸಚಿವ ಆರ್. ಅಶೋಕ ಭರವಸೆ ನೀಡಿದರು.

ಕಾಂಗ್ರೆಸ್‌ನ ಎಂ. ನಾರಾಯಣಸ್ವಾಮಿ ನಿಯಮ 72ರಡಿ ಮಂಡಿಸಿದ್ದ ಸೂಚನೆಗೆ ಮಂಗಳವಾರ ವಿಧಾನ ಪರಿಷತ್‌ನಲ್ಲಿ ಉತ್ತರ ನೀಡಿದ ಕಂದಾಯ ಸಚಿವರು, 'ಮಹದೇವಪುರ ಗ್ರಾಮದ ಸ.ನಂ. 199ರಲ್ಲಿ 7 ಎಕರೆ 18 ಗುಂಟೆ ಸರ್ಕಾರಿ ಜಮೀನು ಇದೆ. ಈ ಪೈಕಿ 20 ಗುಂಟೆಯನ್ನು ಸರ್ಕಾರಿ ಶಾಲೆಗೆ ಹಾಗೂ 2 ಎಕರೆ 28 ಗುಂಟೆಯನ್ನು ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಕಾಯ್ದಿರಿಸಲಾಗಿದೆ' ಎಂದರು.

2 ಎಕರೆ ವಿಸ್ತೀರ್ಣದಲ್ಲಿ ಹಲವು ವರ್ಷಗಳ ಹಿಂದಿನಿಂದಲೂ 100 ಮನೆಗಳು ಇವೆ. ಇತ್ತೀಚೆಗೆ ಕೆಲವು ಮನೆಗಳು ನಿರ್ಮಾಣವಾಗಿರುವುದು ಕಂಡುಬಂದಿದೆ. ಇತ್ತೀಚಿನ ದಿನಗಳಲ್ಲಿ ಅತಿಕ್ರಮಣ ನಡೆಸಿ, ನಿರ್ಮಿಸಿರುವ ಕಟ್ಟಡಗಳನ್ನು ಗುರುತಿಸಿ, ತೆರವು ಮಾಡಲಾಗುವುದು ಎಂದು ತಿಳಿಸಿದರು.

**ಸಚಿವರ ವಿರುದ್ಧ ಆರೋಪ:** 'ನಗರಾಭಿವೃದ್ಧಿ ಸಚಿವರು ಮತ್ತು ಅವರ ಬೆಂಬಲಿಗರು ಸರ್ಕಾರಿ ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಿ, ಮಾರಾಟ ಮಾಡಿದ್ದಾರೆ. ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಿ ಬಾಡಿಗೆಗೆ ಕೊಟ್ಟಿದ್ದಾರೆ. ತಹಶೀಲ್ದಾರ್, ಉಪ ವಿಭಾಗಾಧಿಕಾರಿ, ಜಿಲ್ಲಾಧಿಕಾರಿ, ಬಿಬಿಎಂಪಿ ಅಧಿಕಾರಿಗಳಿಗೆ ದಾಖಲೆಯೊಂದಿಗೆ ದೂರು ನೀಡಿದ್ದೇನೆ. ಒಂದು ವರ್ಷದಿಂದ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ನಾರಾಯಣಸ್ವಾಮಿ ಆರೋಪಿಸಿದರು.

ಸಚಿವರೇ ಭೂಕಬಳಿಕೆ ನಡೆಸುತ್ತಿರುವ ಕುರಿತು ಲೋಕಾಯುಕ್ತರಿಗೂ ದೂರು ನೀಡಲಾಗಿದೆ. ಆದರೆ, ನೋಟಿಸ್ ಜಾರಿಮಾಡಿದ ಹೊರತಾಗಿ ಯಾವುದೇ ಕ್ರಮ ಕೈಗೊಂಡಿಲ್ಲ. ಈಗ ಕೆಳಹಂತದ ಅಧಿಕಾರಿಗಳು ಸಚಿವರ ಪರವಾಗಿ ವರದಿ ನೀಡುತ್ತಾರೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಿಸಿದರು.

'ತನಿಖೆಯ ಜತೆಗೆ ಭೂಮಾಪನ ನಡೆಸಲಾಗುವುದು. ಒತ್ತುವರಿ ಕಂಡುಬಂದಲ್ಲಿ ಅಂತಹ ಎಲ್ಲ ಕಟ್ಟಡಗಳನ್ನೂ ತೆರವುಗೊಳಿಸಲಾಗುವುದು' ಎಂದು ಅಶೋಕ ಭರವಸೆ ನೀಡಿದರು.

# ಶಾಸಕರ ನಿಧಿ ಬಿಡುಗಡೆಗೆ ಆಗ್ರಹ

**ಬೆಂಗಳೂರು:** 'ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಎರಡು ವರ್ಷಗಳ ಅನುದಾನದಲ್ಲಿ ₹ 1.71 ಕೋಟಿ ಬಿಡುಗಡೆಗೆ ಬಾಕಿ ಇದೆ. ತಕ್ಷಣ ಈ ಮೊತ್ತ ಬಿಡುಗಡೆ ಮಾಡಬೇಕು' ಎಂದು ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಒತ್ತಾಯಿಸಿದರು.

ವಿಧಾನ ಪರಿಷತ್ ಕಲಾಪ ನಡೆಯುತ್ತಿದ್ದ ಸಂದರ್ಭದಲ್ಲಿ ಸದನದಲ್ಲಿ ಮುಖ್ಯಮಂತ್ರಿ ಉಪಸ್ಥಿತರಿದ್ದ ಸಂದರ್ಭದಲ್ಲಿ ಅವರು ಈ ವಿಷಯ ಪ್ರಸ್ತಾಪಿಸಿದರು. ಆದರೆ, ಅವರು ವಿಷಯ ಪ್ರಸ್ತಾವ ಮಂಡಿಸುತ್ತಿದ್ದಂತೆ ತುರ್ತು ಕಾರ್ಯದ ನಿಮಿತ್ತ ಮುಖ್ಯಮಂತ್ರಿ ಸದನದಿಂದ ಹೊರಗೆ ಹೋದರು!

ಆಗ ಕಾಂಗ್ರೆಸ್ಸಿನ ಪ್ರತಾಪಚಂದ್ರ ಶೆಟ್ಟಿ, 'ಶಾಸಕರ ನಿಧಿಯ ವಿಷಯ ಪ್ರಸ್ತಾಪ ಆಗುತ್ತಿದ್ದಂತೆ ಮುಖ್ಯಮಂತ್ರಿ ಸಭಾತ್ಯಾಗ ಮಾಡಿದ್ದಾರೆ' ಎಂದು ಹಾಸ್ಯ ಚಟಾಕಿ ಹಾರಿಸಿದರು.

'ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ 2018-19ರಲ್ಲಿ ₹ 1.64 ಕೋಟಿ, 2019-20ರಲ್ಲಿ ₹ 65 ಲಕ್ಷ, 2020-21ರಲ್ಲಿ ₹ 2 ಕೋಟಿ ಬಿಡುಗಡೆ ಆಗಿದೆ. ಇನ್ನೂ ₹ 1.71 ಕೋಟಿ ಬಾಕಿಯಿದೆ. ಕ್ಷೇತ್ರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಈ ಅನುದಾನ ಅಗತ್ಯವಿದೆ. ಹೀಗಾಗಿ ತಕ್ಷಣ ಬಾಕಿ ಮೊತ್ತ ಬಿಡುಗಡೆ ಮಾಡಬೇಕು' ಎಂದೂ ಶ್ರೀಕಂಠೇಗೌಡ ಒತ್ತಾಯಿಸಿದರು.

# 'ರೈತರಿಗೆ ನೇರ ನಗದು ಒದಗಿಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೃಷಿ ಮತ್ತು ಸಂಬಂಧಿತ ಇಲಾಖೆಗಳಲ್ಲಿ ಯಂತ್ರೋಪಕರಣ, ಸಲಕರಣೆಗಳ ಖರೀದಿಗೆ ಸಹಾಯಧನ ನೀಡುವ ಯೋಜನೆಗಳನ್ನು ಕೈಬಿಟ್ಟು ನೇರವಾಗಿ ರೈತರಿಗೆ ನಗದು ರೂಪದ ನೆರವು ನೀಡುವ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಕಾಂಗ್ರೆಸ್‌ನ ಬಸವರಾಜ ಪಾಟೀಲ್ ಇಟಗಿ ಮಂಗಳವಾರ ಆಗ್ರಹಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಅವರು, 'ಯಂತ್ರೋಪಕರಣ ಖರೀದಿಗೆ ರೈತರಿಗೆ ಸಹಾಯಧನ ನೀಡುವ ಯೋಜನೆಗಳ ಮೂಲಕ ಸರ್ಕಾರದ ಹಣ ದಲ್ಲಾಳಿಗಳ ಪಾಲಾಗುತ್ತಿದೆ. ಇಂತಹ ಯಾವ ಯೋಜನೆಯೂ ರೈತರಿಗೆ ಬೇಕಿಲ್ಲ. ಈ ಎಲ್ಲ ಯೋಜನೆಗಳನ್ನು ರದ್ದು ಮಾಡಿ, ಪ್ರತಿ ಎಕರೆ ಜಮೀನಿನ ವ್ಯವಸಾಯದ ವೆಚ್ಚದ ಒಂದು ಪಾಲನ್ನು ರೈತರ ಖಾತೆಗೆ ವರ್ಗಾಯಿಸುವ ವ್ಯವಸ್ಥೆ ಆದರೆ ಅವರಿಗೆ ಶಕ್ತಿ ತುಂಬಲು ಸಾಧ್ಯ' ಎಂದರು.

### ಧರಣಿ ಮುಂದುವರಿಸಿದ ಕಾಂಗ್ರೆಸ್ • ಎರಡನೇ ದಿನವೂ ನಡೆಯದ ಕಲಾಪ

# 'ಕೈ' ಪಟ್ಟು: ಕಲಾಪಕ್ಕೆ ಬಿಕ್ಕಟ್ಟು

ಪ್ರಜಾವಾಣಿ ವಾರ್ತೆ

ವಿಧಾನ ಮಂಡಲದಲ್ಲಿ

**ಬೆಂಗಳೂರು:** ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಸಂಬಂಧಿಸಿದ್ದೆನ್ನಲಾದ ಸಿ.ಡಿ ಪ್ರಕರಣದ ತನಿಖೆಯನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಉಸ್ತುವಾರಿಯಲ್ಲೇ ನಡೆಸಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ಮಂಗಳವಾರ ಎರಡನೇ ದಿನವೂ ಧರಣಿ ನಡೆಸಿದರು.

ಧರಣಿ ಕಾರಣಕ್ಕೆ ಕಲಾಪವನ್ನು ಮೂರು ಬಾರಿ ಮುಂದೂಡಲಾಯಿತು. ಕೂಗಾಟದ ಮಧ್ಯೆ ಮೂರು ಮಸೂದೆಗಳಿಗೆ ಅಂಗೀಕಾರ ಪಡೆದಿದ್ದು ಬಿಟ್ಟರೆ ಉಳಿದ ಕಲಾಪವನ್ನು ಗದ್ದಲವೇ ತಿಂದುಬಿಟ್ಟಿತು.

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಉಸ್ತುವಾರಿಯಲ್ಲಿ 'ಸ್ವತಂತ್ರ ತನಿಖೆ' ನಡೆಸಬೇಕು ಎಂಬ ಸೋಮವಾರದ ಪಟ್ಟನ್ನು ಸಡಿಲಿಸಿದ ಕಾಂಗ್ರೆಸ್, ಎಸ್‌ಐಟಿ ತನಿಖೆ ನಡೆಯಲಿ, ಆದರೆ ಮೇಲುಸ್ತುವಾರಿ ಹೈಕೋರ್ಟ್ ನ್ಯಾಯಮೂರ್ತಿ ಅವರದ್ದೇ ಆಗಿರಬೇಕು ಎಂದು ಒತ್ತಾಯಿಸಿತು. ಸರ್ಕಾರ ಅದಕ್ಕೆ ಒಪ್ಪಲಿಲ್ಲ. ಸಂತಾಪ ಸೂಚನೆ ಮುಗಿಯುತ್ತಿದ್ದಂತೆ ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಆರಂಭಿಸಿದ ಕಾಂಗ್ರೆಸ್ ಸದಸ್ಯರು, ಸಿ.ಡಿಗಳನ್ನು ಪ್ರದರ್ಶಿಸಿ ಘೋಷಣೆ ಕೂಗಲು ಆರಂಭಿಸಿದರು.

'ಸರ್ಕಾರದ ವಿರುದ್ಧ ವಿರೋಧ ಇದ್ದರೆ, ಸದನದ ಹೊರಗೆ ಪ್ರತಿಭಟನೆ ಮಾಡಿ. ಇಲ್ಲಿ ಕಲಾಪ ನಡೆಯಲು ಬಿಡಿ' ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮನವಿ ಮಾಡಿದರು. ಈ ಮಧ್ಯೆ ಕಲಾಪ ಮುಂದೂಡಿ ಸಂಧಾನವನ್ನೂ ಕಾಗೇರಿ ನಡೆಸಿದರು. ಕಾಂಗ್ರೆಸ್ ತನ್ನ ಪಟ್ಟು ಸಡಿಲಿಸಲಿಲ್ಲ. ಮತ್ತೆ ಕಲಾಪ ಸೇರಿದಾಗಲೂ ಧರಣಿ, ಧಿಕ್ಕಾರ ಮುಂದುವರಿಯಿತು.

'ಸತ್ಯ ಹೊರಬಂದು ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಎನ್ನುವುದು ನಮ್ಮ ಉದ್ದೇಶ. ಬೇಡಿಕೆ ಒಪ್ಪುವವರೆಗೂ ಧರಣಿ ಬಿಟ್ಟು ಕದಲುವ ಪ್ರಶ್ನೆಯೇ ಇಲ್ಲ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಸಿ.ಡಿ ಸರ್ಕಾರಕ್ಕೆ ಧಿಕ್ಕಾರ', 'ಬ್ಲೂಬಾಯ್ಸ್', 'ಸಿ.ಡಿ ಸಂಸ್ಕೃತಿ– ಹಿಂದೂ ಸಂಸ್ಕೃತಿಯಲ್ಲ' ಎಂದು ಕಾಂಗ್ರೆಸ್ ಸದಸ್ಯರು ಘೋಷಣೆ ಕೂಗಿದರು. ಇದರಿಂದ ಹುರುಪುಗೊಂಡ ಸಿದ್ದರಾಮಯ್ಯ ಅವರೂ 'ಅಯ್ಯಯ್ಯೋ.. ಸರ್ಕಾರ ಅಯ್ಯಯ್ಯೋ..' ಎಂದು ಕೂಗು ಹಾಕಿದರು.

> **ಬಿಎಸಿಗೆ ಬರಲ್ಲ, ಒಂದು ರಾಷ್ಟ್ರ ಒಂದು ಚುನಾವಣೆ ಚರ್ಚೆ ನಡೆಯಲು ಬಿಟ್ಟಿಲ್ಲ. ಈಗಲೂ ಅಡ್ಡಿ ಮಾಡುತ್ತಿದ್ದೀರಿ. ಕಲಾಪಕ್ಕೆ ಅಡ್ಡಿಪಡಿಸುವ ಸ್ವಾತಂತ್ರ್ಯ ನಿಮಗಿಲ್ಲ**
>
> **ವಿಶ್ವೇಶ್ವರ ಹೆಗಡೆ ಕಾಗೇರಿ**
> ವಿಧಾನ ಸಭಾಧ್ಯಕ್ಷ

> **ಸರ್ಕಾರ ಮೊಂಡುತನಕ್ಕೆ ಅಂಟಿಕೊಂಡು ಅತ್ಯಾಚಾರಿಯ ರಕ್ಷಣೆಗೆ ಹೊರಟಿದೆ. ಸಂತ್ರಸ್ತೆಯನ್ನು ಇನ್ನೂ ಪತ್ತೆ ಮಾಡದೇ ಇರುವುದು ನಾಚಿಕೆಗೇಡು**
>
> **ಸಿದ್ದರಾಮಯ್ಯ**
> ವಿರೋಧಪಕ್ಷದ ನಾಯಕ

# ಬಿಬಿಎಂಪಿ ಆಯುಕ್ತರ ಆದೇಶ ವಾಪಸ್: ಸಿ.ಎಂ ಭರವಸೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆಯುವ ಕಾಮಗಾರಿಗಳ ಗುತ್ತಿಗೆಗೆ ಪಡೆದ ಗುತ್ತಿಗೆದಾರರು ಕನಿಷ್ಠ ಎರಡರಿಂದ ಮೂರು ವರ್ಷಗಳ ಬಿಲ್ ಮೊತ್ತ ಬಿಡುಗಡೆಗೆ ಒತ್ತಾಯಿಸಬಾರದು' ಎಂದು ಬಿಬಿಎಂಪಿ ಆಯುಕ್ತರು ಹೊರಡಿಸಿರುವ ಆದೇಶವನ್ನು ತಕ್ಷಣ ವಾಪಸ್ ಪಡೆಯಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಕಾಂಗ್ರೆಸ್ಸಿನ ಪಿ.ಆರ್. ರಮೇಶ್, 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಗುತ್ತಿಗೆಗೆ ಪಡೆಯುವವರು ಕಾಮಗಾರಿ ಮುಗಿದ ನಂತರ ಕನಿಷ್ಠ 2–3 ವರ್ಷಗಳ ಹಣ ಬಿಡುಗಡೆಗೆ ಒತ್ತಾಯಿಸಬಾರದು. ಈ ಸಂಬಂಧ ₹200ರ ಬಾಂಡ್ ಪೇಪರ್‌ನಲ್ಲಿ ಮುಚ್ಚಳಿಕೆ ಬರೆದುಕೊಡಬೇಕು ಎಂದು ಪಾಲಿಕೆ ಆಯುಕ್ತರು ಆದೇಶ ಹೊರಡಿಸಿದ್ದಾರೆ' ಎಂದರು.

'ಆಯುಕ್ತರ ಈ ಆದೇಶದಿಂದ ಸಾಲ ಮಾಡಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರ ಸಾಲ ತೀರಿಸಲು ಸಾಧ್ಯವಾಗುವುದಿಲ್ಲ. ಇಂಥ ಆದೇಶಗಳಿಂದ ಬಿಬಿಎಂಪಿ ಸೇರಿದಂತೆ ರಾಜ್ಯದ ಯಾವುದೇ ಭಾಗದಲ್ಲಿ ಗುತ್ತಿಗೆದಾರರು ಕಾಮಗಾರಿಗಳನ್ನು ನಿರ್ವಹಿಸಲು ಮುಂದೆ ಬರುವುದಿಲ್ಲ. ತಕ್ಷಣ ಈ ಆದೇಶ ಹಿಂಪಡೆಯಬೇಕು' ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸದನದಲ್ಲಿದ್ದ ಮುಖ್ಯಮಂತ್ರಿ ಯಡಿಯೂರಪ್ಪ, 'ಈ ಕುರಿತು ಬಿಬಿಎಂಪಿ ಆಯುಕ್ತರ ಜೊತೆ ಚರ್ಚೆ ನಡೆಸಲಾಗುವುದು. ಆದೇಶವನ್ನು ತಕ್ಷಣ ಹಿಂಪಡೆಯುವಂತೆ ಸೂಚಿಸುತ್ತೇನೆ' ಎಂದು ಭರವಸೆ ನೀಡಿದರು.

# 'ಆಯುಕ್ತರ ಕಚೇರಿಗೆ ಪ್ರಯತ್ನ'

**ಬೆಂಗಳೂರು:** ವಿಶೇಷ ಆರ್ಥಿಕ ವಲಯಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುವ ಆಯುಕ್ತರ ಕಚೇರಿಯನ್ನು ಬೆಂಗಳೂರಿಗೆ ಸ್ಥಳಾಂತರಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಅವರು ಮಂಗಳವಾರ ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

ಕಾಂಗ್ರೆಸ್‌ನ ಪಿ.ಆರ್. ರಮೇಶ್ ಪ್ರಶ್ನೆಗೆ ಉತ್ತರಿಸಿದ ಶೆಟ್ಟರ್, 'ರಾಜ್ಯದ ವಿಶೇಷ ಆರ್ಥಿಕ ವಲಯಗಳ ಮೇಲುಸ್ತುವಾರಿಯನ್ನು ಕೇರಳದ ಕೊಚ್ಚಿಯಲ್ಲಿರುವ ಆಯುಕ್ತಾಲಯದಿಂದ ನಿರ್ವಹಿಸಲಾಗುತ್ತಿದೆ. ಹೆಚ್ಚುವರಿ ಆಯುಕ್ತರ ಕಚೇರಿಯನ್ನು ಇತ್ತೀಚೆಗೆ ಬೆಂಗಳೂರಿನಲ್ಲಿ ಆರಂಭಿಸಲಾಗಿದೆ. ಕೊಚ್ಚಿಯಲ್ಲಿರುವ ಕಚೇರಿಯನ್ನು ಕರ್ನಾಟಕಕ್ಕೆ ತರುವ ಯತ್ನ ನಡೆಸಲಾಗಿದೆ' ಎಂದರು.

# 'ಸಿ.ಎಂ ಯಡಿಯೂರಪ್ಪ ಬಜೆಟ್ ಸುಳ್ಳಿನ ಕಂತೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಂಡಿಸಿದ ಪ್ರಸಕ್ತ ಸಾಲಿನ ಬಜೆಟ್ ಸಂಪೂರ್ಣವಾಗಿ ಸುಳ್ಳಿನ ಕಂತೆ. ಅಂಕಿಸಂಖ್ಯೆಗಳ ಮೂಲಕ ರಾಜ್ಯದ ಜನರನ್ನು ಅವರು ದಾರಿ ತಪ್ಪಿಸಿದ್ದಾರೆ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಪ್ರಕಾಶ್ ರಾಥೋಡ್ ಟೀಕಿಸಿದರು.

ಪ್ರಕಾಶ ರಾಠೋಡ

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, 'ಎಲ್ಲ ವಲಯಗಳಿಗೂ ಅನುದಾನ ಕಡಿಮೆ ಮಾಡಲಾಗಿದೆ. ಬಜೆಟ್ ಗಾತ್ರ ತಗ್ಗಿಸಿ ಪರಿಶಿಷ್ಟ ಜಾತಿ, ಪಂಗಡಗಳಿಗೆ ಅನ್ಯಾಯ ಮಾಡಲಾಗಿದೆ' ಎಂದರು.

'ಶೇ 2.5ರಷ್ಟಿದ್ದ ಸಾಲದ ಹೊರೆಯನ್ನು ಶೇ 4ಕ್ಕೆ ಏರಿಸಿ ಜನರ ಮೇಲೆ ಆರ್ಥಿಕ ಹೊರೆ ಹೊರಿಸಿದ್ದೀರಿ. ಸಾಲ ಹೆಚ್ಚಿಸುವ ಬಜೆಟ್ ನೀಡಿ, ಉತ್ತಮ ಬಜೆಟ್ ಎನ್ನುತ್ತಿದ್ದೀರಿ. ಕೇಂದ್ರ ಸರ್ಕಾರದಿಂದ ಬರಬೇಕಿದ್ದ ಹಣ ಬಂದಿಲ್ಲ. ಜಿಎಸ್‌ಟಿ ಪರಿಹಾರವೂ ಸಿಕ್ಕಿಲ್ಲ. ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಕರೆದುಕೊಂಡು ಹೋಗಿ ನಮ್ಮ ಪಾಲಿನ ಜಿಎಸ್‌ಟಿ ಪಾಲು ಕೇಳೋಣ' ಎಂದು ಸಲಹೆ ನೀಡಿದರು.

'ಕೇಂದ್ರದ ಯೋಜನೆ ಬೇಟಿ ಪಡಾವೊ, ಬೇಟಿ ಬಚಾವೊ, ಆವಾಸ್ ಯೋಜನೆ, ಸ್ವಚ್ಛ ಭಾರತ್ ಸೇರಿದಂತೆ ಯಾವುದೇ ಕಾರ್ಯಕ್ರಮಕ್ಕೆ ಅನುದಾನ ನೀಡಿಲ್ಲ. ಕೇಂದ್ರದಿಂದ ತೆರಿಗೆ ಹಣ ಬರುತ್ತಿಲ್ಲ. ಕೊರೊನಾಗೆ ₹ 5,700 ಕೋಟಿ ವೆಚ್ಚವಾಗಿದೆ ಎಂದಿದ್ದಾರೆ. ಆದರೆ ವಾಸ್ತವಾಗಿ ₹4,330 ಕೋಟಿ ಖರ್ಚು ಮಾಡಲಾಗಿದೆ' ಎಂದು ಆರೋಪಿಸಿದರು.

**ಯುವಕರ ಬದುಕು ಹಸನು:** ಬಿಜೆಪಿಯ ರುದ್ರೇಗೌಡ ಮಾತನಾಡಿ, ಉದ್ಯೋಗ ಸೃಷ್ಟಿ ಹಾಗೂ ಇತರ ವಿಚಾರ ಪ್ರಸ್ತಾಪಿಸಲಾಗಿದ್ದು ಎಲ್ಲವೂ ಸಾಕಾರಗೊಂಡರೆ, ಯುವಕರ ಬದುಕು ಹಸನಾಗಲಿದೆ. ಎಲೆಕ್ಟ್ರಿಕ್ ವಾಹನ ಖರೀದಿಗೆ ಉತ್ತೇಜನ ನೀಡಲಾಗಿದೆ. ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯ ಜತೆಗೆ ಮೂಲಸೌಕರ್ಯ ಅಭಿವೃದ್ಧಿಗೂ ಆದ್ಯತೆ ನೀಡಬೇಕು' ಎಂದರು.

### 'ಬಜೆಟ್ ಪ್ರತಿಗೂ ಅಂದಾಜು ಪಟ್ಟಿಗೂ ಸಾಮ್ಯತೆ ಇಲ್ಲ'

'ಮುಖ್ಯಮಂತ್ರಿ ಓದಿರುವ ಬಜೆಟ್ ಪ್ರತಿಗೂ ಅಂದಾಜು ಪಟ್ಟಿಗೂ ಸಾಮ್ಯತೆ ಇಲ್ಲ' ಎಂದು ಕಾಂಗ್ರೆಸ್ಸಿನ ಪಿ.ಆರ್. ರಮೇಶ್ ದೂರಿದರು.

'ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ₹ 100 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ, ಅಂದಾಜು ಪಟ್ಟಿಯಲ್ಲಿ ಕೇವಲ ₹ 1 ಲಕ್ಷ ಬಿಡುಗಡೆ ಮಾಡಿರುವ ಮಾಹಿತಿಯಿದೆ. ಹೀಗೆ ಬೇರೆ ಬೇರೆ ಅಭಿವೃದ್ಧಿ ನಿಗಮಗಳಿಗೆ ಅನುದಾನ ಬಿಡುಗಡೆ ಮಾಡಿರುವ ಮಾಹಿತಿಯೇ ಅಂದಾಜು ಪಟ್ಟಿಯಲ್ಲಿ ಇಲ್ಲ. ಕೊರೊನಾ ನಿಯಂತ್ರಣ ಸಂಬಂಧಿಸಿದಂತೆ ಬಜೆಟ್‌ನಲ್ಲಿ ಯಾವುದೇ ಸ್ಪಷ್ಟತೆ ಇಲ್ಲ. ವಾಸ್ತವಕ್ಕೆ ದೂರವಾದ ಬಜೆಟ್ ಇದು' ಎಂದೂ ಅವರು ಆರೋಪಿಸಿದರು.

# ಕ್ಷಯ: 3 ತಿಂಗಳೊಳಗೆ 17 ಸಾವಿರ ಪ್ರಕರಣ ಪತ್ತೆ

## 2025ರ ವೇಳೆಗೆ 'ಕ್ಷಯ ಮುಕ್ತ ಕರ್ನಾಟಕ' ನಿರ್ಮಾಣಕ್ಕೆ ಆರೋಗ್ಯ ಇಲಾಖೆ ಗುರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯವನ್ನು 2025ರ ವೇಳೆಗೆ ಕ್ಷಯ ರೋಗ ಮುಕ್ತಗೊಳಿಸಲು ಕಾರ್ಯಯೋಜನೆ ಹಾಕಿಕೊಂಡಿರುವ ಆರೋಗ್ಯ ಇಲಾಖೆ, ಈ ವರ್ಷ ಮೂರು ತಿಂಗಳೊಳಗೆ 17,357 ಕ್ಷಯ ರೋಗಿಗಳನ್ನು ಪತ್ತೆ ಮಾಡಿದೆ.

ಕ್ಷಯರೋಗ ನಿರ್ಮೂಲನೆಗಾಗಿ ಇಲಾಖೆ ಹಲವುಯೋಜನೆಗಳನ್ನುರೂಪಿಸಿದೆ. ಮಾರ್ಚ್ 24ರಂದು ವಿಶ್ವ ಕ್ಷಯ ರೋಗ ದಿನದ ಪ್ರಯುಕ್ತ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸೋಂಕಿತರು ಕೆಮ್ಮಿದಾಗ ಹಾಗೂ ಸೀನಿದಾಗ ವೈರಾಣು ಇನ್ನೊಬ್ಬರ ದೇಹ ಸೇರುವ ಸಾಧ್ಯತೆ ಇರುತ್ತದೆ. ದೇಶದಲ್ಲಿ 2019ರಲ್ಲಿ 4.36 ಲಕ್ಷ ಜನರು ಈ ರೋಗದಿಂದ ಮೃತಪಟ್ಟಿದ್ದಾರೆ.

ಹೀಗಾಗಿ, ರಾಜ್ಯದಲ್ಲಿ 'ಕ್ಷಯ ಮುಕ್ತ ಕರ್ನಾಟಕ' ಯೋಜನೆ ಹಾಕಿಕೊಳ್ಳಲಾಗಿದ್ದು, ರೋಗಿಗಳನ್ನು ಪತ್ತೆ ಮಾಡಿ, ಚಿಕಿತ್ಸೆ ಒದಗಿಸಲಾಗುತ್ತಿದೆ.

**1.5 ಕೋಟಿ ಮಂದಿ ತಪಾಸಣೆ:** ಕ್ಷಯ ರೋಗ ಪತ್ತೆಗೆ 65 ಸಿಬಿನ್ಯಾಟ್ ಮತ್ತು 80 ಟ್ರೂನ್ಯಾಟ್ ಯಂತ್ರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಕ್ಷಯ ರೋಗ ಪತ್ತೆ ಆಂದೋಲನವನ್ನು ರಾಜ್ಯದಲ್ಲಿ ನಡೆಸಲಾಗುತ್ತಿದೆ. ಕ್ಷಯ ರೋಗಕ್ಕೆ ಒಳಗಾಗುವ ಅಪಾಯ ಇರುವ ಜನರನ್ನು ಈ ಅವಧಿಯಲ್ಲಿ ಗುರುತಿಸಲಾಗುತ್ತದೆ.

2020ರಲ್ಲಿ ನಡೆದ 30 ದಿನಗಳ ಆಂದೋಲನದಲ್ಲಿ 1.5 ಕೋಟಿ ಜನರನ್ನು ತಪಾಸಣೆ ಮಾಡಲಾಗಿದೆ. 92,519 ಮಂದಿಯಲ್ಲಿ ರೋಗದ ಶಂಕೆ ವ್ಯಕ್ತವಾದ ಕಾರಣ ಅವರನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವರಲ್ಲಿ 2,951 ಮಂದಿಯಲ್ಲಿ ರೋಗ ದೃಢಪಟ್ಟಿದೆ ಎಂದು ಇಲಾಖೆ ತಿಳಿಸಿದೆ.

ಕ್ಷಯರೋಗಿಗಳಲ್ಲಿ ಶೇ 96ರಷ್ಟು ಮಂದಿಗೆ ಎಚ್‌ಐವಿ ಪರೀಕ್ಷೆ ನಡೆಸಲಾಗುತ್ತಿದೆ. ಶೇ 7ರಷ್ಟು ಮಂದಿಯಲ್ಲಿ ಎಚ್‌ಐವಿ ದೃಢಪಡುತ್ತಿದೆ. ಕೇಂದ್ರದ 'ನಿಕ್ಷಯ್ ಪೋಷಣೆ' ಯೋಜನೆಯಡಿ ರೋಗಿಗಳು ಪೌಷ್ಟಿಕ ಆಹಾರ ಪಡೆಯಲು ₹ 500 ನೀಡಲಾಗುತ್ತಿದೆ. ಟಿಬಿ ಕಾರ್ಯಕ್ರಮದಡಿ 56 ವೈದ್ಯಕೀಯ ಕಾಲೇಜು ತೊಡಗಿವೆ ಎಂದು ಇಲಾಖೆ ಹೇಳಿಕೆ ತಿಳಿಸಿದೆ.

### ಕ್ಷಯ ಪತ್ತೆಗೆ ಕೋವಿಡ್ ಅಡ್ಡಿ

'ರಾಜ್ಯದಲ್ಲಿ 2019ರಲ್ಲಿ 91,997 ಮಂದಿ ಕ್ಷಯ ರೋಗಿಗಳನ್ನು ಪತ್ತೆ ಮಾಡಲಾಗಿತ್ತು.2020ರಲ್ಲಿ ಕೋವಿಡ್ ಕಾಯಿಲೆಯು ಪತ್ತೆ ಕಾರ್ಯಕ್ಕೆ ಅಡ್ಡಿಪಡಿಸಿತು. ಅಷ್ಟಾಗಿಯೂ 65,933 ರೋಗಿಗಳನ್ನು ಪತ್ತೆ ಮಾಡಲಾಗಿದೆ. ಈ ವರ್ಷ ಪತ್ತೆ ಕಾರ್ಯಕ್ಕೆ ಚುರುಕು ದೊರೆತಿದೆ' ಎಂದು ಕ್ಷಯ ವಿಭಾಗದ ಜಂಟಿ ನಿರ್ದೇಶಕ ರಮೇಶ್ ರೆಡ್ಡಿ ತಿಳಿಸಿದರು.

'ಕ್ಷಯ ರೋಗ ನಿರ್ಣಯ ಮತ್ತು ಚಿಕಿತ್ಸಾ ಸೌಲಭ್ಯಗಳ ಲಭ್ಯತೆ ಕುರಿತು ಸಮುದಾಯದಲ್ಲಿ ಅರಿವಿನ ಕೊರತೆಯಿದೆ. ಇದು ರೋಗ ನಿರ್ಮೂಲನೆಗೆ ಇರುವ ಪ್ರಮುಖ ಸವಾಲಾಗಿದೆ. ಮಧುಮೇಹ, ವಾಯುಮಾಲಿನ್ಯ, ಧೂಮಪಾನ, ಹಿಂದಿನ ಅಸಮರ್ಪಕ ಚಿಕಿತ್ಸೆ, ಸಕಾಲದಲ್ಲಿ ರೋಗ ಪತ್ತೆಯಾಗದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳು ರೋಗ ನಿರ್ಮೂಲನೆಗೆ ಸವಾಲಾಗಿವೆ' ಎಂದು ಇಲಾಖೆ ತಿಳಿಸಿದೆ.

ಸಿ.ಡಿ. ಪ್ರಕರಣ; ಎಸ್‌ಐಟಿ ತನಿಖೆ ಮುಂದುವರಿಕೆ

# ಚಾಲಕನ ಸಮೇತ ಗಣಿ ಉದ್ಯಮಿ ನಾಪತ್ತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ. ಪ್ರಕರಣ ಸಂಬಂಧ ಎಸ್‌ಐಟಿ ಅಧಿಕಾರಿಗಳು ತಮ್ಮ ಮನೆ ಮೇಲೆ ದಾಳಿ ಮಾಡುತ್ತಿದ್ದಂತೆ ಗ್ರಾನೈಟ್ ಉದ್ಯಮಿ ಶಿವಕುಮಾರ್ ಕಾರು ಚಾಲಕನ ಸಮೇತ ನಾಪತ್ತೆಯಾಗಿದ್ದಾರೆ.

ಸಿ.ಡಿ ಸೃಷ್ಟಿಸಿದ್ದ ಆರೋಪಿಗಳಿಗೆ ನೆರವು ನೀಡಿದ್ದ ಮಾಹಿತಿ ಮೇರೆಗೆ ಎಸ್‌ಐಟಿ ಅಧಿಕಾರಿಗಳು, ಜೆ.ಪಿ.ನಗರದಲ್ಲಿರುವ ಶಿವಕುಮಾರ್ ಮನೆ ಮೇಲೆ ಇತ್ತೀಚೆಗೆ ದಾಳಿ ಮಾಡಿದ್ದರು. ಕೆಲ ದಾಖಲೆಗಳನ್ನೂ ಜಪ್ತಿ ಮಾಡಿದ್ದರು. ಅದಾದ ಮರುದಿನದಿಂದಲೇ ಶಿವಕುಮಾರ್ ಹಾಗೂ ಅವರ ಕಾರು ಚಾಲಕ, ಬೆಂಗಳೂರು ತೊರೆದಿದ್ದಾರೆ ಎನ್ನಲಾಗಿದೆ.

'ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿರುವ ಕೆಲವರು, ಸಿ.ಡಿ ಬಿಡುಗಡೆ ಮಾಡುವ ಸಂಬಂಧ ಶಿವಕುಮಾರ್ ಜೊತೆ ಮಾತನಾಡಿದ್ದರು. ನಂತರ, ಶಿವಕುಮಾರ್ ಅವರೇ ಆರೋಪಿಗಳಿಗೆ ಆರ್ಥಿಕ ನೆರವು ನೀಡಿದ್ದರು. ಜೊತೆಗೆ, ಚಾಲಕನ ಮೂಲಕವೂ ಕೆಲವರು ಹಣ ನೀಡಿರುವ ಮಾಹಿತಿ ಇದೆ' ಎಂದು ಮೂಲಗಳು ಹೇಳಿವೆ.

'ಲಭ್ಯವಿದ್ದ ಪುರಾವೆಗಳನ್ನು ಆಧರಿಸಿ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದು ಶಿವಕುಮಾರ್ ಮನೆ ಮೇಲೆ ದಾಳಿ ಮಾಡಲಾಯಿತು. ದಾಳಿ ಬಗ್ಗೆ ಶಿವಕುಮಾರ್ ಅವರನ್ನು ವಿಚಾರಣೆಗೆ ಒಳಪಡಿಸಬೇಕಿದ್ದು, ಈಗಾಗಲೇ ನೋಟಿಸ್ ಸಹ ನೀಡಲಾಗಿದೆ. ಆದರೆ, ಅವರು ನಾಪತ್ತೆಯಾಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

**ಪ್ರತ್ಯೇಕ ಜಾಗದಲ್ಲಿ ಚಾಲಕ:** 'ಶಿವಕುಮಾರ್ ಅವರ ಜೊತೆಯೇ ನಾಪತ್ತೆಯಾಗಿದ್ದ ಚಾಲಕ, ಪ್ರತ್ಯೇಕ ಜಾಗದಲ್ಲಿ ಉಳಿದುಕೊಂಡಿರುವ ಮಾಹಿತಿ ಇದೆ. ಇಬ್ಬರೂ ಬೇರೆ ಬೇರೆ ಕಡೆ ಉಳಿದುಕೊಂಡು ಪೊಲೀಸರ ದಿಕ್ಕು ತಪ್ಪಿಸಬಹುದೆಂದು ಭಾವಿಸಿದ್ದಾರೆ. ಆದರೆ, ನಮ್ಮ ವಿಶೇಷ ತಂಡ ಅವರ ಪತ್ತೆಯಲ್ಲಿ ನಿರತವಾಗಿದೆ' ಎಂದೂ ಮೂಲಗಳು ಹೇಳಿವೆ.

'ಸಿ.ಡಿ ಸೃಷ್ಟಿಸಿದ್ದಾರೆ ಎನ್ನಲಾದ ವ್ಯಕ್ತಿಗಳ ಜೊತೆ ಚಾಲಕ ಕೂಡ ಹೊರ ರಾಜ್ಯಗಳಲ್ಲಿ ಓಡಾಡುತ್ತಿರುವ ಅನುಮಾನವಿದೆ. ಆದರೆ, ಅವರು ಯಾರೊಬ್ಬರು ಎಟಿಎಂ, ಮೊಬೈಲ್ ಬಳಕೆ ಮಾಡುತ್ತಿಲ್ಲ. ಹೀಗಾಗಿ, ಸುಳಿವು ಸಿಗುತ್ತಿಲ್ಲ. ಹೊರ ರಾಜ್ಯಗಳ ಹೋಟೆಲ್ ಹಾಗೂ ರೆಸಾರ್ಟ್‌ಗಳಲ್ಲಿ ಶೋಧ ನಡೆಯುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

### ಮತ್ತಷ್ಟು ಮಂದಿಗೆ ನೋಟಿಸ್

ಪ್ರಕರಣದಲ್ಲಿ ಕಲೆಹಾಕಿರುವ ಮಾಹಿತಿ ಆಧರಿಸಿ ಮತ್ತಷ್ಟು ಮಂದಿಗೆ ಎಸ್‌ಐಟಿ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ.

'ಯುವತಿ ಪರಿಚಯಸ್ಥರು, ಆರೋಪಿಗಳು ಎನ್ನಲಾದ ವ್ಯಕ್ತಿಗಳ ಜೊತೆ ಒಡನಾಟ ಹೊಂದಿದ್ದವರು, ಸಿ.ಡಿ. ಪ್ರಕರಣ ಸಂಬಂಧ ಹೇಳಿಕೆ ನೀಡಿದ್ದವರು ಹಾಗೂ ಕಾರು ಚಾಲಕರು ಸೇರಿದಂತೆ ಹಲವರಿಗೆ ನೋಟಿಸ್ ನೀಡಲಾಗಿದೆ. ಅವರಿಂದ ಸಿಕ್ಕ ಮಾಹಿತಿ ಪರಿಶೀಲಿಸಿ ತನಿಖೆ ಮುಂದುವರಿಸಲಾಗುವುದು' ಎಂದು ಮೂಲಗಳು ಹೇಳಿವೆ.

# ಪೊಲೀಸರ ಮೇಲೆ ಹಲ್ಲೆ–12 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

**ಮೈಸೂರು:** ಬೋಗಾದಿ–ಹಿನಕಲ್ ರಿಂಗ್ ರಸ್ತೆಯಲ್ಲಿ ಸೋಮವಾರ ಮೂವರು ಪೊಲೀಸರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ 12 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಮೂರು ಎಫ್‌ಐಆರ್ ದಾಖಲಿಸಿಕೊಂಡು, ಇನ್ನಷ್ಟು ಮಂದಿಯ ಬಂಧನಕ್ಕೆ ಬಲೆ ಬೀಸಿದ್ದಾರೆ.

ಮತ್ತೊಂದೆಡೆ, ಅಪಘಾತಕ್ಕೆ ಸಂಚಾರ ಪೊಲೀಸರ ತಪಾಸಣೆಯೇ ಕಾರಣವೆಂದು ಆರೋಪಿಸಿ ಸಾರ್ವಜನಿಕರು ಮಂಗಳವಾರವೂ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ಹಿನಕಲ್ ಜಂಕ್ಷನ್‌ನಲ್ಲಿ ಧರಣಿ ನಡೆಸಿದರು.

# ಸರಳ ವೈರಮುಡಿ ಉತ್ಸವ ಇಂದು

**ಮಂಡ್ಯ:** ಮೇಲುಕೋಟೆ ಚೆಲುವನಾರಾಯಣಸ್ವಾಮಿಗೆ ವಜ್ರಖಚಿತ ಕಿರೀಟ ಧಾರಣೆ ಮಾಡುವ ವೈರಮುಡಿ ಬ್ರಹ್ಮೋತ್ಸವ ಬುಧವಾರ ಸರಳವಾಗಿ ನೆರವೇರಲಿದೆ. ಜಿಲ್ಲಾಡಳಿತವು ಈ ಬಾರಿ ಎಲ್ಲ ಧಾರ್ಮಿಕ ಕಾರ್ಯಕ್ರಮಗಳನ್ನು ಡಿ.ಸಿ ಫೇಸ್‌ಬುಕ್ ಪುಟ, ಯೂಟ್ಯೂಬ್‌ನಲ್ಲಿ ನೇರಪ್ರಸಾರಕ್ಕೆ ವ್ಯವಸ್ಥೆ ಮಾಡಿದೆ.

ಕೋವಿಡ್ ಕಾರಣ ಜಿಲ್ಲಾಡಳಿತ ಸ್ಥಳೀಯ ಭಕ್ತರಿಗೆ ಮಾತ್ರ ಸೀಮಿತಗೊಳಿಸಿದೆ. ಮೇಲುಕೋಟೆ ಪ್ರವೇಶದ್ವಾರದಲ್ಲಿ 2 ಕಡೆ ಚೆಕ್‌ಪೋಸ್ಟ್ ತೆರೆಯಲಾಗಿದ್ದು ಹೊರಜಿಲ್ಲೆ, ಹೊರರಾಜ್ಯಗಳ ಭಕ್ತರನ್ನು ವಾಪಸ್ ಕಳುಹಿಸಲಾಗುತ್ತಿದೆ. ದೇವಾಲಯಕ್ಕೆ ಒಮ್ಮೆ ಕೇವಲ 50 ಮಂದಿ ಭಕ್ತರನ್ನು ಬಿಡಲಾಗುತ್ತದೆ. ಪ್ರತಿಯೊಬ್ಬರೂ ತಮ್ಮ ಗುರುತಿನ ಚೀಟಿ ತೋರಿಸಿದ ನಂತರವೇ ಒಳಗೆ ಬಿಡಲಾಗುತ್ತದೆ.

---

ಕರ್ನಾಟಕ ಸರ್ಕಾರ

**ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು**

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(70ಇ/19–20)2020–21:ಎಇ–1  ದಿನಾಂಕ:22.03.2021

**ಟೆಂಡರ್ ಸಮಯಾವಧಿ ವಿಸ್ತರಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)**

ದಿನಾಂಕ: 26.01.2021ರ ವಿಜಯಕರ್ನಾಟಕ ಮತ್ತು ಕರಾವಳಿ ಅಲೆ ಪ್ರಕಟಣೆಗೆ ಸಂಬಂಧಿಸಿದಂತೆ ಈ ಕಛೇರಿ ಪ್ರಕಟಣೆ ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(70ಇ/19–20)2020–21:ಎಇ–1 :ಲೆಕ್ಕಶೀರ್ಷಿಕೆ:–5054–03–101–0–02–132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು – ಬಂಡವಾಳ ವೆಚ್ಚ ಶಾಲೆ ಸಂಪರ್ಕ ಸೇತುವೆ ಯೋಜನೆ ಯಡಿ ಇಂಡೆಂಟ್ ನಂ. .134831, 134765 (ಪರಿಶಿಷ್ಟ ಜಾತಿ), 134735 ಮತ್ತು 134447 ಈ ಕಾಮಗಾರಿಗಳಿಗೆ ಸಮಯಾವದಿ ವಿಸ್ತರಣೆ ಮಾಡಲಾಗಿದೆ. ಟೆಂಡರನ್ನು ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್ ಮುಖಾಂತರ **ದಿನಾಂಕ: 07.04.2021ರ ಅಪರಾಹ್ನ 4.00 ಗಂಟೆ (16:00 ಗಂಟೆ)** ಒಳಗೆ ಸಲ್ಲಿಸತಕ್ಕದ್ದು. ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ/ಕರೆ/ತಿದ್ದುಪಡಿ/ಟೆಂಡರು ಮುಂದೂಡಿಕೆ/ರದ್ಧತಿ ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ನೀಡಲಾಗುವುದು. ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ **https://eproc.karnataka. gov.in** ನಲ್ಲಿ ಟೆಂಡರು ಡಾಕ್ಯುಮೆಂಟ್‌ಗಳನ್ನು Download ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಮತ್ತು ಅಂತರ್‌ಜಾಲದ ಮೂಲಕ ಪಡೆಯಬಹುದಾಗಿದೆ.

DIPR/MNG/MCA/1087/20-21dt. 22.3.2021   ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

---

**ಮಂಗಳೂರು ಮಹಾನಗರ ಪಾಲಿಕೆ**

DMA/2020-21/WORK INDENT NO.110146/Call-2   ದಿನಾಂಕ: 20.03.2021

**ಟೆಂಡರ್ ಮುಂದೂಡಿಕೆ ಪ್ರಕಟಣೆ**

ಮಂಗಳೂರು ಮಹಾನಗರಪಾಲಿಕೆಯಲ್ಲಿ **ಸಾಮಾನ್ಯ ಅನುದಾನದಡಿಯಲ್ಲಿ** ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಯಾದ ಮ.ನ.ಪಾ. ವ್ಯಾಪ್ತಿಯ ಒಳಚರಂಡಿ ವಿಭಾಗದ ಮಾಧವ ನಗರ ಒಳಚರಂಡಿ ತ್ಯಾಜ್ಯ ಸಂಸ್ಕರಣ ಘಟಕ, 3 ಸಂಖ್ಯೆ ವೆಟೆವೆಲ್ ಹಾಗೂ 1 ಸಂಖ್ಯೆಯ ಇಂಟರ್ ಮೀಡಿಯೇಟ್ ಪಂಪಿಂಗ್ ಸ್ಟೇಷನ್ ನಿರ್ವಹಣೆ ಕಾಮಗಾರಿಯ ಟೆಂಡರ್ ಸಂಖ್ಯೆ: DMA/2020-21/WORKINDENT NO.110146/Call-2 ದಿನಾಂಕ: 04.03.2021ರ ಟೆಂಡರ್ ಪ್ರಕಟಣೆಯನ್ನು ದಿನಾಂಕ: 06.03.2021 ರಂದು ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದು, ಸದ್ರಿ ಪ್ರಕಟಣೆಯಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 22.03.2021 ಎಂದು ಪ್ರಕಟಿಸಲಾಗಿತ್ತು. ಆದರೆ ಸದ್ರಿ ಟೆಂಡರ್ ಪ್ರಕಟಣೆಯಲ್ಲಿ ಟೆಂಡರ್ ಸಲ್ಲಿಸುವ ದಿನಾಂಕವನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ. ಪ್ರಸ್ತುತ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 19.04.2021** ಎಂದು ಓದುವುದು. ಉಳಿದಂತೆ ಬೇರೆ ಯಾವುದೇ ಬದಲಾವಣೆಗಳಿರುವುದಿಲ್ಲ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು

DIPR/ADM/MCA/1094/20-21 dt: 23.3.2021

---

**ಕರ್ನಾಟಕ ಸರ್ಕಾರ**

**ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ**

ಸಂ.ಕಾನಿಅ/ಲೋಇ/ಕವಿ/ತಾಶಾ–2/.ಟೆಂಡರ್.ಅಧಿಸೂಚನೆ/2020–21/9061   ದಿನಾಂಕ:23.03.2021

**ಟೆಂಡರ ತಿದ್ದುಪಡಿ ಅಧಿಸೂಚನೆ**

ವಿಷಯ: ಟೆಂಡರ ದಿನಾಂಕ ತಿದ್ದುಪಡಿ ಪ್ರಕಟಣೆ ಅಧಿಸೂಚನೆ–ಬಗ್ಗೆ

ಉಲ್ಲೇಖ:1) ಈ ಕಚೇರಿ ಟೆಂಡರ ಪ್ರಕಟಣೆ ಸಂ: ಕಾನಿಅ/ಲೋಇ/ಕವಿ/ತಾಶಾ–2/ ಟೆಂಡರ್.ಅಧಿಸೂಚನೆ /2020–21/7493 ದಿನಾಂಕ 24.02.2021.

ಈ ಕಚೇರಿಯ ಉಲ್ಲೇಖಿತ ಅಧಿಸೂಚನೆಯಲ್ಲಿ ಕರೆಯಲಾದ ಇಂಡೆಟ ಸಂಖ್ಯೆ 136065 ಕಾಮಗಾರಿಯ ಟೆಂಡರ ವೇಳಾ ಪಟ್ಟಿ ಈ ಕೆಳಗಿನಂತೆ ವಿಸ್ತರಿಸಲಾಗಿದೆ.

1) ಪ್ರೀ ಬಿಡ್ ಮೀಟಿಂಗ : 31.03.2021 (11.30 ಗಂಟೆ). 2) ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 01.04.2021 (17.30 ಗಂಟೆ). 3) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 03.04.2021 (16.00 ಗಂಟೆ). 4) ತಾಂತ್ರಿಕ ಬಿಡ ತೆರೆಯುವ ದಿನಾಂಕ : 05.04.2021 (16.30 ಗಂಟೆ). 5) ಆರ್ಥಿಕ ಬಿಡ ತೆರೆಯುವ ದಿನಾಂಕ : 07.04.2021 (11.00 ಗಂಟೆ). ಉಳಿದಂತೆ ಯಾವುದೇ ಷರತ್ತುಗಳಲ್ಲಿ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1146/ಎಂ.ಸಿ.&ಎ/2020–21

---

**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ ಮೆ. ಪಿ.ಎಸ್.ಕೆ. ಇನ್‌ಫ್ರಾಸ್ಟ್ರಕ್ಚರ್ ಅಂಡ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಪ್ರತಿನಿಧಿಸುವ ವ್ಯವಸ್ಥಾಪಕ ನಿರ್ದೇಶಕ ಶ್ರೀ. ಪುಟ್ಟ ಸುಧಾಕರ್ ಬಿನ್ ಲೇಟ್ ಸುಬ್ಬಯ್ಯ, ಪುಂಜಗುಟ್ಟ, ಹೈದರಾಬಾದ್–500082 ರವರ ಹೇಳಿಕೆಯ ಪ್ರಕಾರ, ಈ ಮೂಲಕ ನಾನು ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಮೇಲೆ ಹೆಸರಿಸಲಾದ ನನ್ನ ಕಕ್ಷಿದಾರರು ಕರ್ನಾಟಕದ ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಲಗೆವಡೇರಹಳ್ಳಿಯ ಸರ್ವೆ ನಂ. 190/2 ರಲ್ಲಿ ಸ್ಥಿತಗೊಂಡಿರುವ 2 ಎಕರೆ 28 ಗುಂಟಾ ವಿಸ್ತೀರ್ಣವುಳ್ಳ, ಉತ್ತರಕ್ಕೆ: ಸರ್ವೆ ನಂ. 190 ರಲ್ಲಿರುವ ಶಿವಪ್ಪ ಮತ್ತು ಎಂ.ಕೆ.ಪುಟ್ಟಲಿಂಗಯ್ಯ ರವರ ಜಮೀನು, ದಕ್ಷಿಣಕ್ಕೆ: ಚನ್ನಸಂದ್ರ ಗ್ರಾಮದ ಸರಹದ್ದು ಮತ್ತು ಹಳ್ಳ, ಪೂರ್ವಕ್ಕೆ: ಸರ್ವೆ ನಂ. 187 ಮತ್ತು ಯಾದಲಂ ಗೋಪಾಲ ಶೆಟ್ಟಿ, ಪಶ್ಚಿಮಕ್ಕೆ: ಎಂ.ಕೆ.ಪುಟ್ಟಲಿಂಗಂ ನವರಿಗೆ ಸಂಬಂಧಿತ ಸ್ವತ್ತು ಎಂದರೆ., ಸರ್ವೆ ನಂ. 190ರ ಭಾಗ; ಚಕ್ಕುಬಂದಿ ಹೊಂದಿರುವ ಕೃಷಿ ಜಮೀನನ್ನು ಡಾ. ಎಲ್.ರವಿಪ್ರಕಾಶ್ ಬಿನ್ ಎಲ್. ಶಿವಲಿಂಗಯ್ಯ, ವಿಳಾಸ ಬೆಂಗಳೂರು ಕರ್ನಾಟಕ ಇವರಿಂದ ಖರೀದಿಸಲು ಮುಂದಾಗಿದ್ದಾರೆ.

ಆದ್ದರಿಂದ, ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದು ಏನೆಂದರೆ, ಮೇಲ್ಕಾಣಿಸಿದ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ/ವ್ಯಕ್ತಿಗಳಿಗೆ ಯಾವುದೇ ಸ್ವರೂಪದ ಯಾವುದೇ ಹಕ್ಕು, ಬಾದ್ಯತೆ, ಹಿತಾಸಕ್ತಿಗಳಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 7 (ಏಳು) ದಿನಗಳೊಳಗೆ ಈ ಕೆಳಗೆ ಸಹಿ ಹಾಕಿರುವವರನ್ನು ಸಂಪರ್ಕಿಸತಕ್ಕದ್ದು, ಇಲ್ಲವಾದಲ್ಲಿ ನನ್ನ ಕಕ್ಷಿದಾರರು ಕ್ರಯಪತ್ರ ಮಾಡಿಕೊಳ್ಳುತ್ತಾರೆ ಮತ್ತು ನಂತರದಲ್ಲಿ ಯಾವುದೇ ಸ್ವರೂಪದ ಕ್ಲೇಮುಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಎಲ್ಲಾ ಹಕ್ಕುಗಳನ್ನು ನನ್ನ ಕಕ್ಷಿದಾರರ ಪರವಾಗಿ ಪರಿಭಾವಿಸಲಾಗುತ್ತದೆ.

ಸಹಿ/–
**ಆಯ್. ರಮೇಶ್**
**ಬಿ.ಕಾಮ್, ಎಲ್.ಎಲ್.ಎಂ.,** ವಕೀಲರು
ಶ್ರೀ ಸಾಯಿ ನಿಲಯಂ, 9–1–19/48, ವಿನಾಯಕ ನಗರ, ಲ್ಯಾಂಗರ್ ಹೌಸ್, ಹೈದರಾಬಾದ್ – 500008 ಮೊಬೈಲ್: 9246546715

---

**ಲೋಕೋಪಯೋಗಿ ಇಲಾಖೆ. ತುಮಕೂರು.**

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

ಕ್ರಸಂ:ಕಾಇಂ:ಲೋಇವಿ:ತುಮ:ಸಇಂ–1:ಟೆಂಡರ್ ಮುಂದೂಡಿಕೆ31/2020–21 ದಿನಾಂಕ20.03.2021

**ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂ,31/2020–21**
**ದಿನಾಂಕ: 20.03.2021**

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 31/2020–21:ದಿನಾಂಕ **20.03.2021** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ (ರೈಲ್ವೇ ಅನುದಾನ) ಯೋಜನೆ ಅಡಿಯಲ್ಲಿ 01 ಕಾಮಗಾರಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ **ರೂ.1264.80ಲಕ್ಷಗಳು,** ಅರ್ಹ ಗುತ್ತಿಗೆದಾರರು: 1ನೇ ದರ್ಜೆ ಮೇಲ್ಪಟ್ಟು, ಕಾಲಾವದಿ: 11ತಿಂಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **19.04.2021** ರ 16–00 ಗಂಟೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **24.03.2021** ರಿಂದ **21.04.2021**ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **21.04.2021** ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **22.04.2021** ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **26.04.2021** ಸಂಜೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.inರಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/492/MCA/2020-21

ಕೋವಿಡ್ 19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**

**ಇ–ಪ್ರೊಕ್ಯೂರ್‌ಮೆಂಟ್ ಮೂಲಕ**

**15 Days Tender Notification**

**No. R/TPC/KVAFSU/eProc.57/2020-21/4407   Dt.: 22.03.2021**

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇದರ ಅಧೀನದ ಕಾಲೇಜು ಮತ್ತು ಸಂಸ್ಥೆಗಳಿಗೆ ಬೇಕಾದ **ಉಪಕರಣಗಳು, ಆಹಾರ ಪದಾರ್ಥಗಳು ಮತ್ತು ಆಸಕ್ತಿ ವ್ಯಕ್ತಪಡಿಸುವಿಕೆಯನ್ನು** ಒದಗಿಸಲು ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಗುತ್ತಿಗೆದಾರರಿಂದ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಮೇಲಿನ ಟೆಂಡರಿಗಿಟ್ಟ **ಅಂದಾಜು ಮೊತ್ತ ರೂ. 162.82 ಲಕ್ಷ**. ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಅಂತಿಮ ದಿನಾಂಕ: **08.04.2021ರ ಸಂಜೆ 5:00 ಗಂಟೆ**ವರೆಗೆ. ಹೆಚ್ಚಿನ ವಿವರಗಳಿಗೆ ಅಧಿಕೃತ ವೆಬ್‌ಸೈಟ್: **https://eproc.karnataka.gov.in** ಮುಖಾಂತರ ದಿನಾಂಕ: **24.03.2021** ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಕಛೇರಿಯ ವೇಳೆಯಲ್ಲಿ ವಿವರಗಳನ್ನು ಪಡೆಯಬಹುದು.

ಸಹಿ/–
ಡಾ. ಎಂ.ಕೆ. ತಾಂದಲೆ, ಕೋಆರ್ಡಿನೇಟರ್, ಟಿಪಿಸಿ,
ವಾಸಾಸಂಇ/ಉನಿನ/ಎಲ್‌ಸಿ/3210/2020–21 **KVAFSU, ಬೀದರ–585226. ದೂ.: 9448569337**

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

ಕರ್ನಾಟಕ ಸರ್ಕಾರ

**ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮೀಣಾಭಿವೃದ್ಧಿ ಯೋಜನಾ ವಿಭಾಗ, ಕಲಬುರಗಿ**

ಸಂಖ್ಯೆ : ಕಾನಿಅ/ಗ್ರಾಯೋ/ವಿಕ/ತಾಶಾ/ಟೆಂಡರ/ KKRDB /2020–21/1049   ದಿನಾಂಕ:22.03.2021

**ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ**

1) ಕಾಮಗಾರಿಯ ವಿವರ : Package of 3 Works 1) Improvements to Road From Bhimanalli to Belegera Thanda km 0.00 to 2.00 km , 2) Improvements to Road From Bhimanalli to Belegera Thanda km 2.00 to 3.50, 3)Improvements to Road From Bhimanalli to Belegera Thanda km 3.50 to 4.95 in Chittapur Taluk, Kalaburagi District.Under KKRDB 2020-21(Micro) INDENT No:5116. 2) ಲೆಕ್ಕ ಶೀರ್ಷಿಕೆ : KKRDB 2020-21(Micro) 3) ಟೆಂಡರಿಗಿಟ್ಟ ಮೊತ್ತ : Rs.41485848.09. 4) ಗುತ್ತಿಗೆದಾರರ ಅರ್ಹತೆ : 1ನೇ ದರ್ಜೆ & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ : 22/3/2021 ರಿಂದ 29/03/2021 ರ ಸಾಯಂಕಾಲ 4:30 ಗಂಟೆವರೆಗೆ. 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಟೆಂಡರ ಫಾರಂ ಬೆಲೆ & ಇ.ಎಂ.ಡಿ. ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿರುವಂತೆ. 7) ಟೆಂಡರ ಸಲ್ಲಿಸುವ ಅಂತಿಮ ದಿನಾಂಕ : 29/03/2021 ಸಾಯಂಕಾಲ 4:30 ಗಂಟೆವರೆಗೆ. 8) ಟೆಂಡರ ತೆರೆಯುವ ದಿನಾಂಕ : 30/03/2021 ಸಾಯಂಕಾಲ 4:35 ಗಂಟೆ ನಂತರ. 9) ಆರ್ಥಿಕ ಬಿಡ್ಡ ತೆರೆಯುನ ದಿನಾಂಕ 08/04/2021 ಬೆಳಿಗ್ಗೆ 11:00 ಗಂಟೆ ನಂತರ. 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಗ್ರಾಮಿಣಾಭಿವೃದ್ಧಿ ಪಂಚಾಯತ ರಾಜ್ ಇಂಜಿನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ ಕಲಬುರಗಿ 10) ಅಂತರಜಾಲ ತಾಣದ ವಿಳಾಸ : www.eproc.karnataka.gov.in. 11) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.eproc.karnataka.gov.in ಮಾಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1142/ಎಂ.ಸಿ&ಎ/2020–21

---

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ**

ಕಾರ್ಯನಿರ್ವಾಹಕ ಕಛೇರಿ : ನೆಲಮಹಡಿ, ಬಿ.ಎಂ.ಟಿ.ಸಿ, ಯಶವಂತಪುರ, ಟಿ.ಟಿ.ಎಂ.ಸಿ ಬಸ್ ನಿಲ್ದಾಣ, ಯಶವಂತಪುರ ವೃತ್ತ ಬೆಂಗಳೂರು – 560 022. ದೂರವಾಣಿ : 80-4334 4334 ಫ್ಯಾಕ್ಸ್ : 080-4334 4376, ವೆಬ್‌ಸೈಟ್ : www.kstdc.co

ಸಂಖ್ಯೆ : ಕರಾಪ್ರಅನಿ/ಪಿಆರ್‌ಒ/34/2019–20/2634/2020–21   ದಿನಾಂಕ:22.03.2021

**ಟೆಂಡರ್ ಅಧಿಸೂಚನೆ**
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2021–22ನೇ ಸಾಲಿನಲ್ಲಿ ಆಯೋಜನೆಯಾಗುವ ಅಂತರರಾಷ್ಟ್ರೀಯ ಮೇಳಗಳಲ್ಲಿ ಕರ್ನಾಟಕ ಪ್ರವಾಸೋದ್ಯಮ ಪರವಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭೀವೃದ್ಧಿ ನಿಗಮವು ಭಾಗವಹಿಸುವ ಸಂಬಂಧ, ಕರ್ನಾಟಕ ಪ್ರವಾಸೋದ್ಯಮ ಮಳಿಗೆ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಏಜೆನ್ಸಿ ಆಯ್ಕೆ ಕುರಿತು ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ವಿವರ ಕೆಳಕಂಡಂತಿದೆ.

| ಟೆಂಡರ್ ಸಂಖ್ಯೆ | ವಿವರಣೆ | ಇಎಂಡಿ ಮೊತ್ತ (ರೂ.) |
|---|---|---|
| ಕೆಎಸ್‌ಟಿಡಿಸಿ/ಪಿಆರ್‌ಒ/ 34/2020-21 ದಿ: 23.03.2021 | 2021–22ನೇ ಸಾಲಿನ ಅಂತರರಾಷ್ಟ್ರೀಯ ಪ್ರವಾಸೋದ್ಯಮ ಮೇಳಗಳಲ್ಲಿ ಕರ್ನಾಟಕ ಪ್ರವಾಸೋದ್ಯಮ ಭಾಗವಹಿಸಲು ಅನುಕೂಲ ಸೇವೆ ಒದಗಿಸಲು ಏಜೆನ್ಸಿ ಆಯ್ಕೆ. | 2,50,000/- |

ಆಸಕ್ತದಾರರು ಟೆಂಡರ್ ದಾಖಲೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಜಾಲತಾಣ https://www.eproc.karnataka.gov.in ವನ್ನು ಭೇಟಿ ನೀಡಲು ಕೋರಿದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : +91–80–23010900/01, ಇ–ಮೇಲ್ : hphelpdesk.blr@intarvo.comನ್ನು ಸಂಪರ್ಕಿಸುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನ ಪ್ರಾಧೀಕಾರ.

ವಾಸಾಸಂಇ/ಬೆಂ.ನ./3203/2020–21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ**

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ : 0816-2281105. ಇಮೇಲ್ : eemitmk@gmail.com

ಐ.ಎಫ್.ಟಿ ಸಂ. 1) 03/2020–21 ಕೆ.ಡಬ್ಲ್ಯೂ–3 (ದ್ವಿ ಲಕೋಟೆ) ದಿನಾಂಕ : 19–01–2021
2) 02/2020–21 ಕೆ.ಡಬ್ಲ್ಯೂ–3 (ದ್ವಿ ಲಕೋಟೆ) ದಿನಾಂಕ : 20–11–2020

**ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ದಿನಾಂಕ : 23-03-2021**

**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು** ವ್ಯಾಪ್ತಿಯಲ್ಲಿ 2020–21 ನೇ ಸಾಲಿನ ಪಟ್ಟಿಯಲ್ಲಿ **ಲೆಕ್ಕ ಶೀರ್ಷಿಕೆ : 4702–ವಿಶೇಷ ಘಟಕ ಯೋಜನೆ ಹಾಗೂ 4702–ಏತ ನೀರಾವರಿ ಯೋಜನೆ ಕಾಮಗಾರಿಗಳ** ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಐಟಂವಾರು ಟೆಂಡರ್‌ಗಳನ್ನು **ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 02/2020–21, ದಿನಾಂಕ : 20–11–2020, 03/2020–21, ದಿನಾಂಕ : 19–01–2021 ರಂದು** ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ **ವೆಬ್‌ಸೈಟ್ https://eproc.karnataka.gov.in** ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ.

**1) ಟೆಂಡರ್ ಪ್ರಕಟಣೆಯನ್ನು ದಿನಾಂಕ : 24–03–2021 ರಂದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪ್ರಕಟಿಸಲಾಗುವುದು. 2) ಅವಶ್ಯ ಟೆಂಡರ್ ಮಾಹಿತಿ / ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ : 31–03–2021 ರ ಬೆಳಿಗ್ಗೆ 11.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 3) ಗುತ್ತಿಗೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ : 31–03–2021 ರ ಸಾಯಂಕಾಲ 5.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 4) ತಾಂತ್ರಿಕ ಬಿಡ್ಡನ್ನು ದಿನಾಂಕ : 03–04–2021 ರ ಸಂಜೆ 5.30 ಗಂಟೆಗೆ ತೆರೆಯಲಾಗುವುದು. 5) ಆರ್ಥಿಕ ಬಿಡ್ಡನ್ನು ದಿನಾಂಕ : 16–04–2021 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.**

**ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ.**

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.

ಡಿಐಪಿಆರ್/ತುಮಕೂರು/13/ಮಣಿಪಾಲ್/20–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

**ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ**

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ) ಬೆಂಗಳೂರು–25.
ದೂರವಾಣಿ: 080–25584102 / 25594893. ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com

ಸಂಖ್ಯೆ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಕಾಂಟ್ರ್ಯಾಕ್ಟ್/ಟೆಂಡರ್/2020–21/815   ದಿನಾಂಕ: 22.03.2021

**ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ**

**ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್** ಕೆಳಕಂಡ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸುತ್ತಿದೆ.

1) ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿರುವ ನಗರ ಪೊಲೀಸ್ ಠಾಣೆ, ವೃತ್ತ ಕಚೇರಿ ಮತ್ತು ಮಹಿಳಾ ಪೊಲೀಸ್ ಠಾಣೆ ಕಟ್ಟಡದ ದುರಸ್ತಿ ಮತ್ತು ನವೀಕರಣ. ಗುತ್ತಿಗೆ ಅವಧಿ: 3 ತಿಂಗಳು (ಮಳೆಗಾಲ ಸೇರಿದಂತೆ).
2) ಮೈಸೂರಿನ ಕೆಪಿಎ ಕ್ಯಾಂಪಸ್‌ನಲ್ಲಿರುವ ಹೊಸಳ್ಳಿ ಅತಿಥಿ ಗೃಹ ದುರಸ್ತಿ ಮತ್ತು ಕೆಪಿಎ ಕ್ಯಾಂಪಸ್ ಮೈಸೂರಿನಲ್ಲಿರುವ ರಿಕ್ರಿಯೇಶನ್ ಕ್ಲಬ್‌ನ ರಿಪೇರಿ. ಗುತ್ತಿಗೆ ಅವಧಿ: 3 ತಿಂಗಳು (ಮಳೆಗಾಲ ಸೇರಿದಂತೆ).

ಆಸಕ್ತಿಯುಳ್ಳ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ವಿವರಗಳಾದ ಟೆಂಡರ್ ಶುಲ್ಕ, ಇಎಂಡಿ ವೆಚ್ಚಗಳು, ಟೆಂಡರ್ ದಾಖಲೆಗಳು ಇತರೆ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 26.03.2021** ರಿಂದ ಲಭ್ಯವಿರುತ್ತದೆ.

"ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು "ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್ ಹೊಂದಿದೆ".

**ಸೂಚನೆ:** ಇನ್ನು ಮುಂದೆ ಟೆಂಡರ್‌ನ ಯಾವುದೇ ಬದಲಾವಣೆ/ಮಾರ್ಪಾಡುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– **ಕಾರ್ಯಪಾಲಕ ಅಭಿಯಂತರರು ಗುತ್ತಿಗೆ ಪ್ರಭಾರ**

DIPR/DDU/BCPL/3209/2020-21

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

**ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ, ವಿಶೇಷ ವಿಭಾಗ, ಶಿವಮೊಗ್ಗ.**

ಫೋನ್‌ನಂ.:08182–222942 ಇ–ಮೇಲ್: spdivision@gmail.com

**ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)**
**(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)**

**ಐ.ಎಫ್.ಟಿ. ಸಂಖ್ಯೆ: 63/2020–21   ದಿ: 20.03.2021**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕೆಳಕಂಡ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲೂ–4 ನಿಯದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ 5054–04–337–0–01–422– ಜಿಲ್ಲಾ ಮತ್ತು ಇತರೆ ರಸ್ತೆಗಳು ಪರಿಶಿಷ್ಟ ಜಾತಿ ಉಪಯೋಜನೆ ಎಸ್.ಸಿ.ಪಿ & 5054–04–337–0–01–423– ಜಿಲ್ಲಾ ಮತ್ತು ಇತರೆ ರಸ್ತೆಗಳು ಗಿರಿಜನ ಉಪಯೋಜನೆ (ಟಿ.ಎಸ್.ಪಿ) ಲೆಕ್ಕಶೀರ್ಷಿಕೆಯಡಿಯಲ್ಲಿ ಶಿವಮೊಗ್ಗ ತಾಲ್ಲೂಕಿನಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ. 178.44 ಲಕ್ಷ & ಕನಿಷ್ಠ ಮೊತ್ತ ರೂ. 88.06 ಲಕ್ಷ ಹಾಗೂ ಇ.ಎಂ.ಡಿ, ಗರಿಷ್ಠ ಮೊತ್ತ ರೂ. 2.68 ಲಕ್ಷ & ಕನಿಷ್ಠ ಮೊತ್ತ ರೂ. 2.00 ಲಕ್ಷ, ಸದರಿ ಕಾಮಗಾರಿಯ ಟೆಂಡರ್ ಅವಧಿ 04 & 05 ತಿಂಗಳು ಮಳೆಗಾಲ ಸೇರಿ. ಸದರಿ ಕಾಮಗಾರಿಗೆ ಈ ಕೆಳಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿರುತ್ತಾರೆ.

ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 20.03.2021 ರಿಂದ 06.04.2021 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ : 06.04.2021 ರ ಸಂಜೆ 5:00 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ದಿನಾಂಕ: 07.04.2021 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 08.04.2021 ರ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ–148/03/ಎಂಸಿಎ/20–21

---




ನಿಮ್ಮ ಉತ್ತರವು ಎ ಬಿ ಸಿ ಸಾಲಿನ ಕ್ರಮದಲ್ಲಿ ಇದ್ದು, ಪ್ರತಿ ಸಾಲು ಎಡದಿಂದ ಬಲಕ್ಕೆ ಇರಬೇಕು.

ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

**ಚಿತ್ರಬಂಧ**

ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ

ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ. ಈ ಸ್ಪರ್ಧೆಯು ಒಂದು ವಾರಕ್ಕೆ ಮೂರು ದಿನಗಳು ಮಾತ್ರ ಪ್ರಕಟವಾಗುವುದು.

ಬಂಪರ್ ಬಹುಮಾನ*
ONE PLUS 7 PRO ಮೊಬೈಲ್

14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಝಾನ್ ಗಿಫ್ಟ್ ವೌಚರ್

ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8ರೊಳಗೆ 9246020020ಗೆ SMS ಮಾಡಿ.

ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859

*ಷರತ್ತುಗಳು ಅನ್ವಯ

ನಿನ್ನೆಯ ಉತ್ತರ: A675 B391 C482



# ಪಾಸ್‌ವರ್ಡ್ ಪರ್ಯಾಯಗಳು ಸುರಕ್ಷಿತವೇ?

ಪಾಸ್‌ವರ್ಡ್‌ಗೆ ಪರ್ಯಾಯವಾಗಿ ಫೇಸ್‌ಅನ್‌ಲಾಕ್, ಫಿಂಗರ್‌ಪ್ರಿಂಟ್ ಅನ್‌ಲಾಕ್ ಆಯ್ಕೆಗಳು ಹೆಚ್ಚು ಪರಿಣಾಮಕಾರಿ ಎನಿಸಿವೆ. ಆಗಾಗ್ಗೆ ಪಾಸ್‌ವರ್ಡ್ ಬದಲಿಸುವ ರಗಳೆ ಇರುವುದಿಲ್ಲ. ಹ್ಯಾಕಿಂಗ್‌ಗೆ ಒಳಗಾಗುವ ಸಾಧ್ಯತೆಯೂ ಕಡಿಮೆ. ಆದರೆ ಈ ಆಯ್ಕೆಗಳನ್ನೂ ಸಂಪೂರ್ಣವಾಗಿ ಸುರಕ್ಷಿತ ಎನ್ನಲಾಗದು.

**ವಿಶ್ವನಾಥ ಎಸ್.**

ತಿಂಗಳಿಗೊಮ್ಮೆ ಪಾಸ್‌ವರ್ಡ್ ಬದಲಿಸಬೇಕಾಗಿ ಬಂದಾಗ ತಲೆಬಿಸಿ ಆಗುತ್ತದೆ ಅಲ್ಲವೇ!? ಸಿಸ್ಟಂ, ಮೊಬೈಲ್, ಇ-ಮೇಲ್, ಫೇಸ್‌ಬುಕ್ – ಹೀಗೆ ಪ್ರತಿಯೊಂದಕ್ಕೂ ಪ್ರತ್ಯೇಕ ಪಾಸ್‌ವರ್ಡ್ ನೀಡಬೇಕಲ್ಲಾ ಎನ್ನುವ ಹತಾಶೆ ಮೂಡುತ್ತದೆ. ಹೆಸರಿನೊಂದಿಗೆ, ಮೊಬೈಲ್ ನಂಬರ್, ಇಸವಿ, ಜನ್ಮ ದಿನಾಂಕ – ಹೀಗೆ ಹಿಂದೆ ಮುಂದೆ ಮಾಡಿ ನೀಡಿದ ಪಾಸ್‌ವರ್ಡ್ ಎಲ್ಲವೂ ಖಾಲಿಯಾದ ಮೇಲೆ ಇನ್ನೇನು ಉಳಿದಿದೆ ಎನ್ನುವ ಪ್ರಶ್ನೆ ಎದುರಾಗುತ್ತದೆ.

ಶೇ. 80ರಷ್ಟು ಹ್ಯಾಕಿಂಗ್ ನಡೆಯುತ್ತಿರುವುದು ಅತ್ಯಂತ ಸುಲಭವಾದ ಪಾಸ್‌ವರ್ಡ್ ನೀಡುವುದರಿಂದಲೇ ಎನ್ನುತ್ತಿವೆ ಅಧ್ಯಯನ ವರದಿಗಳು. ಹಾಗಾದರೆ ಫಿಂಗರ್‌ಪ್ರಿಂಟ್ ಸ್ಕ್ಯಾನ್, ಫೇಶಿಯಲ್ ರೆಕಗ್ನಿಷನ್ ಸುರಕ್ಷಿತವೇ ಎಂದು ಪ್ರಶ್ನಿಸಿದರೆ, ಪಾಸ್‌ವರ್ಡ್‌ಗಿಂತಲೂ ಸುರಕ್ಷಿತ ಎಂದಷ್ಟೇ ಹೇಳಬಹುದು. ಏಕೆಂದರೆ, ಚೂಯಿಂಗ್ ಗಮ್ ಅನ್ನು ಫಿಂಗರ್‌ಪ್ರಿಂಟ್ ಸ್ಕ್ಯಾನ್ ಮಾಡುವ ಜಾಗದಲ್ಲಿ ಅಂಟಿಸಿ ನಕಲು ಮಾಡುವುದು, ಮುಖದ 3ಡಿ ಪ್ರಿಂಟೆಡ್ ಕಾಪಿ ಮಾಡಿ ಅಕ್ಸೆಸ್ ಮಾಡುವುದು ಹಾಲಿವುಡ್ ಸಿನಿಮಾಗಳಲ್ಲಿ ಸಾಮಾನ್ಯವಾಗಿಬಿಟ್ಟಿದೆ.

100 ಸ್ಮಾರ್ಟ್‌ಫೋನ್‌ಗಳಲ್ಲಿ 42 ಸ್ಮಾರ್ಟ್‌ಫೋನ್‌ಗಳು ಅದರ ಬಳಕೆದಾರರ ಫೋಟೊವನ್ನು ಪರದೆಯ ಎದುರಿಗೆ ಹಿಡಿದಾಕ್ಷಣ ಗುರುತಿಸಿ ಅನ್‌ಲಾಕ್ ಆಗಿವೆ ಎನ್ನುವುದನ್ನು ಡಚ್ ಸಂಶೋಧಕರು ಕಂಡುಕೊಂಡಿದ್ದಾರೆ. ತಂತ್ರಾಂಶದ ಕಾರ್ಯನಿರ್ವಹಣೆಯಲ್ಲಿನ ದೋಷದಿಂದಾಗಿಯೂ ಹೀಗಾಗಿರುವ ಸಾಧ್ಯತೆ ಇದೆ.

ಬೆರಳಿನ ರೇಖೆಗಳನ್ನು ಪಡೆಯಲು ಇನ್‌ಫ್ರಾರೆಡ್ ಫಿಲ್ಟರ್ ಇಲ್ಲದ ಕ್ಯಾಮೆರಾದಲ್ಲಿ 2,500 ಚಿತ್ರಗಳನ್ನು ಸೆರೆಹಿಡಿದು, ಅವುಗಳ ಆಧಾರದಲ್ಲಿ ಮೇಣದ ಹಸ್ತ ತಯಾರಿಸಿದರು.

ಈ ಮೂಲಕ ಬೆರಳಚ್ಚನ್ನೂ ನಕಲು ಮಾಡಿ ಅನ್‌ಲಾಕ್ ಮಾಡಲು ಸಾಧ್ಯವಿದೆ ಎನ್ನುವುದನ್ನು ಬರ್ಲಿನ್‌ನ ಖೆಯಾಸ್ ಕಮ್ಯೂನಿಕೇಷನ್ ಕಾಂಗ್ರೆಸ್‌ನ ಸಂಶೋಧಕರು ತೋರಿಸಿದ್ದಾರೆ.

## ಪಾಸ್‌ವರ್ಡ್ ಯುಗಾಂತ್ಯ?

ಬೋಸ್ಟನ್‌ನ ಟ್ರಾನ್ಸ್‌ಮಿಟ್ ಸೆಕ್ಯುರಿಟಿ ಎನ್ನುವ ಕಂಪನಿಯು ಪಾಸ್‌ವರ್ಡ್ ರಹಿತ ಸುರಕ್ಷತೆಗಾಗಿ BindID ಅಭಿವೃದ್ಧಿಪಡಿಸಿದೆ. ಇದು ಅತ್ಯಂತ ಸುಧಾರಿತ ಗುರುತು ದೃಢೀಕರಣ ನೆಟ್‌ವರ್ಕ್ ಆಗಿದ್ದು, ಗ್ರಾಹಕರು ಎಂಬೆಡೆಡ್ ಫಿಂಗರ್‌ಪ್ರಿಂಟ್ ಅಥವಾ ಫೇಸ್ ಸ್ಕ್ಯಾನರ್ ಬಳಸಿ ತಮ್ಮ ಖಾತೆಯನ್ನು ಪ್ರವೇಶಿಸಬಹುದು ಎಂದು ಅದು ಹೇಳಿಕೊಂಡಿದೆ. ಇದಕ್ಕಾಗಿ ಬಯೊಮೆಟ್ರಿಕ್ ರೀಡರ್ ಅಗತ್ಯವಿಲ್ಲ, ಗ್ರಾಹಕರು ತಮ್ಮ ಮೊಬೈಲ್ ಅನ್ನೇ ಬಳಸಬಹುದು ಎಂದೂ ಹೇಳಿದೆ. ಹಾಗಾದರೆ ಪಾಸ್‌ವರ್ಡ್ ಯುಗ ಅಂತ್ಯವಾಗಲಿದೆಯೇ ಎಂದರೆ, ಸದ್ಯಕ್ಕಂತೂ ಕಷ್ಟವೇ. ಏಕೆಂದರೆ, ಈಗಲೂ ಸಿಸ್ಟಂ, ಅಪ್ಲಿಕೇಷನ್‌ಗಳಿಗೆ ಪಾಸ್‌ವರ್ಡ್ ಬಳಕೆ ಅನಿವಾರ್ಯವಾಗಿದೆ. ವಾಯ್ಸ್ ರೆಕಗ್ನಿಷನ್, ಫೇಸ್‌ಅನ್‌ಲಾಕ್, ಫಿಂಗರ್‌ಪ್ರಿಂಟ್ ಅನ್‌ಲಾಕ್ ಆಯ್ಕೆಗಳ ಬಳಕೆ ಹೆಚ್ಚಾಗುತ್ತಿದ್ದರೂ ಇನ್ನೂ ಹಲವು ವರ್ಷಗಳವರೆಗೆ ಪಾಸ್‌ವರ್ಡ್ ತನ್ನ ಅಸ್ತಿತ್ವ ಉಳಿಸಿಕೊಳ್ಳಲಿದೆ. ಏಕೆಂದರೆ, ಒಂದೊಮ್ಮೆ ಪಾಸ್‌ವರ್ಡ್ ಹ್ಯಾಕ್ ಆದರೆ ಬದಲಿಸಲು ಸಾಧ್ಯವಿದೆ. ಆದರೆ ಒಮ್ಮೆ ನಮ್ಮ ಫಿಂಗರ್‌ಪ್ರಿಂಟ್ ಹ್ಯಾಕ್ ಆದರೆ ಬದಲಾಯಿಸಲು ಆಗುವುದಿಲ್ಲ ಎನ್ನುವುದು ಕೆಲವು ತಜ್ಞರ ಅಭಿಪ್ರಾಯ.

### ಕೆಟ್ಟ ಪಾಸ್‌ವರ್ಡ್‌ಗಳು

ಪ್ರತೀ ವರ್ಷವೂ ಅತ್ಯಂತ ಕೆಟ್ಟ ಅಥವಾ ಅತ್ಯಂತ ಸರಳವಾದ ಪಾಸ್‌ವರ್ಡ್‌ಗಳ ಪಟ್ಟಿಯನ್ನು ವಿವಿಧ ಸಂಸ್ಥೆಗಳು ನೀಡುತ್ತವೆ. ಈ ಸಂಸ್ಥೆಗಳು ಹೇಳುವ ಪ್ರಕಾರ ಜನರು ಪಾಸ್‌ವರ್ಡ್‌ಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಲೇ ಇಲ್ಲ. ಏಕೆಂದರೆ, ಸಂಸ್ಥೆಗಳು ಈಗಾಗಲೇ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಇರುವ ಪಾಸ್‌ವರ್ಡ್‌ಗಳನ್ನೇ ಮತ್ತೆ ಮತ್ತೆ ಬಳಸಲಾಗುತ್ತಿದೆ. ನಾರ್ಡ್‌ಪಾಸ್ ಕಂಪನಿ ನೀಡಿರುವ ವರದಿಯಂತೆ ಪ್ರಮುಖ 10 ಕೆಟ್ಟ ಪಾಸ್‌ವರ್ಡ್‌ಗಳಲ್ಲಿ ಹಲವು ಪಾಸ್‌ವರ್ಡ್‌ಗಳು ಸಂಖ್ಯೆಗಳನ್ನೇ ಒಳಗೊಂಡಿವೆ. ಇವುಗಳಲ್ಲಿ '123456' ಮೊದಲ ಸ್ಥಾನದಲ್ಲಿದ್ದರೆ, '123456789' ಎರಡು ಹಾಗೂ '12345678' ಐದನೇ ಸ್ಥಾನದಲ್ಲಿದೆ.

2020ರ ಕೆಲವು ಕೆಟ್ಟ ಪಾಸ್‌ವರ್ಡ್‌ಗಳು: A) 123456 B) 123456789 C) picture1 D)password E) 12345678 F) 111111 G) 123123 H) 12345 I) 1234567890 J) senha

# ಸ್ಮಾರ್ಟ್ ಸ್ಪೀಕರ್ ಲೋಕದಲ್ಲಿ...

**ಕಿರಣ್ ಐ.ಜಿ.**

ಮನೆಯಲ್ಲಿ ಒಂಟಿಯಾಗಿರುವವರು, ಹಿರಿಯರು ಮತ್ತು ಮಕ್ಕಳಿಗೆ ಸ್ಮಾರ್ಟ್ ಸ್ಪೀಕರ್‌ಗಳು ವಿವಿಧ ರೀತಿಯಲ್ಲಿ ನೆರವಾಗುತ್ತವೆ.

**ಸ್ಮಾರ್ಟ್** ತಂತ್ರಜ್ಞಾನದಿಂದ ಜನರು ವಿವಿಧ ಕೆಲಸ ಕಾರ್ಯಗಳನ್ನು ಸುಲಭವಾಗಿ ಸ್ಮಾರ್ಟ್ ಆಗಿ ಮಾಡುತ್ತಿದ್ದಾರೆ. ಬೆಳಗೆದ್ದು ರಾತ್ರಿ ಮಲಗುವವರೆಗೆ ವೈಯಕ್ತಿಕ ಮತ್ತು ಕಚೇರಿ ಕೆಲಸಕ್ಕೆ ಪೂರಕವಾಗುವಂತೆ ಜನರು ಸ್ಮಾರ್ಟ್ ಗ್ಯಾಜೆಟ್‌ಗಳನ್ನು ಬಳಕೆ ಮಾಡುತ್ತಿದ್ದಾರೆ. ಈ ಪೈಕಿ ಹಲವು ವಿಶೇಷತೆ ಹೊಂದಿರುವ ಗ್ಯಾಜೆಟ್ ಎಂದರೆ ಅದು ಸ್ಮಾರ್ಟ್ ಸ್ಪೀಕರ್.

ಸ್ಮಾರ್ಟ್ ಸ್ಪೀಕರ್ ಮಾರುಕಟ್ಟೆಯಲ್ಲಿ ವಿವಿಧ ಮಾದರಿಗಳು ಇಂದು ಲಭ್ಯವಿದೆ. ಗೂಗಲ್ ಹೋಮ್, ಅಮೆಜಾನ್ ಅಲೆಕ್ಸಾ ಮತ್ತು ಆ್ಯಪಲ್ ಹೋಮ್‌ಪಾಡ್ ಇದರಲ್ಲಿ ಪ್ರಮುಖವಾದವುಗಳು.

ಗೂಗಲ್ ಬಳಕೆದಾರರಿಗೆ ಹೋಮ್ ಹೆಸರಿನಲ್ಲಿ ವಿವಿಧ ವಿನ್ಯಾಸ ಮತ್ತು ಗಾತ್ರದ ಸ್ಮಾರ್ಟ್ ಸ್ಪೀಕರ್‌ಗಳನ್ನು ಒದಗಿಸುತ್ತದೆ. ಅಮೆಜಾನ್, ಅಲೆಕ್ಸಾ ಹೆಸರಿನಲ್ಲಿ ಹಲವು ಮಾದರಿಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಆ್ಯಪಲ್ ಹೋಮ್‌ಪಾಡ್ ಹೆಸರಿನ ಸ್ಮಾರ್ಟ್ ಸ್ಪೀಕರ್ ಪರಿಚಯಿಸಿತ್ತು. ನಂತರದಲ್ಲಿ ಹೋಮ್‌ಪಾಡ್ ಮಿನಿ ಎಂಬ ಪುಟ್ಟ ಸ್ಮಾರ್ಟ್ ಸ್ಪೀಕರ್ ಅನ್ನು ಪರಿಚಯಿಸಿದೆ.

ಅಮೆಜಾನ್ ಅಲೆಕ್ಸಾ ಭಾರತದಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯಾಚರಿಸುತ್ತಿದೆ. ಇದು ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಕಾರ್ಯನಿರ್ವಹಿಸುತ್ತದೆ. ಗೂಗಲ್ ಕೂಡ ಹಿಂದಿ ಮತ್ತು ಇಂಗ್ಲಿಷ್‌ಗೆ ಬೆಂಬಲ ನೀಡುತ್ತದೆ.

ನ್ಯೂಸ್ ಕೇಳಲು, ಪಾಡ್‌ಕಾಸ್ಟ್ ಆಲಿಸಲು, ಸಂಗೀತ, ಅಲಾರ್ಮ್, ನೋಟ್ಸ್, ರಿಮೈಂಡರ್, ಮನೆಯಲ್ಲಿನ ಸ್ಮಾರ್ಟ್ ಉಪಕರಣಗಳನ್ನು ನಿಯಂತ್ರಿಸಲು ಸ್ಮಾರ್ಟ್ ಸ್ಪೀಕರ್ ಬಳಕೆಯಾಗುತ್ತದೆ. ಸ್ಮಾರ್ಟ್ ಲೈಟ್, ಸ್ಮಾರ್ಟ್ ಫ್ಯಾನ್ ಇದ್ದರೆ ಕೂಡ ಸ್ಮಾರ್ಟ್ ಸ್ಪೀಕರ್ ಸಂಪರ್ಕಿಸಿ, ನಿಮ್ಮ ಧ್ವನಿಯ ಮೂಲಕವೇ ನಿಯಂತ್ರಿಸಬಹುದು.

ಗೂಗಲ್ ಹೋಮ್ ಸ್ಮಾರ್ಟ್ ಸ್ಪೀಕರ್‌ಗಳಲ್ಲಿ ಪ್ರೀಮಿಯಂ ಫೀಚರ್ ಬಳಸಬೇಕಾದರೆ ನಿಮ್ಮಲ್ಲಿ ಯೂಟ್ಯೂಬ್ ಪ್ರೀಮಿಯಂ ಪ್ಲ್ಯಾನ್ ಇದ್ದರೆ ಉತ್ತಮ. ಅದೇ ರೀತಿಯಲ್ಲಿ ಅಮೆಜಾನ್ ಅಲೆಕ್ಸಾದಲ್ಲಿ ಅಮೆಜಾನ್ ಪ್ರೈಮ್ ಮ್ಯೂಸಿಕ್ ಚಂದಾದಾರಿಕೆ ಇದ್ದರೆ ಹೆಚ್ಚು ಅನುಕೂಲ. ಅದೇ ರೀತಿಯಲ್ಲಿ ಆ್ಯಪಲ್ ಮ್ಯೂಸಿಕ್ ಚಂದಾ ಹೊಂದಿರುವವರು ಆ್ಯಪಲ್ ಹೋಮ್ ಪಾಡ್‌ನಲ್ಲಿ ವಿವಿಧ ರೀತಿಯ ಸಂಗೀತವನ್ನು ಸವಿಯಬಹುದು.

ಮನೆಯಲ್ಲಿ ಒಂಟಿಯಾಗಿರುವವರು, ಹಿರಿಯರು ಮತ್ತು ಮಕ್ಕಳಿಗೆ ಸ್ಮಾರ್ಟ್ ಸ್ಪೀಕರ್‌ಗಳು ವಿವಿಧ ರೀತಿಯಲ್ಲಿ ನೆರವಾಗುತ್ತವೆ. ಸ್ಮಾರ್ಟ್‌ಫೋನ್ ಅನ್ನು ಸ್ಮಾರ್ಟ್‌ಸ್ಪೀಕರ್‌ಗೆ ಸಂಪರ್ಕಿಸಿದರೆ ಅದರ ಮೂಲಕವೇ ಕರೆ, ಮೆಸೇಜ್ ನಿರ್ವಹಣೆಯನ್ನೂ ಮಾಡಬಹುದು. ಕ್ಯಾಲೆಂಡರ್, ಹವಾಮಾನ ಮತ್ತು ಟ್ರಾಫಿಕ್ ಅಪ್‌ಡೇಟ್‌ಗಳನ್ನು ಕೂಡ ಸ್ಮಾರ್ಟ್‌ಸ್ಪೀಕರ್ ಮೂಲಕ ಪಡೆಯಬಹುದು.

## ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

# Grandma Climbs a Tree
## Ruskin Bond (contd..)

ಇಂಗ್ಲಿಷ್

ಎಸ್ಸೆಸ್ಸೆಲ್ಸಿ

**Poet's** father assured to his mother that the work on the tree-house would start that very night. The joyous assurance to grandma is stated in the poem as 'That's all right- You'll have what you want, dear. I'll start work tonight'.

In the last stanza, poet explains his cheerful participation as 'expert assistance' to his father in the building chore (work/ task) of tree-house which finally stood in a tree top with windows and a door upholding her right to reside in a tree. Climbing up the tree to the granny's new home and offering her sherry became a daily routine of the poet. The outcome was a wholeheartedly content granny who would every evening drink wine (sherry) offered by the poet.

We could draw inference from the poem – Grandma Climbs a Tree in regards to its hidden moral values to be learnt in the following way: 'It is our duty to be grateful to the great sacrifices of our parents which is practically impossible, but we can be respectful to their feelings and also there can be no return gift to the lessons our parents taught us about life. However, we still can make them feel comfortable and happy by always being assertive and supportive not only to all their needs and requirements which is mandatory but also to their wishes and desires which would keep them more happy and blissful than anything else in the world'.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮ ಭೌತಶಾಸ್ತ್ರ ವಿಭಾಗದ 'ಮ್ಯಾಗ್ನೆಟಿಕ್ ಎಫೆಕ್ಟ್ಸ್, ಸೋಲೊನಾಯ್ಡ್ ಅಂಡ್ ಎಲೆಕ್ಟ್ರೊ ಮ್ಯಾಗ್ನೆಟ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/39aB1V0

# ನಿರ್ಧಾರಕಗಳು

ಗಣಿತ

ದ್ವಿತೀಯ ಪಿಯುಸಿ

**ಒಂದು** ಚೌಕುಳಿ ಕೋಶ A = [$a_{ij}$] ನ ದರ್ಜೆ n ಆಗಿರಲಿ, ಅದಕ್ಕೆ ಸೂಕ್ತವಾದ ಸಂಖ್ಯೆಯನ್ನು ಕೋಶದ ನಿರ್ಧಾರಕ ಎನ್ನುತ್ತೇವೆ. ಈ ಹೇಳಿಕೆಯನ್ನು ಪ್ರತಿಯೊಂದು ಚೌಕುಳಿ ಕೋಶದ ಸಂಖ್ಯೆಯ ಉತ್ಪನ್ನ ವ್ಯಾಖ್ಯೆ ಎಂದು ಪರಿಗಣಿಸುತ್ತೇವೆ. m ಎಂಬುದು ಚೌಕುಳಿ ಕೋಶದ ಗಣವಾಗಿರಲಿ. k ಎಂಬುದು ನೈಜ ಅಥವಾ ಕಾಲ್ಪನಿಕ ಸಂಖ್ಯೆಗಳ ಗಣವಾಗಿರಲಿ ಮತ್ತು f:m - > k ಅನ್ನು f(A) = k ಇಲ್ಲಿ $A \in M$ ಮತ್ತು $K \in K$ ಆದಾಗ f(A) ನ್ನು ಕೋಶ A ನ ನಿರ್ಧಾರಕ ಎನ್ನುತ್ತೇವೆ. ಇದನ್ನು [A] ಅಥವಾ de t A ಎಂದು ಸೂಚಿಸುತ್ತೇವೆ. ಚೌಕುಳಿ ಕೋಶಗಳು ಮಾತ್ರ ನಿರ್ಧಾರಕಗಳಾಗಿರುತ್ತವೆ.

**ದರ್ಜೆ ಒಂದರ ಕೋಶದ ನಿರ್ಧಾರಕ**

A = [a] ಈ ಕೋಶದ ದರ್ಜೆಯು ಒಂದು ಆಗಿದೆ. ಅದರ ನಿರ್ಧಾರಕವು a ಆಗಿರುತ್ತದೆ.

**ಎರಡರ ದರ್ಜೆಯ ನಿರ್ಧಾರಕ**

$A = \begin{vmatrix} a_{11} & a_{12} \\ a_{21} & a_{22} \end{vmatrix}$ ಈ ದರ್ಜೆಯ 2 ಆಗಿದೆ.

$de\,t\,A = \begin{vmatrix} a_{11} & a_{12} \\ a_{21} & a_{22} \end{vmatrix} = a_{11}\,a_{22} - a_{21}\,a_{12}$ ಇದರ ನಿರ್ಧಾರಕ ವಾಗಿದೆ.

ಉದಾಹರಣೆ: $\begin{bmatrix} 2 & 4 \\ -1 & 2 \end{bmatrix}$ ರ ಬೆಲೆಯನ್ನು ಕಂಡು ಹಿಡಿಯಿರಿ.

ಪರಿಹಾರ: $\begin{vmatrix} 2 & 4 \\ -1 & 2 \end{vmatrix} = 2 \times 2 - 4\,(-1) = 4 + 4 = 8$

ಉದಾಹರಣೆ: $\begin{vmatrix} x & x+1 \\ x-1 & x \end{vmatrix}$ ದ ಬೆಲೆಯನ್ನು ಕಂಡು ಹಿಡಿಯಿರಿ

ಪರಿಹಾರ: $\begin{vmatrix} x & x+1 \\ x-1 & x \end{vmatrix} = x.x - (x-1)(x+1) = x^2 - (x^2 - 1) = 1$

**ಮೂರರ ದರ್ಜೆಯ ನಿರ್ಧಾರಕ**

ಮೂರರ ದರ್ಜೆಯ ನಿರ್ಧಾರಕಗಳನ್ನು ಎರಡರ ದರ್ಜೆಯ ನಿರ್ಧಾರಕಗಳಾಗಿ ಪರಿವರ್ತಿಸುವುದು. ಇವುಗಳನ್ನು ಅಡ್ಡಸಾಲು (ಕಂಬಸಾಲು) ಗಳ ವಿಸ್ತರಣಾ ರೂಪವೆಂದು ಕರೆಯುತ್ತೇವೆ. ಮೂರರ ಶ್ರೇಣಿಯ ನಿರ್ಧಾರಗಳನ್ನು ಕಂಡು ಹಿಡಿಯಲು ತಲಾ ಮೂರು ಅಡ್ಡಸಾಲುಗಳಂತೆ ಮತ್ತು ಮೂರು ಕಂಬಸಾಲುಗಳಂತೆ ಒಟ್ಟು ಆರು ಹಂತಗಳಿಂದ ನಿರ್ಧಾರಕ ಬೆಲೆಯನ್ನು ಕಂಡುಹಿಡಿಯಬಹುದು. ಯಾವುದೇ ಅಡ್ಡ ಸಾಲು ಅಥವಾ ಕಂಬಸಾಲುಗಳನ್ನು ವಿಸ್ತರಿಸುವುದರ ಮೂಲಕ ನಿರ್ಧಾರಕಗಳ ಬೆಲೆಗಳನ್ನು ಕಂಡು ಹಿಡಿದರೂ ಅದು ಒಂದೇ ಆಗಿರುತ್ತದೆ ಎಂದು ತಿಳಿಯುತ್ತೇವೆ. ನಿರ್ಧಾರಕಗಳ ಬೆಲೆಯನ್ನು ಕಂಡುಹಿಡಿಯುವಾಗ ಅಡ್ಡಸಾಲು ಅಥವಾ ಕಂಬ ಸಾಲುಗಳಲ್ಲಿ ಹೆಚ್ಚು ಸೊನ್ನೆಗಳು ಬರುವಂತಿದ್ದರೆ ಸಂಕ್ಷೇಪಿಸುವಿಕೆ ಸುಲಭವಾಗುತ್ತದೆ.

ನಾವು ಅಡ್ಡಸಾಲನ್ನು ವಿಸ್ತರಿಸಿ ನಿರ್ಧಾರಕದ ಬೆಲೆಯನ್ನು ಕಂಡುಹಿಡಿಯೋಣ.

$$[A] = \begin{vmatrix} a_{11} & a_{12} & a_{13} \\ a_{21} & a_{22} & a_{23} \\ a_{31} & a_{32} & a_{33} \end{vmatrix}$$

$$[A] = (-1)^{1+1}\left(a_{11}\begin{vmatrix} a_{22} & a_{23} \\ a_{32} & a_{33} \end{vmatrix} +\right)(-1)^{1+2}a_{12}\begin{vmatrix} a_{21} & a_{23} \\ a_{31} & a_{33} \end{vmatrix} + (-1)^{1+3}a_{12}\begin{vmatrix} a21 & a22 \\ a31 & a32 \end{vmatrix}$$

$$|A| = a_{11}\,a_{22}\,a_{33} - a_{11}\,a_{32}\,a_{23} - a_{12}\,a_{21}\,a_{33} + a_{12}\,a_{31}\,a_{23} + a_{13}\,a_{21}\,a_{32} - a_{13}\,a_{31}\,a_{21}$$

ಉದಾಹರಣೆ: : $\Delta = \begin{vmatrix} 1 & 2 & 4 \\ -1 & 3 & 0 \\ 4 & 1 & 0 \end{vmatrix}$ ದ ಬೆಲೆಯನ್ನು ಕಂಡುಹಿಡಿಯಿರಿ

ಪರಿಹಾರ: C3 ನಲ್ಲಿ ಸೊನ್ನೆಗಳಿವೆ C3 ಕಂಬ ಸಾಲಿನ ಮೇಲೆ ವಿಸ್ತರಿಸಿದಾಗ

$$\Delta = 4\begin{vmatrix} -1 & 3 \\ 4 & 1 \end{vmatrix} - 0\begin{vmatrix} 1 & 2 \\ 4 & 1 \end{vmatrix} + 0\begin{vmatrix} 1 & 2 \\ -1 & 3 \end{vmatrix}$$

$$\Delta = 4(-1-12) - 0 + 0 = -52$$

ಉದಾಹರಣೆ: $\begin{vmatrix} 3 & x \\ x & 1 \end{vmatrix} = \begin{vmatrix} 3 & 2 \\ 4 & 1 \end{vmatrix}$ ಆದಾಗ $x$ ನ ಬೆಲೆಯನ್ನು ಕಂಡು ಹಿಡಿಯಿರಿ.

ಪರಿಹಾರ: $3 - x^2 = 3 - 8$

$x^2 = 8$

$x = \pm 2\sqrt{2}$

(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ನ್ಯೂಕ್ಲಿ_ನ್ಯೂಕ್ಲಿಯರ್ ರಿಯಾಕ್ಟರ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3vLcobc


# ವಿದ್ಯಾರ್ಥಿಗಳ ಸಾಧನೆ ಬಿಂಬಿಸಿದ ರೇವಾ ಇಂಪ್ರಿಂಟ್

ಈ ಕಾರ್ಯಕ್ರಮವು 'ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ ಅಧ್ಯಯನ ಶಾಲೆ'ಯ ಅನನ್ಯ ಗುಣಗಳನ್ನು ಎಲ್ಲ ಭಾಗೀದಾರರಿಗೂ ಪರಿಚಯಿಸಿತು.

'ರೇವಾ ವಿಶ್ವವಿದ್ಯಾಲಯ'ದ 'ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ ಅಧ್ಯಯನ ಶಾಲೆ' ಶುರುವಾದ ದಿನದಿಂದ ಇಲ್ಲಿಯವರೆಗೆ ಅಕಡೆಮಿಕ್ ವಲಯದಲ್ಲಿ, ಕ್ರೀಡೆಗಳಲ್ಲಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ಸಂಶೋಧನೆಗಳಲ್ಲಿ, ಅಂತರರಾಷ್ಟ್ರೀಯ ಮಟ್ಟದ ಸಂಬಂಧ ಬೆಳೆಸಿಕೊಳ್ಳುವಲ್ಲಿ, ನವೋದ್ಯಮಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ, ಕೌಶಲ ಅಭಿವೃದ್ಧಿ ಯೋಜನೆಗಳಲ್ಲಿ, ಸಾಮಾಜಿಕವಾಗಿ ತೊಡಗಿಸಿಕೊಳ್ಳುವಿಕೆಯಲ್ಲಿ, ಹಳೆ ವಿದ್ಯಾರ್ಥಿಗಳ ಸಾಧನೆಗಳಲ್ಲಿ ಮತ್ತು ಇತರ ಹಲವು ವಲಯಗಳಲ್ಲಿ ತಾನು ಸಾಧಿಸಿದ್ದನ್ನು, ಬೆಳೆದಿದ್ದನ್ನು 'ರೇವಾ ಇಂಪ್ರಿಂಟ್' ಕಾರ್ಯಕ್ರಮದಲ್ಲಿ ಪ್ರದರ್ಶಿಸಲಾಯಿತು. ಇಂಪ್ರಿಂಟ್ ಕಾರ್ಯಕ್ರಮವು ರೇವಾ ವಿಶ್ವವಿದ್ಯಾಲಯದ ಕುವೆಂಪು ಸಭಾಂಗಣದಲ್ಲಿ ಮಾರ್ಚ್ 19ರಂದು ನಡೆಯಿತು.

ಈ 'ಶಾಲೆ' ಹಲವು ರ್‍ಯಾಂಕ್‌ಗಳಿಗೆ ಹಾಗೂ ಮಾನ್ಯತೆಗಳಿಗೆ ಪಾತ್ರವಾಗಿದೆ. ಇವು 'ಶಾಲೆ'ಯಲ್ಲಿ ಸಿಗುವ ಅಕಡೆಮಿಕ್ ವಾತಾವರಣಕ್ಕೆ ಹಾಗೂ 'ಶಾಲೆ'ಯ ಇಡೀ ಚಟುವಟಿಕೆಗಳಿಗೆ ಇನ್ನಷ್ಟು ಮೌಲ್ಯ ತಂದುಕೊಟ್ಟಿವೆ. 'ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ ಅಧ್ಯಯನ ಶಾಲೆ' ತನ್ನ ಹಾಲಿ ವಿದ್ಯಾರ್ಥಿಗಳು ಹಾಗೂ ಹಳೆಯ ವಿದ್ಯಾರ್ಥಿಗಳು ಕಂಡ ಪ್ರಗತಿಯನ್ನು ಮಾತ್ರ ಪ್ರದರ್ಶಿಸಲಿಲ್ಲ; ಅದು ತನ್ನ ಸಿಬ್ಬಂದಿಯ ಸಾಧನೆಗಳನ್ನು ಕೂಡ ಜಾಹೀರು ಮಾಡಿತು.

ವಿಶ್ವವಿದ್ಯಾಲಯದ ಬೆಳವಣಿಗೆಗೆ ಅಗಾಧ ಕೊಡುಗೆ ನೀಡಿದ ಎಲ್ಲ ಭಾಗೀದಾರರ ಪ್ರಯತ್ನಗಳನ್ನು ಗುರುತಿಸುವುದು, ವಿಶ್ವವಿದ್ಯಾಲಯಗಳು ತಮ್ಮ ಅಧೀನದ ಎಲ್ಲ ವಿಭಾಗಗಳ ಪ್ರಗತಿಯನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಅವುಗಳ ಬಗ್ಗೆ ಅವಲೋಕನ ನಡೆಸುವುದು ಮುಖ್ಯವಾದುದು.

ಕಾರ್ಯಕ್ರಮದಲ್ಲಿ 'ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ ಅಧ್ಯಯನ ಶಾಲೆ'ಯಲ್ಲಿ ಗಮನಾರ್ಹವಾದ ಸಾಧನೆ ಮಾಡಿದವರಿಗೆ ಸ್ಮರಣಿಕೆಯನ್ನು ನೀಡಿ ಮೆಚ್ಚುಗೆ ವ್ಯಕ್ತಪಡಿಸಲಾಯಿತು. ಇದು ಅವರು ತೋರಿದ ಬದ್ಧತೆ ಹಾಗೂ ಅವರು ಹಾಕಿದ ಶ್ರಮಕ್ಕೆ ಒಂದು ಪ್ರಮಾಣಪತ್ರ ಇದ್ದಂತೆ. ಅವರಿಗೆ ಮುಂದಿನ ಕಾರ್ಯಗಳಿಗೆ ಉತ್ತೇಜನ ನೀಡುವಂಥದ್ದು ಇದು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ. ಶ್ಯಾಮ ರಾಜು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ. ಧನಂಜಯ ಹಾಗೂ 'ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ ಅಧ್ಯಯನ ಶಾಲೆ'ಯ ನಿರ್ದೇಶಕಿ ಡಾ. ಶುಭಾ ಎ. ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. 'ಅಧ್ಯಯನ ಶಾಲೆಯ ಬೋಧಕ ಸಿಬ್ಬಂದಿ, ಇತರ ಸಿಬ್ಬಂದಿಯ ಅರ್ಪಣಾ ಮನೋಭಾವದ ಕಾರಣದಿಂದಾಗಿ, ಮಾಧ್ಯಮಗಳ ಬೆಂಬಲದಿಂದಾಗಿ ರೇವಾ ವಿಶ್ವವಿದ್ಯಾಲಯವು ಇಷ್ಟು ದೊಡ್ಡ ವಿಶ್ವವಿದ್ಯಾಲಯವಾಗಿ ಬೆಳೆದಿದೆ. ಮುಂದೆ ನಾವು ಇನ್ನೂ ಹಲವು ಸಾಧನೆಗಳನ್ನು ಮಾಡಬೇಕಿದೆ. ರೇವಾ ವಿಶ್ವವಿದ್ಯಾಲಯವನ್ನು ದಕ್ಷಿಣ ಭಾರತದಲ್ಲಿ ಅತ್ಯುತ್ತಮ ಆಗಿಸುವ ನಿಟ್ಟಿನಲ್ಲಿ ಕೆಲಸ ಮಾಡುವಂತೆ ನಾನು ರೇವಾ ಕುಟುಂಬದ ಎಲ್ಲರಿಗೂ ಕರೆ ನೀಡುತ್ತೇನೆ' ಎಂದು ಡಾ. ಧನಂಜಯ ಹೇಳಿದರು.

'ಅಧ್ಯಯನ ಶಾಲೆಯ ಯಶಸ್ಸಿಗೆ ಎಲ್ಲರೂ ಒಂದು ತಂಡವಾಗಿ ಕೆಲಸ ಮಾಡಿದ್ದು, ಕೊಡುಗೆ ನೀಡಿದ್ದು ಕಾರಣ' ಎಂದು ಡಾ. ಶುಭಾ ಹೇಳಿದರು. 'ಪ್ರಗತಿ ಹಾಗೂ ಬೆಳವಣಿಗೆಯ ಹಾದಿಯಲ್ಲಿ ಬಹಳಷ್ಟು ಕೆಲಸ ಆಗಿದೆ, ಇನ್ನಷ್ಟು ಕೆಲಸ ಆಗಬೇಕಿದೆ. ಎಲ್ಲ ಭಾಗೀದಾರರು ಒಂದು ಒಳ್ಳೆಯ ತಂಡವಾಗಿ ಕೆಲಸ ಮಾಡಿದ್ದರ, ಕೊಡುಗೆ ನೀಡಿದ್ದರ ಫಲವಾಗಿ ಯಶಸ್ಸು ದೊರೆಯುತ್ತದೆ. ವಾಣಿಜ್ಯ ಮತ್ತು ಆಡಳಿತ ನಿರ್ವಹಣಾ ಅಧ್ಯಯನ ಶಾಲೆಯ ಯಶಸ್ಸನ್ನು ನಾವು ಇತರರಿಗೆ ತೋರಿಸುತ್ತಿರುವ ಈ ಹೊತ್ತಿನಲ್ಲಿ, ಈ ಸುದೀರ್ಘ ಪ್ರಯಾಣದಲ್ಲಿ ನಮಗೆ ಬೆಂಬಲ ನೀಡಿದ ಹಾಗೂ ಪ್ರೋತ್ಸಾಹ ನೀಡಿದ ಎಲ್ಲರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಒಂದು ತಂಡವಾಗಿ ಕೆಲಸ ಮಾಡುವುದು ನಮ್ಮ ಮಂತ್ರ. ನಮ್ಮ ಎಲ್ಲ ಯಶಸ್ಸುಗಳಿಗೆ ಕಾರಣ ಪ್ರೇರಣಾದಾಯಿ ಆಡಳಿತ ಮಂಡಳಿ, ಪಾಲಕರು, ಹಳೆ ವಿದ್ಯಾರ್ಥಿಗಳು, ನೇಮಕಾತಿಯವರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ' ಎಂದು ಡಾ. ಶುಭಾ ಹೇಳಿದರು.



ಇದು ರೇವಾ ವಿಶ್ವವಿದ್ಯಾಲಯದ 'ಶಾಲೆ'ಗಳ ಸಾಧನೆಗಳನ್ನು ತೋರಿಸಿಕೊಟ್ಟಿತು. ಪ್ರತಿ ಶಾಲೆಯ ಅನನ್ಯತೆಯನ್ನು ಇದು ಭಾಗೀದಾರರಾದ ವಿದ್ಯಾರ್ಥಿಗಳು, ಪಾಲಕರು ಮತ್ತು ಇತರ ಸಿಬ್ಬಂದಿಗೆ ಪರಿಚಯಿಸಿಕೊಟ್ಟಿತು. ಈ ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿನ ಕಲಿಕೆಯಿಂದ ಪ್ರಯೋಜನ ಪಡೆದುಕೊಳ್ಳುವವರು ಅವರು.

ಪ್ರಾಯೋಗಿಕ ಕಲಿಕೆಯ ವಾತಾವರಣ ರೂಪಿಸಿ, ಪ್ರತಿ ವಿದ್ಯಾರ್ಥಿಗೂ ಪ್ರಯೋಜನ ಆಗುವ ರೀತಿಯಲ್ಲಿ 'ಅಧ್ಯಯನ ಶಾಲೆ'ಯ ಪಠ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ. ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ ಅಧ್ಯಯನ ಶಾಲೆಯು ವಿಶೇಷವಾಗಿ ಉದ್ಯಮಿಗಳನ್ನು ಬೆಳೆಸುವ ನಿಟ್ಟಿನಲ್ಲಿ, ಆಡಳಿತ ನಿರ್ವಹಣೆಯ ಕೌಶಲ ಬೆಳೆಸುವಲ್ಲಿ ಮತ್ತು ಉದ್ಯಮಶೀಲತೆಯ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ.

ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ ಅಧ್ಯಯನ ಶಾಲೆಯು ಕೇವಲ 150 ಜನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯೊಂದಿಗೆ ಆರಂಭವಾಯಿತು. ಇದು ಎರಡು ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯ ಗಾತ್ರಕ್ಕೆ ಬೆಳೆದಿದೆ. ನಮ್ಮ ಹಳೆಯ ವಿದ್ಯಾರ್ಥಿಗಳಲ್ಲಿ ಹಲವರು ಈಗ ಉದ್ಯಮಿಗಳಾಗಿದ್ದಾರೆ. ಅವರ ಸಾಧನೆ ಹಾಗೂ ಬೆಳವಣಿಗೆಯನ್ನು ನೋಡಲು ಖುಷಿಯಾಗುತ್ತದೆ. ಹೆಚ್ಚೆಚ್ಚು ವಿದ್ಯಾರ್ಥಿಗಳು ಉದ್ಯಮಿಗಳಾಗುವುದನ್ನು ನೋಡಲು ನಾನು ಬಯಸುತ್ತೇನೆ.

**ಡಾ.ಪಿ. ಶ್ಯಾಮ ರಾಜು,** ಕುಲಾಧಿಪತಿ, ರೇವಾ ವಿಶ್ವವಿದ್ಯಾಲಯ



(ನಿಂತವರು, ಬಲದಿಂದ ಎಡಕ್ಕೆ) ವಾಣಿಜ್ಯ ಶಾಲೆಯ ಸಹಾಯಕ ನಿರ್ದೇಶಕ ಪ್ರೊ.ಜಿ. ಕಾಂತರಾಜು, ಅಬುಲ್ ಹಸನ್ ಖಾಲಿದ್, ವಾಣಿಜ್ಯ ಮತ್ತು ಆಡಳಿತ ನಿರ್ವಹಣಾ ಅಧ್ಯಯನ ಶಾಲೆಯ ನಿರ್ದೇಶಕಿ ಡಾ. ಶುಭಾ ಎ., ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ. ಶ್ಯಾಮ ರಾಜು, ರೇವಾ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ. ಧನಂಜಯ, ಅಶ್ವಿನ್ ಸುಜಿತ್, ಸಂಕಲ್ಪ್ ಎಂ. ಮತ್ತು ಆಡಳಿತ ನಿರ್ವಹಣೆ ಅಧ್ಯಯನ ಶಾಲೆಯ ಸಹಾಯಕ ನಿರ್ದೇಶಕ ಡಾ.ಎಂ. ಸುಬ್ರಮಣ್ಯಂ. (ಕುಳಿತವರು, ಬಲದಿಂದ ಎಡಕ್ಕೆ) ರಮ್ಯಾ ಎಸ್., ಧನುಷ್ ಕುಮಾರ್, ಮಾನ್ಸಿ ಆರ್. ಕೌಶಿಕ್, ಅಭಿಷೇಕ್ ರಾಯ್.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

### ಸ್ಮರಣಿಕೆಯನ್ನು ಸ್ವೀಕರಿಸಿದ ಸಾಧಕರು

- **ರಮ್ಯಾ ಎಸ್.**, ಹಳೆ ವಿದ್ಯಾರ್ಥಿ ಸಾಧಕಿ
- **ಧನುಷ್ ಕುಮಾರ್**, ಕ್ರೀಡಾ ಸಾಧಕ (ಅಥ್ಲೀಟ್)
- **ಅಬುಲ್ ಹಸನ್ ಖಾಲಿದ್**, ಕ್ರೀಡಾ ಸಾಧಕ (ಕ್ರಿಕೆಟ್)
- **ಮಾನ್ಸಿ ಆರ್. ಕೌಶಿಕ್**, ಸಾಂಸ್ಕೃತಿಕ ಸಾಧಕಿ (ಸಂಗೀತ)
- **ಅಶ್ವಿನ್ ಸುಜಿತ್**, ಸಾಂಸ್ಕೃತಿಕ ಸಾಧಕ (ಗಾಯನ)
- **ಅಭಿಷೇಕ್ ರಾಯ್**, ಸಾಂಸ್ಕೃತಿಕ ಸಾಧಕ (ವಾದನ)
- **ಸಂಕಲ್ಪ್ ಎಂ.**, ಸಾಂಸ್ಕೃತಿಕ ಸಾಧಕ (ರಂಗಭೂಮಿ)

**ಸುಭಾಷಿತ**

ಪ್ರೀತಿಯು ಸದಾಕಾಲ ಮನುಷ್ಯನ ನಡತೆ ಮೇಲ್ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳುತ್ತದೆ. ಅದು ಎಂದಿಗೂ ಅವನನ್ನು ಕೆಳಮಟ್ಟಕ್ಕೆ ಇಳಿಸುವುದಿಲ್ಲ. -ಭಗತ್ ಸಿಂಗ್

# ನರ್ಸಿಂಗ್ ಕಾಲೇಜು: ಲೋಪ ಪತ್ತೆ ಜತೆಗೆ ಸುಧಾರಣೆಗೂ ಗಮನವಿರಲಿ

**2020-21ನೇ** ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ವೈದ್ಯಕೀಯ ಶಿಕ್ಷಣ ಇಲಾಖೆಯು 47 ನರ್ಸಿಂಗ್ ಕಾಲೇಜುಗಳು ಮತ್ತು ಅರೆ ವೈದ್ಯಕೀಯ ಕೋರ್ಸ್‌ಗಳ 45 ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡಿರುವುದರಲ್ಲಿ ದೊಡ್ಡ ಪ್ರಮಾಣದ ಅಕ್ರಮ ನಡೆದಿದೆ ಎಂಬ ಆರೋಪ ವಿಧಾನ ಪರಿಷತ್‌ನಲ್ಲಿ ಕೇಳಿಬಂದಿದೆ. ಆಡಳಿತಾರೂಢ ಬಿಜೆಪಿಯ ಸದಸ್ಯರೇ ಈ ವಿಚಾರವನ್ನು ಪರಿಷತ್‌ನಲ್ಲಿ ಚರ್ಚೆಯ ಮುನ್ನೆಲೆಗೆ ತಂದರು. ಅದನ್ನೇ ಅಸ್ತ್ರವಾಗಿಸಿಕೊಂಡ ಜೆಡಿಎಸ್ ಸದಸ್ಯರು ಸದನ ಸಮಿತಿ ರಚನೆಗೆ ಆಗ್ರಹಿಸಿ ಮೂರು ದಿನ ಧರಣಿ ನಡೆಸಿದರು. ವಿರೋಧ ಪಕ್ಷದ ಸದಸ್ಯರ ಹೋರಾಟಕ್ಕೆ ಮಣಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡಿರುವ ಪ್ರಕ್ರಿಯೆ ಕುರಿತ ತನಿಖೆಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ ಎರಡೂ ಸದನಗಳ ಸದಸ್ಯರನ್ನು ಒಳಗೊಂಡ ಜಂಟಿ ಸದನ ಸಮಿತಿಯನ್ನು ರಚಿಸುವ ನಿರ್ಧಾರವನ್ನು ಪ್ರಕಟಿಸಿದ್ದಾರೆ. ರಾಜ್ಯದಲ್ಲಿ ಖಾಸಗಿ ವೈದ್ಯಕೀಯ, ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಆರಂಭಕ್ಕೆ ಅನುಮತಿ ನೀಡುವಾಗ ಪ್ರಭಾವ, ಒತ್ತಡ ಮತ್ತು ಆಮಿಷಗಳಿಗೆ ಮಣಿದು ನಿರ್ಧಾರ ಕೈಗೊಳ್ಳಲಾಗುತ್ತದೆ ಎಂಬ ಆರೋಪ ಬಹಳ ಹಿಂದಿನಿಂದಲೂ ಇದೆ. ಈ ಬಾರಿಯೂ ಮತ್ತೆ ಅದೇ ಆರೋಪ ಕೇಳಿಬಂದಿದೆ. 2019ರಲ್ಲೇ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡಲು ಅರ್ಜಿ ಆಹ್ವಾನಿಸಲಾಗಿತ್ತು. ನರ್ಸಿಂಗ್ ಕಾಲೇಜುಗಳ ಆರಂಭಕ್ಕೆ 101 ಮತ್ತು ಅರೆ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ 70 ಅರ್ಜಿಗಳು ಸಲ್ಲಿಕೆಯಾಗಿದ್ದವು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಸೆನೆಟ್, ಸ್ಥಳೀಯ ಪರಿಶೀಲನಾ ಸಮಿತಿಗಳ ವರದಿಗಳನ್ನು ಆಧರಿಸಿ 62 ನರ್ಸಿಂಗ್ ಕಾಲೇಜುಗಳು, 45 ಅರೆ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡಬಹುದು ಎಂದು ಶಿಫಾರಸು ಮಾಡಿತ್ತು. ಆದರೆ, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಉನ್ನತಾಧಿಕಾರ ಸಮಿತಿ ರಚಿಸಿ ಮತ್ತೊಮ್ಮೆ ದಾಖಲೆ ಪರಿಶೀಲಿಸಿದ ಬಳಿಕ 47 ನರ್ಸಿಂಗ್ ಮತ್ತು 45 ಅರೆ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಪರವಾನಗಿ ನೀಡಲಾಗಿದೆ

**ಆರೋಗ್ಯ ಕ್ಷೇತ್ರದ ಮೇಲೆ ತೀವ್ರವಾದ ಪರಿಣಾಮ ಬೀರಬಲ್ಲ ಈ ವಿಚಾರದ ಕುರಿತು ಎಲ್ಲ ಆಯಾಮಗಳಿಂದಲೂ ತನಿಖೆ ಆಗಲಿ**

ಕಟ್ಟಡ, ತರಗತಿ ಕೊಠಡಿ, ಪ್ರಯೋಗಾಲಯ, ಬೋಧನಾ ಆಸ್ಪತ್ರೆ ಸೇರಿದಂತೆ ಯಾವುದೇ ಮೂಲಸೌಕರ್ಯ ಹೊಂದಿಲ್ಲದ ಕೆಲವು ಸಂಸ್ಥೆಗಳಿಗೆ ಅನುಮತಿ ನೀಡಲಾಗಿದೆ ಎಂಬ ಆರೋಪವಿದೆ. ಕೆಲವು ಸಂಸ್ಥೆಗಳಿಗೆ ಒಂದೇ ಕಟ್ಟಡದ ವಿಳಾಸದಲ್ಲಿ ಎರಡಕ್ಕಿಂತ ಹೆಚ್ಚು ಕಾಲೇಜುಗಳಿಗೆ ಅನುಮತಿ ನೀಡಿರುವ ದೂರುಗಳೂ ಇವೆ. ಈ ರೀತಿ ಅನುಮತಿ ಪಡೆದ ಕಾಲೇಜುಗಳಲ್ಲಿ ತರಗತಿ ನಡೆಸದೆ ನೇರವಾಗಿ ಪರೀಕ್ಷೆಗೆ ಅವಕಾಶ ಕಲ್ಪಿಸಲಾಗುತ್ತಿದೆ ಮತ್ತು ವಿದ್ಯಾರ್ಥಿಗಳು ತಾವು ಇರುವ ಸ್ಥಳದಿಂದಲೇ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತಿದೆ ಎಂದು ವಿಧಾನ ಪರಿಷತ್‌ನ ಸದಸ್ಯರು ಪಕ್ಷಭೇದ ಮರೆತು ಆಪಾದಿಸಿದ್ದಾರೆ. ಅದು ನಿಜವೇ ಆಗಿದ್ದಲ್ಲಿ, ಅಗತ್ಯ ತರಬೇತಿ ಮತ್ತು ಶಿಕ್ಷಣವನ್ನೇ ಪಡೆಯದವರು ಅಕ್ರಮವಾಗಿ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕೋರ್ಸ್‌ಗಳ ಪದವಿ ಪ್ರಮಾಣಪತ್ರ ಪಡೆದು ದೇಶದ ಆರೋಗ್ಯ ಕ್ಷೇತ್ರವನ್ನು ಪ್ರವೇಶಿಸಲು ಸರ್ಕಾರವೇ ಬಾಗಿಲು ತೆರೆದಂತಾಗುತ್ತದೆ. ಕೆಲವು ವೈದ್ಯಕೀಯ ಕಾಲೇಜುಗಳು ಮಾತ್ರವಲ್ಲ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕಾಲೇಜುಗಳಲ್ಲೂ ಆಡಳಿತ ಮಂಡಳಿ ಕೋಟಾದಡಿ ಪ್ರವೇಶ ಪಡೆದವರಿಗೆ ಪ್ರತ್ಯೇಕವಾಗಿ 'ಪ್ಯಾಕೇಜ್' ಪಡೆದು ಪರೀಕ್ಷೆ ನಡೆಸುವ ವ್ಯವಸ್ಥೆ ಇದೆ ಎಂಬುದಕ್ಕೆ ಆದಾಯ ತೆರಿಗೆ ಇಲಾಖೆ ಇತ್ತೀಚೆಗೆ ನಡೆಸಿದ ಶೋಧದ ವೇಳೆ ಸಾಕ್ಷ್ಯಗಳು ಪತ್ತೆಯಾಗಿವೆ. ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡುವ ಹಂತದಲ್ಲೇ ಅಕ್ರಮ ನಡೆದಿದೆ ಎಂಬ ಆರೋಪದ ಕುರಿತು ತನಿಖೆ ನಡೆಸಲು ಜಂಟಿ ಸದನ ಸಮಿತಿ ರಚಿಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹವಾದುದು. ವೈದ್ಯಕೀಯ ಶಿಕ್ಷಣ ಸಚಿವ ಮತ್ತು ಸಂಬಂಧಿಸಿದ ಇಲಾಖೆಯ ಹಿರಿಯ ಅಧಿಕಾರಿಗಳ ವಿರುದ್ಧ ಸದನದಲ್ಲೇ ನೇರ ಆರೋಪ ವ್ಯಕ್ತವಾಗಿದೆ. ಎಲ್ಲ ಆರೋಪಗಳ ಕುರಿತು ಮುಕ್ತವಾಗಿ ತನಿಖೆ ನಡೆಸಲು ಸದನ ಸಮಿತಿಗೆ ಅವಕಾಶ ಕಲ್ಪಿಸಬೇಕಾದ ಹೊಣೆಗಾರಿಕೆ ಸರ್ಕಾರದ ಮೇಲಿದೆ. ಆರೋಗ್ಯ ಕ್ಷೇತ್ರದ ಮೇಲೆ ತೀವ್ರವಾದ ಪರಿಣಾಮ ಬೀರಬಲ್ಲ ಈ ವಿಚಾರದ ಕುರಿತು ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಬೇಕು. ಅಕ್ರಮಗಳು ನಡೆದಿದ್ದರೆ ಬಯಲಿಗೆ ತರುವುದಷ್ಟೇ ಅಲ್ಲ, ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡುವ ವಿಚಾರದಲ್ಲಿ ಮುಂದೆಂದೂ ಇಂತಹ ಲೋಪಗಳಿಗೆ ಅವಕಾಶವಾಗದಂತಹ ಬಿಗಿಯಾದ ವ್ಯವಸ್ಥೆಯೊಂದನ್ನು ರೂಪಿಸುವ ಬಗ್ಗೆಯೂ ಸದನ ಸಮಿತಿ ಶಿಫಾರಸು ಮಾಡಬೇಕಿದೆ.

---

ಆಳುವವರು ಪಶ್ಚಿಮಘಟ್ಟಗಳನ್ನು ಗಾಸಿಗೊಳಿಸಿ ಜನರನ್ನು ಅಳಿಸಬಾರದು

# ಘಟ್ಟ ಉಳಿದರೆ ಘಟ ಉಳಿದೀತು!

**ವಿಶ್ಲೇಷಣೆ**

**ಅಖಿಲೇಶ್ ಚಿಪ್ಪಳಿ**

**ಹಿಮಾಲಯದ** ಗಿರಿಶ್ರೇಣಿಗಳಿಗಿಂತ ಪುರಾತನ ಇತಿಹಾಸ ಹೊಂದಿದ ಪಶ್ಚಿಮಘಟ್ಟಗಳು ದೇಶದ ಕೋಟ್ಯಂತರ ಜನರಿಗೆ ಬದುಕಿನ ಮೂಲವಾಗಿವೆ. ಸುಮಾರು 50 ಕೋಟಿ ಜನರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪಶ್ಚಿಮಘಟ್ಟಗಳನ್ನು ಅವಲಂಬಿಸಿದ್ದಾರೆ. ಜಾಗತೀಕರಣೋತ್ತರ ಅಭಿವೃದ್ಧಿ ಪರಿಭಾಷೆಗಳು ವೇಗವಾಗಿ ಬದಲಾಗುತ್ತಿವೆ. ಔದ್ಯಮೀಕರಣವೇ ಮಾನವ ಸಮಸ್ಯೆಗಳಿಗೆ ಏಕೈಕ ಉತ್ತರವೆಂಬಂತೆ ಬಿಂಬಿಸಲು ಆರ್ಥಿಕ ತಜ್ಞರು, ಆಡಳಿತ ವರ್ಗದವರು ಸಫಲರಾಗಿದ್ದಾರೆ. ಇದಕ್ಕೆ ಸರ್ಕಾರ ಉಪ್ಪೂಂ ಎನ್ನದೆ ಕೈಜೋಡಿಸುತ್ತಲೇ ಇದೆ.

ಜಾಗತೀಕರಣವಾಗಲೀ ಔದ್ಯಮೀಕರಣವಾಗಲೀ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಯಶಸ್ವಿಯಾಗಿವೆಯೇ, ನಿರೀಕ್ಷಿತ ಆರ್ಥಿಕ ಬೆಳವಣಿಗೆ ಆಗಿದೆಯೇ ಮುಂತಾದ ಸಾಲು ಸಾಲು ಪ್ರಶ್ನೆಗಳಿಗೆ ಉತ್ತರವಿಲ್ಲ. ಆರ್ಥಿಕವಾದದ ಪರಿಭಾಷೆ ಬದಲಾಗಬೇಕೇ? ಬೆಳೆಯುತ್ತಿರುವ ಜನಸಂಖ್ಯೆಯ ಅಗತ್ಯಗಳನ್ನು ಪೂರೈಸಲು ಬೇರೆಯದೇ ರೀತಿಯ ಮಾದರಿಯನ್ನು ರೂಪುಗೊಳಿಸಬೇಕೇ? ಈ ಕುರಿತು ಗಂಭೀರವಾಗಿ ಯೋಚಿಸಬೇಕಿದೆ.

ರಾಜ್ಯ ಅರಣ್ಯ ಸಚಿವರು ಒಂದು ಆಘಾತಕಾರಿಯಾದ ವಿಷಯವನ್ನು ಮಾಧ್ಯಮಗಳ ಮುಂದೆ ಹಂಚಿಕೊಳ್ಳುತ್ತಿದ್ದರು. 6.5 ಲಕ್ಷ ಹೆಕ್ಟೇರ್ ಪರಿಭಾವಿತ (ಡೀಮ್ಡ್) ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ವರ್ಗಾಯಿಸಲಿದೆಯಂತೆ. ಇಷ್ಟು ಪ್ರಮಾಣದ ಹಸಿರು ಕವಚ ಕಡಿಮೆಯಾದರೆ, ರಾಜ್ಯದ ಪರಿಸ್ಥಿತಿ ಏನಾಗಬಹುದು? ಪಶ್ಚಿಮ ಬಂಗಾಳದಲ್ಲಿ ರೈಲು ಯೋಜನೆಗಾಗಿ 386 ಮರಗಳನ್ನು ಕಡಿಯುವ ಪ್ರಸ್ತಾವದ ವಿರುದ್ಧ ಅಲ್ಲಿನ ಸಂಸ್ಥೆಯೊಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. ಆಗ, ವಸ್ತುಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸುವಂತೆ ಸಮಿತಿಯನ್ನು ಕೋರ್ಟ್ ರಚಿಸಿತು. ಕಳೆದ 50 ವರ್ಷಗಳಲ್ಲಿ ಶೇ 40ರಷ್ಟು ಅರಣ್ಯ ಪ್ರದೇಶವನ್ನು ಕಳೆದುಕೊಂಡಿದ್ದೇವೆ, ವಾತಾವರಣದಲ್ಲಿಯ ಇಂಗಾಲಾಮ್ಲವನ್ನು ಹೀರಿಕೊಂಡು, ಆಮ್ಲಜನಕವನ್ನು ನೀಡುವ ಕೆಲಸ ಮಾಡುವ ಮರಗಳಿಗೆ ಯಾವುದೇ ಪರ್ಯಾಯ ವ್ಯವಸ್ಥೆ ಇಲ್ಲ ಎಂದು ಸಮಿತಿ ವರದಿ ನೀಡಿದೆ.

ಪಶ್ಚಿಮಘಟ್ಟಗಳು ಎದುರಿಸುತ್ತಿರುವ ಬಹು ಮುಖ್ಯವಾದ ಸಮಸ್ಯೆಗಳೆಂದರೆ, ಕೃಷಿ ವಿಸ್ತರಣೆ, ಭಾರಿ ಗಾತ್ರದ ಯೋಜನೆಗಳು, ಬದಲಾಗುತ್ತಿರುವ ಭೂಮಿಯ ಬಳಕೆ ಹಾಗೂ ವಲಸೆ ಸಮಸ್ಯೆ. ಮೇಲೆ ಹೇಳಿದ ಡೀಮ್ಡ್ ಅರಣ್ಯ ಪ್ರದೇಶವನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸುವ ಉದ್ದೇಶವು ಭೂರಹಿತರಿಗೆ ಮತ್ತೆ ಭೂಮಿ ಹಕ್ಕನ್ನು ನೀಡುವುದಾಗಿದೆ. ಈ ಹಿಂದೆಯೂ ಬಗರ್‌ಹುಕುಂ ಹೆಸರಿನಲ್ಲಿ ಭೂರಹಿತರಿಗೆ ಭೂಮಿಯನ್ನು ನೀಡುವ ಸರ್ಕಾರದ ಕ್ರಮದ ಫಲಾನುಭವಿಗಳಲ್ಲಿ ಹೆಚ್ಚಿನವರು ಭೂಮಿ ಹೊಂದಿರುವವರೇ ಆಗಿದ್ದುದು ವಿಪರ್ಯಾಸ. ಅರ್ಹ ಫಲಾನುಭವಿಗಳು ಇನ್ನೂ ಅದರ ಫಲಿತಾಂಶವನ್ನು ಉಂಡಿಲ್ಲವೆಂಬುದು ಅಷ್ಟೇ ಸತ್ಯ. ಈಗ ಇಷ್ಟು ಪ್ರಮಾಣದ ಭೂಮಿಯ ಹಂಚಿಕೆಯಲ್ಲೂ ಅದೇ ತಾರತಮ್ಯ ಪುನರಾವರ್ತನೆಯಾಗಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಹಾಗೆಯೇ, ಕರ್ನಾಟಕದ ಪಶ್ಚಿಮಘಟ್ಟಗಳಲ್ಲಿ ಪರಿಸರವನ್ನು ನಾಶ ಮಾಡುವ ಅನೇಕ ಯೋಜನೆಗಳು ದಾಂಗುಡಿಯಿಡುತ್ತಾ ಬರುತ್ತಿವೆ. ಹಾಲಿ ಇರುವ ಹಲವು ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ. ಉದಾಹರಣೆಗೆ, ಶಿರಸಿಯಿಂದ ಕುಮಟಾ ರಸ್ತೆಯಲ್ಲಿ ದುರ್ಗಮವಾದ ದೇವಿಮನೆ ಘಾಟಿಯನ್ನು ಅಗಲಗೊಳಿಸುವ ಕೆಲಸ ನಡೆಯುತ್ತಿದೆ. ಹಾಲಿ ಈ ರಸ್ತೆಯು 5 ಮೀಟರ್ ಅಗಲವಿದೆ. ಈಗ ಇದನ್ನು 18 ಮೀಟರಿನಷ್ಟು ಅಗಲಗೊಳಿಸಲು ತಯಾರಿ ನಡೆದಿದೆ. ಕಡಿದಾದ ಘಾಟಿಯ ಭಾಗದಲ್ಲಾದರೂ ರಸ್ತೆ ಅಗಲೀಕರಣ ಬೇಡ ಎಂಬುದು ಒಂದು ವಾದ. ಹಿಂದಿನ ಎರಡು ಮಳೆಗಾಲಗಳಲ್ಲಿ ಪಶ್ಚಿಮಘಟ್ಟಗಳ ಅನೇಕ ಕಡೆಗಳಲ್ಲಿ ಗುಡ್ಡ ಕುಸಿದಿರುವುದಕ್ಕೆ ರಸ್ತೆ ಅಗಲೀಕರಣದಂತಹ ಅಭಿವೃದ್ಧಿಯೂ ಒಂದು ಕಾರಣ ಎಂದು ಭಾರತೀಯ ವಿಜ್ಞಾನ ಸಂಸ್ಥೆ ಹೇಳಿದೆ.

ಆಡಳಿತದ ದೂರದೃಷ್ಟಿಯ ಕೊರತೆಯಿಂದಾಗಿ ಎತ್ತಿನಹೊಳೆ ಯೋಜನೆ ಇಂದಿಗೂ ಪೂರ್ಣಗೊಂಡಿಲ್ಲ. ಏಕೆಂದರೆ, ಯೋಜನೆ ಪ್ರಾರಂಭಿಸುವಾಗ ಸರ್ಕಾರ ಹೇಳಿದ 24 ಟಿಎಂಸಿ ಅಡಿ ನೀರು ಹಾಲಿ ಅಲ್ಲಿ ಲಭ್ಯವಿಲ್ಲ. ಇತ್ತ ಪರಿಸರ ಮತ್ತು ಸ್ಥಳೀಯರ ಬದುಕನ್ನು ಹಾಳು ಮಾಡಿ, ಯೋಜನೆಗಾಗಿ ಸಾವಿರಾರು ಕೋಟಿ ರೂಪಾಯಿ ವ್ಯಯಿಸಿದ್ದರೂ ಫಲಿತಾಂಶ ಶೂನ್ಯ. ಇಂತಹ ನದಿ ತಿರುವು ಯೋಜನೆಗಳು ಪ್ರಪಂಚದಲ್ಲಿ ಯಶಸ್ವಿಯಾದ ಉದಾಹರಣೆಗಳಿಲ್ಲ. ನದಿ ತಿರುವಿನ ದುಷ್ಪರಿಣಾಮದಿಂದ ರಷ್ಯಾದ ಅರಾಲ್ ಸಮುದ್ರವೇ ಸತ್ತು ಹೋಗಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ರಸ್ತೆ ಅಗಲವಾದರೆ, ಹೆದ್ದಾರಿಗಳು ಸೃಷ್ಟಿಯಾದರೆ, ರೈಲು ಮಾರ್ಗಗಳು ಬಂದರೆ, ಆ ಪ್ರದೇಶದ ಜನಜೀವನದ ಮಟ್ಟ ಉನ್ನತಿಗೇರುತ್ತದೆ ಎಂಬ ಬಡಿವಾರದ ಮಾತನ್ನು ಜನಮಾನಸದಲ್ಲಿ ತುಂಬುವಲ್ಲಿ ಆಡಳಿತ ಯಶಸ್ವಿಯಾಗಿದೆ. ಸರಕು ಸಾಗಣೆಗೂ ಅವಕಾಶ ಇಲ್ಲದ ಪ್ರದೇಶಗಳಲ್ಲೂ ರೈಲು ಓಡಿಸುವ ಪ್ರಸ್ತಾಪ ಮತ್ತು ಅನುಮೋದನೆ ಸಿಗುತ್ತಿದೆ. ಬೆಳಗಾವಿಯಿಂದ ಪಣಜಿಗೆ ಚತುಷ್ಪಥ ರಸ್ತೆಗಾಗಿ ಈಗಾಗಲೇ ಒಂದು ಲಕ್ಷ ಮರಗಳನ್ನು ಕಡಿಯಲಾಗಿದೆ. ಪಣಜಿಯಿಂದ ತಿನ್ಯೆ ಘಾಟಿನ ದ್ವಿಪಥ ರೈಲು ಮಾರ್ಗಕ್ಕಾಗಿ ಸುಮಾರು 2 ಲಕ್ಷ ಮರಗಳನ್ನು ಕತ್ತರಿಸುವ ಕೆಲಸಕ್ಕೆ ಚಾಲನೆ ನೀಡಲಾಗಿದೆ. ಛತ್ತೀಸ್‌ಗಡದಿಂದ ಕರ್ನಾಟಕದ ಮೂಲಕ ಗೋವಾಗೆ ಸಾಗುವ ವಿದ್ಯುತ್ ಮಾರ್ಗದ ಯೋಜನೆಗೆ 2 ಲಕ್ಷ ಮರಗಳನ್ನು ಕಡಿಯಲಾಗುತ್ತದೆ. ಹೀಗೆ ಕರ್ನಾಟಕವೊಂದರಲ್ಲೇ ವಿವಿಧ ಭಾರಿ ಯೋಜನೆಗಳಿಗಾಗಿ ಬಲಿಯಾಗಲಿರುವ ಮರಗಳ ಸಂಖ್ಯೆ ಸುಮಾರು 25 ಲಕ್ಷ ದಾಟುತ್ತದೆ.



ವಿನಾಶಕಾರಿ ಯೋಜನೆಗಳು ಪಶ್ಚಿಮಘಟ್ಟದಲ್ಲೇ ಏಕೆ? ಪಶ್ಚಿಮಘಟ್ಟಗಳಲ್ಲಿನ ವೈವಿಧ್ಯಮಯವಾದ ಮರಗಳಿಂದ ಅಪಾರವಾದ ಲಾಭವಿದೆ. ಹಾಗಾಗಿ ಟಿಂಬರ್ ಮಾಫಿಯಾ ಇದರ ಹಿಂದೆ ಕೆಲಸ ಮಾಡುತ್ತದೆ. ಜೊತೆಗೆ ಇಲ್ಲಿನ ಗುಡ್ಡಗಳಲ್ಲಿ ಲಕ್ಷಾಂತರ ವರ್ಷಗಳಿಂದ ಹುದುಗಿರುವ ಹಲವು ನಿಕ್ಷೇಪಗಳಿವೆ, ಹಾಗಾಗಿ ಗಣಿ ಮಾಫಿಯಾ ಇದರ ಹಿಂದೆ ನಿಲ್ಲುತ್ತದೆ. ಇವೆಲ್ಲಕ್ಕೂ ಮುಂಚೂಣಿಯಲ್ಲಿ ನಿಲ್ಲುವುದೇ ಅಭಿವೃದ್ಧಿ ಮಾಫಿಯಾ. ಮರಳು, ಜಲ್ಲಿ, ಸಿಮೆಂಟ್, ಕಬ್ಬಿಣ ಮುಂತಾದ ಕಚ್ಚಾ ವಸ್ತುಗಳನ್ನು ಇದು ಬೇಡುತ್ತದೆ. ಮಾಫಿಯಾದ ಸರಪಣಿಯಲ್ಲಿರುವ ಪ್ರತಿಯೊಬ್ಬರೂ ಅವರವರ ಸಾಮರ್ಥ್ಯವನ್ನು ಅವಲಂಬಿಸಿ, ವಜ್ರಕ್ಕಿಂತ ಹೆಚ್ಚು ಬೆಲೆಬಾಳುತ್ತಾರೆ.

ಬಯಲುನಾಡಿನ ಜನರಿಗೆ ಮಲೆನಾಡಿನ ನೀರು ಬೇಕು. ದುರದೃಷ್ಟವಶಾತ್, ಆ ಭಾಗದ ಜನರಿಗೆ 'ಪಶ್ಚಿಮ ಘಟ್ಟಗಳ ಮಹತ್ವದ ಅರಿವಿನ ಕೊರತೆಯಿದೆ'. ಇನ್ನು ಮಲೆನಾಡಿನಲ್ಲಿ ವಾಸಿಸುತ್ತಿರುವವರಿಗೆ ಇನ್ನೂ ನೆರೆ ಮತ್ತು ಬರದ ಅಟ್ಟಹಾಸ ಅಷ್ಟಾಗಿ ತಟ್ಟಿಲ್ಲ. ಅಂದರೆ ಎಲ್ಲಿ ಗುಡ್ಡಗಳು ಕುಸಿದಿಲ್ಲವೋ ಆ ಭಾಗದ ಜನರಿಗೆ ಇನ್ನೂ ಗುಡ್ಡಗಳ ಮಹತ್ವ ಸಾಮೂಹಿಕವಾಗಿ ಅರಿವಾಗಿಲ್ಲ.

ಇದಕ್ಕೆ ಪರಿಹಾರವೇನು? ಪಶ್ಚಿಮಘಟ್ಟಗಳ ಜೀವಿವೈವಿಧ್ಯ ಅದೆಷ್ಟು ಅಗಾಧವಾಗಿದೆ ಎಂದರೆ, ಅರ್ಧ ಕಿಲೊಮೀಟರಿನಷ್ಟು ಅಂತರದಲ್ಲಿ ಬದಲಾಗುತ್ತಿರುತ್ತದೆ. ಉದಾಹರಣೆಗೆ, ಸಿದ್ದಾಪುರ ತಾಲ್ಲೂಕಿನಲ್ಲಿ ಕಂಡುಬರುವ ಉಪ್ಪಾಗೆ, ಏಕನಾಯಕನಂತಹ ಅಪರೂಪದ ಔಷಧೀಯ ವೈವಿಧ್ಯ ಪಕ್ಕದ ಸಾಗರದಲ್ಲಿ ಕಂಡುಬರುವುದಿಲ್ಲ. ಸೊರಬ ತಾಲ್ಲೂಕಿನಲ್ಲಿ ಕಂಡುಬರುವ ಮುಗಿಲು ಮುಟ್ಟುವ ಬಿಳಿ ದೇವದಾರು ಮರಗಳೂ ಪಕ್ಕದ ಸಾಗರ ತಾಲ್ಲೂಕಿನಲ್ಲಿ ಇಲ್ಲ. ಬೀಜ ಪ್ರಸರಣದ ಭೀಷ್ಮ ಎಂದು ಕರೆಯಬಹುದಾದ ದೊಡ್ಡ ಮಂಗಟ್ಟೆ ಹಕ್ಕಿಗಳು ಹಾಗೂ ಅರಣ್ಯ ಬೆಳೆಸುವ ಆಂಜನೇಯನೆಂದು ಕರೆಯಬಹುದಾದ ಸಿಂಹಬಾಲದ ಸಿಂಗಳೀಕಗಳು ಪಶ್ಚಿಮಘಟ್ಟದಲ್ಲಿ ಕಾಣಬರುವ ಅಪರೂಪದ ಜೀವಿಗಳು.

ಸುಪ್ರೀಂ ಕೋರ್ಟ್ ರಚಿಸಿದ ಸಮಿತಿಯ ಅಭಿಪ್ರಾಯದಂತೆ, ನೂರು ವರ್ಷದ ಒಂದು ಜೀವಂತ ಮರದ ಬೆಲೆ ಸುಮಾರು ₹ 72 ಲಕ್ಷ. ಇದನ್ನು ಹೇಗೆ ಲೆಕ್ಕ ಹಾಕಬಹುದು ಎಂದರೆ, ಆ ಬೃಹತ್ ಮರಗಳು ಹೀರಿಕೊಳ್ಳುವ ಇಂಗಾಲಾಮ್ಲದ ಪ್ರಮಾಣ ಮತ್ತು ವಾಪಸ್ ನೀಡುವ ಆಮ್ಲಜನಕದ ಪ್ರಮಾಣ, ನೆಲದಾಳಕ್ಕೆ ಅದರ ನೀರಿಂಗಿಸುವ ಪ್ರಮಾಣ, ಪಶು-ಪಕ್ಷಿಗಳಿಗೆ ಆಹಾರ ನೀಡುವ ಪ್ರಮಾಣ, ಮಣ್ಣು ಸವಕಳಿ ತಡೆಯುವ ಪ್ರಮಾಣ ಇತ್ಯಾದಿ. ಈ ಹಂತದಲ್ಲಿ ಪಶ್ಚಿಮಘಟ್ಟಗಳ ಮಹತ್ವವನ್ನು ಸರ್ಕಾರಗಳು ಅರಿತು, ನಿಸರ್ಗ ನೀಡುವ ಸೇವೆಗಳಿಗೆ ಪಾವತಿ ಮಾಡುವ ವಿಧಾನವನ್ನು ಜಾರಿಗೊಳಿಸಬಹುದು. ಇದರಿಂದ ಬರುವ ಆದಾಯವನ್ನು ಆದ್ಯತೆ ಮೇರೆಗೆ ಇಲ್ಲಿ ವಾಸಿಸುವ, ಕಾಡಿನ ಮೇಲೆಯೇ ಅವಲಂಬಿತರಾಗಿರುವ ಪ್ರಜೆಗಳಿಗೆ ಹಂಚಬಹುದು ಅಥವಾ ರೈತರಿಗೆ ಸ್ವಾಭಾವಿಕ ಅರಣ್ಯವನ್ನು ಬೆಳೆಸಲು ಭರಪೂರ ಧನಸಹಾಯ ಮಾಡುವುದು. ಈ ಕ್ರಮಗಳೇ ಪಶ್ಚಿಮಘಟ್ಟಗಳನ್ನು ಉಳಿಸಲು ಇರುವ ಏಕೈಕ ಮಾರ್ಗ.

---

**ಚುರುಮುರಿ**

## ಬಟ್ಟೆ ಪಾಡು

• ಮಣ್ಣೆರಾಜು

**ತಿಂಗಳ** ಸಾಮಾನು ಪಟ್ಟಿಯಲ್ಲಿ ಕೊನೇ ಐಟಂ ಗಂಡನ ಶೇವಿಂಗ್ ಬ್ಲೇಡ್. ಹಾಗೇ, ಬಟ್ಟೆ ಖರೀದಿ ವೇಳೆ ಕೊನೆಯ ಖರೀದಿ ಗಂಡನ ಪಂಚೆ!

ಸೀರೆ ಆಯ್ಕೆ ಮುಗಿಸಿ ನಿರಾಳಗೊಂಡ ಸುಮಿ, 'ದೇವೇಗೌಡರ ಬ್ರ್ಯಾಂಡ್, ಸಿದ್ದರಾಮಯ್ಯನವರ ಬ್ರ್ಯಾಂಡಿನ ಪಂಚೆಗಳನ್ನು ತೋರಿಸಿ' ಎಂದಳು. ಅಂಗಡಿಯವನು ನಕ್ಕು, ಪಂಚೆ ಕಟ್ಟುಗಳನ್ನು ಹರಡಿ, 'ಡಜನ್ ಪಂಚೆ ಕೊಳ್ಳಿ ಸಾರ್ ಹಬ್ಬಕ್ಕೆ ಬೇಕಾಗುತ್ತೆ, ಸಿದ್ದರಾಮಯ್ಯ 90 ಜೊತೆ ಬಟ್ಟೆಗಳನ್ನು ಕೊಂಡಿದ್ದಾರಂತೆ' ಅಂದ.

'ಸಿದ್ದರಾಮಯ್ಯ, ಮಾಧುಸ್ವಾಮಿ, ರೇವಣ್ಣ ಅವರಂಥಾ ಪಂಚೆಪಟುಗಳಿಗೆ ದಿನಾ ಹಬ್ಬ, ನಮಗೆ ಮಾತ್ರ ಕ್ಯಾಲೆಂಡರ್‌ನ ಕೆಂಪು ಡೇಟಿನಲ್ಲಷ್ಟೇ ಹಬ್ಬ' ಅಂದ ಶಂಕ್ರಿ.

'ಸದನದಲ್ಲಿ ಎದುರಾಳಿಗಳನ್ನು ಎದುರಿಸಲು ನಾಯಕರು ಪಂಚೆಯನ್ನು ಎತ್ತಿ ಕಟ್ಟಿಕೊಳ್ಳುತ್ತಾರಂತೆ. ಅದು ಪಂಚೆಯ ಪವರ್ ಸಾರ್...'

'ಸದನದಲ್ಲಿ ಅಂಗಿ ಬಿಚ್ಚಿ ತಾಕತ್ತು ಪ್ರದರ್ಶಿಸುವ ಪ್ರಕರಣಗಳು ಜಾಸ್ತಿಯಾಗ್ತಿವೆ'.

'ಸದನದ ವಿಚಾರ ಬೇಡಬಿಡಿ, ನಮ್ಮ ಸುತ್ತಮುತ್ತ ಪಂಚೆ ಎಳೆಯೋರು ಜಾಸ್ತಿ ಇದ್ದಾರಂತೆ' ಎಂದಳು ಸುಮಿ.

'ಕಾಲು ಎಳೆಯಬಹುದು, ಪಂಚೆ ಎಳೆಯುವಂತಿಲ್ಲ ಅಂತ ಕಾನೂನು ಮಾಡಿದರಾಯ್ತು ಬಿಡಿ, ಹಹ್ಹಹ್ಹ...'

'ದ್ರೌಪದಿಯ ಸೀರೆ ಎಳೆದಾಗ ಶ್ರೀಕೃಷ್ಣ ಮಾನ ಕಾಪಾಡಿದ್ದ, ಈ ಕಾಲಘಟ್ಟದಲ್ಲಿ ಪಂಚೆ ಎಳೆದರೆ ಮಾನ ಕಳೆಯಲು ಜಾಲತಾಣ, ಟಿ.ವಿ ಕ್ಯಾಮೆರಾ ಕಣ್ಣುಗಳು ಕಾದಿರ್ತವೆ'.

'ಮಾನ ಮುಚ್ಚಲು ಬಟ್ಟೆಗಳು ಬೇಕು. ಹಾಗಂತ, ಹೊಟ್ಟೆಪಾಡಿಗಿಂಥ ಬಟ್ಟೆಪಾಡು ಮುಖ್ಯ ಆಗಬಾರದು' ಅಂದ ಶಂಕ್ರಿ.

'ಬಟ್ಟೆಗಳು ಧರಿಸುವವರ ಅಭಿರುಚಿ, ಪರಿಸ್ಥಿತಿಯನ್ನು ಬಿಂಬಿಸುತ್ತವೆ. ಬಟ್ಟೆ ನೋಡಿ ಮಣೆ ಹಾಕುವ ಕಾಲ ಇದು ಸಾರ್' ಎಂದ ಅಂಗಡಿಯವ.

'ಸಾಧಾರಣ ಪಂಚೆಯಲ್ಲೇ ಫಾರಿನ್‌ಗೂ ಹೋಗುವ, ದೇವಸ್ಥಾನಕ್ಕೂ ಹೋಗುವ ದೇವೇಗೌಡರ ವ್ಯಕ್ತಿತ್ವಕ್ಕೆ ಬಟ್ಟೆಯಿಂದ ಧಕ್ಕೆ ಆಗಿಲ್ಲ... ಪ್ಯಾಂಟು, ಪಂಚೆಗಿಂಥ ಪಂಚೇಂದ್ರಿಯಗಳನ್ನು ಪರಿಶುದ್ಧವಾಗಿಟ್ಟುಕೊಂಡು ಘನತೆ ಕಾಪಾಡಿಕೊಳ್ಳಬೇಕಷ್ಟೇ...' ಎಂದು ಸುಮಿ ಕೊಂಡ ಬಟ್ಟೆಗಳನ್ನು ಜೋಡಿಸಿಕೊಂಡಳು.

---

**ದಿನದ ಟ್ವೀಟ್**

### ಎಚ್ಚರಿಕೆಯ ಗಂಟೆ

**ಸಂಚಾರ ನಿಯಮಾನುಸಾರ ಗಾಡಿ ಓಡಿಸದ ಅದೆಷ್ಟೋ ನಾಗರಿಕರು, ನಿಯಮ ಮೀರುವುದನ್ನು ಬಂಡವಾಳ ಮಾಡಿಕೊಳ್ಳುವ ಅದೆಷ್ಟೋ ಪೊಲೀಸರು, ತಿಳಿದಿದ್ದೂ ತಿಳಿಯದಂತಿರುವ ಅದೆಷ್ಟೋ ಉನ್ನತ ಅಧಿಕಾರಿಗಳು, ಸರ್ಕಾರಿ ವ್ಯವಸ್ಥೆ ಮೂಲಕ ಭ್ರಷ್ಟಾಚಾರ ಮಾಡುವ ಅದೆಷ್ಟೋ ಜನಪ್ರತಿನಿಧಿಗಳು, ಭ್ರಷ್ಟ ಜನಪ್ರತಿನಿಧಿಗಳನ್ನು ಆರಿಸುವ ನಾವುಗಳು, ಮೈಸೂರಿನ ಘಟನೆ ಎಲ್ಲರಿಗೂ ಎಚ್ಚರಿಕೆಯ ಗಂಟೆ.**

**ಅರುಣ್ ಜಾವಗಲ್,** ಕನ್ನಡಪರ ಕಾರ್ಯಕರ್ತ

---

**25 ವರ್ಷಗಳ ಹಿಂದೆ** ಭಾನುವಾರ, 24-3-1996

• **ಕಾಂಗ್ರೆ: ಹಳೆತಲೆಗಳು ಹಿಂದಕ್ಕೆ ಹೊಸಬರಿಗೆ ಆದ್ಯತೆ ಸಂಭವ**

**ಬೆಂಗಳೂರು, ಮಾರ್ಚ್ 23–** ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆ ಹೊಸ ಮುಖಗಳನ್ನು ಬಹುತೇಕ ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಸುವ ಸಾಧ್ಯತೆ ಹೆಚ್ಚಿದ್ದು, ಇದರಿಂದಾಗಿ ಅನೇಕ ಹಳೆ ತಲೆಗಳು ನೇಪಥ್ಯಕ್ಕೆ ಸರಿಯುವುದು ಖಚಿತವಾಗಿದೆ.

ಶುಕ್ರವಾರ ಇಲ್ಲಿ ಮೊದಲ ಸಭೆ ಸೇರಿದ ರಾಜ್ಯ ಚುನಾವಣಾ ಸಮಿತಿ ಬಹುತೇಕ ಕ್ಷೇತ್ರಗಳಲ್ಲಿ ಹಾಲಿ ಸದಸ್ಯರಿಗೇ ಟಿಕೆಟ್ ನೀಡಬೇಕು ಎನ್ನುವ ಸೂತ್ರವನ್ನು ಒಪ್ಪಿ, ಆ ಪಟ್ಟಿಯನ್ನು ಪರಿಶೀಲನಾ ಸಮಿತಿಯ (ಸ್ಕ್ರೀನಿಂಗ್ ಕಮಿಟಿ) ಅಂತಿಮ ತೀರ್ಮಾನಕ್ಕೆ ಕಳಿಸಿರುವುದು ಕಾಂಗ್ರೆ ಹೈಕಮಾಂಡಿನ ತಂತ್ರಗಳಲ್ಲಿ ಒಂದು ಎಂದೇ ಇಲ್ಲಿ ಭಾವಿಸಲಾಗಿದೆ. ಈ ಪಟ್ಟಿಯನ್ನು ಪರಿಶೀಲನಾ ಸಮಿತಿ ನೋಡಿ ಪಕ್ಕಕ್ಕೆ ಇಡುತ್ತದೆ, ಎಐಸಿಸಿ ಅಧ್ಯಕ್ಷರ ಸೂಚನೆಯಂತೆ ಹೊಸ ಯಾದಿಯೇ ಸಿದ್ಧವಾಗಿ ಪ್ರಕಟವಾಗಲಿದೆ ನೋಡಿ ಎಂದು ಹಿರಿಯ ಕಾಂಗ್ರೆ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ವಿವರಿಸಿದರು.

• **ಬಿಎಸ್‌ಪಿ ಜತೆ ಮೈತ್ರಿಗೆ ದಳದಲ್ಲಿ ಭಿನ್ನಮತ**

**ನವದೆಹಲಿ, ಮಾರ್ಚ್ 23–** ಉತ್ತರ ಪ್ರದೇಶ ಹೊರತುಪಡಿಸಿ ಇತರ ರಾಜ್ಯಗಳಲ್ಲಿ ಬಹುಜನ ಸಮಾಜ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಜನತಾದಳ ನಿರ್ಧರಿಸಿದೆ. ಉತ್ತರ ಪ್ರದೇಶದಲ್ಲಿ ಮಾತ್ರ ಸಮಾಜವಾದಿ ಪಕ್ಷದ ಜತೆ ಮೈತ್ರಿಗೆ ಆದ್ಯತೆ ನೀಡಲು ಇಂದು ಇಲ್ಲಿ ಅಂತ್ಯಗೊಂಡ ದಳದ ರಾಜಕೀಯ ವ್ಯವಹಾರ ಸಮಿತಿ ತೀರ್ಮಾನಿಸಿತು.

ಇದೇ ವೇಳೆ ಬಹುಜನ ಸಮಾಜ ಪಕ್ಷದೊಂದಿಗೂ ಉತ್ತರಪ್ರದೇಶದಲ್ಲಿ ಮೈತ್ರಿ ಮಾಡಿಕೊಳ್ಳಬೇಕು ಎಂದು ದಳದ ಒಂದು ವಿಭಾಗ ಪಟ್ಟುಹಿಡಿದಿರುವ ಕಾರಣ ಸಮಾಜವಾದಿ ಪಕ್ಷದೊಂದಿಗೆ ಸ್ಥಾನ ಹೊಂದಾಣಿಕೆಗೆ ತೊಡಕು ಎದುರಾಗಿದೆ. ಜನತಾದಳದ ಅಧ್ಯಕ್ಷ ಲಾಲುಪ್ರಸಾದ್ ಯಾದವ್ ಅವರ ಬೆಂಬಲಿಗರಾದ ಹಲವಾರು ನಾಯಕರು ಬಿಎಸ್‌ಪಿಗೆ ಆದ್ಯತೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

---

**50 ವರ್ಷಗಳ ಹಿಂದೆ** ಬುಧವಾರ, 24-3-1971

• **ಆರ್ಥಿಕ, ಸಾಮಾಜಿಕ ಪರಿವರ್ತನೆಗೆ ಸರ್ಕಾರ ಬದ್ಧ: ಗಿರಿ ಘೋಷಣೆ**

**ನವದೆಹಲಿ, ಮಾರ್ಚ್ 23–** ಆಡಳಿತ ಕಾಂಗ್ರೆಸ್ಸಿನ ಚುನಾವಣೆ ಪ್ರಣಾಳಿಕೆಯಲ್ಲಿ ನಮೂದಿಸಿರುವ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಕುರಿತ ಕಾರ್ಯಕ್ರಮವನ್ನು ಜಾರಿಗೆ ತರಲು ತಮ್ಮ ಹೊಸ ಸರ್ಕಾರ ಬದ್ಧವಾಗಿರುವುದಾಗಿ ರಾಷ್ಟ್ರಪತಿ ಶ್ರೀ ವಿ.ವಿ.ಗಿರಿ ಅವರು ಹರ್ಷೋದ್ಗಾರಗಳ ಮಧ್ಯೆ ಇಂದು ಸಂಸತ್‌ನ ಜಂಟಿ ಅಧಿವೇಶನದಲ್ಲಿ ತಿಳಿಸಿದರು.

ಮೂರು ವಾರಗಳ ಬಜೆಟ್ ಅಧಿವೇಶನವನ್ನು ಉದ್ದೇಶಿಸಿ ಅವರು ಮಾತನಾಡಿದರು.

• **ಬಿ.ಟಿ.ಎಸ್. ವಾಹನಗಳ ಹಠಾತ್ ತನಿಖೆ**

**ಬೆಂಗಳೂರು, ಮಾರ್ಚ್ 23–** ನಗರದ ಪೊಲೀಸರು ಮೋಟಾರ್ ವಾಹನಗಳ ಇನ್‌ಸ್ಪೆಕ್ಟರರ ಸಹಾಯದಿಂದ ಇಂದು ಬೆಳಿಗ್ಗೆ ಬಿ.ಟಿ.ಎಸ್. ಬಸ್ಸುಗಳ ಹಠಾತ್ ತನಿಖೆ ನಡೆಸಿದರು.

ನಾಲ್ಕು ಗಂಟೆಗಳ ಈ ಅನಿರೀಕ್ಷಿತ ತನಿಖೆ ಪರಿಣಾಮವಾಗಿ 50 ಬಿ.ಟಿ.ಎಸ್. ಬಸ್ಸುಗಳ ಪೈಕಿ ಎಂಟು ಬಸ್ಸುಗಳು ಸಂಚರಿಸಲು ಅನರ್ಹವಾಗಿರುವುದು ಕಂಡುಬಂತು.

---

**ಸಂಗತ**

# ಉಚಿತ ಕಾಣಿಕೆಯ ಧರ್ಮಸಂಕಟ

**ಒಂದೆಡೆ, ಹಿಡಿಯಷ್ಟನ್ನು ಉಚಿತವಾಗಿ ಹಂಚಿ ಅಪಾರ ಪ್ರಚಾರ ಪಡೆಯುವ ಉಮೇದು, ಇನ್ನೊಂದೆಡೆ, ಕೊಡುಗೈ ದಾನ ಮಾಡಿದರೂ ಪ್ರಚಾರದಿಂದ ಮಾರು ದೂರ ಉಳಿಯುವ ಬಯಕೆ...**

• ಮಲ್ಲಿಕಾರ್ಜುನ ಹೆಗ್ಗಳಗಿ

**ಪದವಿ** ಕಾಲೇಜಿನ ಮಹಿಳಾ ಪ್ರಾಚಾರ್ಯರೊಬ್ಬರು ಆಸ್ಪತ್ರೆಯ ಬೆಡ್ ಮೇಲೆ ಕುಳಿತು, ಬಡ ರೋಗಿಗಳಿಗೆ ಉಚಿತವಾಗಿ ಹಂಚುವ ಹಣ್ಣುಗಳನ್ನು ಪಡೆಯುತ್ತಿದ್ದ ಚಿತ್ರವೊಂದು ಈಚೆಗೆ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ರಾಜಕೀಯ ಯುವ ಧುರೀಣರೊಬ್ಬರು ತಮ್ಮ ಹುಟ್ಟುಹಬ್ಬದ ಪ್ರಯುಕ್ತ ಬೆಂಬಲಿಗರ ಪಡೆಯೊಂದಿಗೆ ಆಸ್ಪತ್ರೆಗೆ ಬಂದು ರೋಗಿಗಳಿಗೆ ಹಣ್ಣು ಹಂಚುವ ಕಾರ್ಯಕ್ರಮದ ಚಿತ್ರ ಅದು.

ಆ ಮಹಿಳಾ ಪ್ರಾಚಾರ್ಯರು ನನಗೆ ತುಂಬ ಆಪ್ತರು. ಅವರು ಆಸ್ಪತ್ರೆಗೆ ದಾಖಲಾಗಿರುವ ಫೋಟೊ ನೋಡಿ ಗಾಬರಿಯಾಗಿ, ಫೋನ್ ಮಾಡಿದೆ. ಆ ಹೆಣ್ಣುಮಗಳು ಬಿಕ್ಕಿ ಬಿಕ್ಕಿ ಅಳುತ್ತಾ ಹೀಗೆ ಹೇಳಿದರು- 'ಸರ್, ನನಗೆ ಬಿ.ಪಿ.ಯಲ್ಲಿ ಸ್ವಲ್ಪ ಏರುಪೇರಾಯಿತು. ವೈದ್ಯರ ಸಲಹೆಯಂತೆ ಒಂದು ದಿನದ ಮಟ್ಟಿಗೆ ಅಡ್ಮಿಟ್ ಆಗಿದ್ದೆ. ಅದಾಗಿ ಅರ್ಧ ಗಂಟೆಯೂ ಆಗಿರಲಿಲ್ಲ, ಒಂದು ದೊಡ್ಡ ಗುಂಪು ಬಂದು ನನಗೆ ಹೇಳದೇ ಕೇಳದೇ ಹಣ್ಣುಗಳನ್ನು ಕೈಗಿತ್ತು ಫೋಟೊ ತೆಗೆದುಕೊಂಡಿತು. ಮಾಧ್ಯಮದವರೂ ಬಂದಿದ್ದರು. ಅದು ಕನ್ನಡ, ಇಂಗ್ಲಿಷ್, ಮರಾಠಿ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಪತ್ರಿಕೆ ನೋಡಿದವರೆಲ್ಲ ನನಗೆ ಫೋನ್ ಮಾಡಿ, ಆಸ್ಪತ್ರೆಗೆ ದಾಖಲಾದ ಬಗ್ಗೆ ಕಳವಳದಿಂದ ವಿಚಾರಿಸುತ್ತಿದ್ದಾರೆ. ನಮ್ಮ ಕಾಲೇಜ್‌ನ ತುಂಬ ಇದೇ ಸುದ್ದಿಯ ಬಗ್ಗೆ ಚರ್ಚೆ ನಡೆಯುತ್ತಿದೆ. ತಿಂಗಳಿಗೆ 2 ಲಕ್ಷ ರೂಪಾಯಿ ಸಂಬಳ ಪಡೆಯುವ ನೀನು ಪುಕ್ಕಟೆ ಹಣ್ಣು ಪಡೆಯುವ ಅವಶ್ಯಕತೆ ಇತ್ತೇ ಎಂದು ಕೆಲವರು ಪ್ರಶ್ನಿಸುತ್ತಿದ್ದಾರೆ. ಈ ಸಂಗತಿಗಳು ನಮ್ಮ ಕುಟುಂಬದ ನೆಮ್ಮದಿಯನ್ನು ಹಾಳು ಮಾಡಿವೆ' ಎಂದರು.

'ಈಗ ಆಸ್ಪತ್ರೆಯಿಂದ ಮನೆಗೆ ಮರಳಿದ್ದೇನೆ. ಸಂಬಂಧಿಕರು, ಪರಿಚಿತರು ಕಳವಳದಿಂದ ಬಂದು ಆರೋಗ್ಯ ವಿಚಾರಿಸುತ್ತಿದ್ದಾರೆ. ಲೆಕ್ಕವಿಲ್ಲದಷ್ಟು ಫೋನ್‌ಗಳು ಬರುತ್ತಿವೆ. ನನಗೆ ಹಣ್ಣು ಕೊಟ್ಟವರು ಹುಟ್ಟುಹಬ್ಬ ಆಚರಿಸಿಕೊಂಡರೇನೋ ನಿಜ. ಆದರೆ ನಮ್ಮ ಮನೆ ನೆಮ್ಮದಿಯೇ ಹಾಳಾಗಿದೆ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಉಳ್ಳವರು, ಜನಪ್ರತಿನಿಧಿಗಳು ಕೆಲವರು ಹುಟ್ಟುಹಬ್ಬವನ್ನು ವೈಭವದಿಂದ ಆಚರಿಸಿಕೊಳ್ಳುತ್ತಾರೆ. ರೋಗಿಗಳಿಗೆ ಹಣ್ಣು, ಹಾಲು, ಬ್ರೆಡ್ ಹಂಚುವುದು ಕಾರ್ಯಕ್ರಮದ ಮುಖ್ಯ ಭಾಗವಾಗಿರುತ್ತದೆ. ಸಹಾಯದ ಅವಶ್ಯಕತೆ ಇರುವವರನ್ನು ಗುರುತಿಸಿ, ಬಯಸಿದವರಿಗೆ ಹಣ್ಣು ವಿತರಿಸಬಹುದು. ಅವಶ್ಯಕತೆ ಇಲ್ಲದವರಿಗೆ ಅವರ ಅನುಮತಿ ಪಡೆಯದೇ ಜೋರಾವರಿಯಿಂದ ಹಣ್ಣು ಹಂಚುವುದು ಸರಿಯಲ್ಲ. ಇಂತಹ ಚಿತ್ರಗಳನ್ನು ಮಾಧ್ಯಮಗಳಲ್ಲಿ ಪ್ರಕಟಿಸುವುದು ಅನೇಕ ಅನಾಹುತಗಳಿಗೆ ಕಾರಣವಾಗುತ್ತದೆ.

ಎಲ್ಲಕ್ಕಿಂತಲೂ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ರೋಗಿಯ ಚಿತ್ರ ಪ್ರಕಟಿಸುವುದು ಎಷ್ಟೋ ಬಾರಿ ಅವರಿಗೆ ಅಪಮಾನದ ಸಂಗತಿಯಾಗಿರುತ್ತದೆ. ಅದು ವ್ಯಕ್ತಿಯ ಖಾಸಗಿತನಕ್ಕೆ ಧಕ್ಕೆ ತರುತ್ತದೆ. ಇಂತಹ ಸೂಕ್ಷ್ಮಗಳನ್ನು ಅರಿಯದ ಪ್ರಚಾರಪ್ರಿಯರು ಮಾಧ್ಯಮಗಳಲ್ಲಿ ತಮ್ಮ ಸುದ್ದಿ ಪ್ರಕಟವಾದುದಕ್ಕೆ ಸಂತೋಷಪಡುತ್ತಾರೆ. ಆದರೆ ಚಿತ್ರದಲ್ಲಿ ಕಾಣಿಸಿಕೊಂಡ ಆ ರೋಗಿ ಅನುಭವಿಸುವ ಹಿಂಸೆ, ಸಂಕಟ, ಅಪಮಾನ ಬಹಳ ಜನಕ್ಕೆ ಗೊತ್ತಾಗುವುದಿಲ್ಲ.

ಮುಧೋಳ ಹೈಸ್ಕೂಲ್‌ನ ಹಳೆಯ ವಿದ್ಯಾರ್ಥಿಯೊಬ್ಬರು ವಿದೇಶದಲ್ಲಿ ದೊಡ್ಡ ಉದ್ಯಮಿಯಾಗಿದ್ದಾರೆ. ಅವರು ತಾವು ಓದಿದ ಶಾಲಾ ಕಟ್ಟಡಕ್ಕೆ ₹ 60 ಲಕ್ಷ ದೇಣಿಗೆ ನೀಡಿದ್ದಾರೆ. ಶಾಲೆಯ ಕಟ್ಟಡದ ಮೇಲೆ ಎಲ್ಲಿಯೂ ತಮ್ಮ ಹೆಸರು ದಾಖಲಿಸಕೂಡದು ಮತ್ತು ದೇಣಿಗೆಯ ವಿಚಾರ ಎಲ್ಲಿಯೂ ಪ್ರಚಾರಕ್ಕೆ ಬಳಕೆ ಆಗಬಾರದು ಎಂದು ತಾಕೀತು ಮಾಡಿದ್ದಾರೆ. ಶಾಲೆಯ ಆಡಳಿತ ಮಂಡಳಿಯವರು ಬಹಳ ಆಗ್ರಹಪಡಿಸಿದ್ದರಿಂದ '1984-85ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಕಾಣಿಕೆ' ಎಂದು ಬರೆಯಲು ಒಪ್ಪಿಗೆ ನೀಡಿದ್ದಾರೆ. ಅದು ಅವರ ಸಹಪಾಠಿಗಳಾಗಿದ್ದ ಎಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ.



ಕನ್ನಡದ ಪ್ರಸಿದ್ಧ ಲೇಖಕ, ಭಾಷಾತಜ್ಞ ದಿವಂಗತ ಕೆ.ಜಿ.ಕುಂದಣಗಾರ ಅವರಿಗೆ ಸಂಬಂಧಿಸಿದ ಒಂದು ಸಂಗತಿ ನೆನಪಿಗೆ ಬರುತ್ತದೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೌಜಲಗಿ ಗ್ರಾಮವು ಕುಂದಣಗಾರರ ಹುಟ್ಟೂರು. ಅಲ್ಲಿನ ಹೈಸ್ಕೂಲ್ 1961ರಲ್ಲಿ ಆರ್ಥಿಕ ತೊಂದರೆಯಿಂದ ಸ್ಥಗಿತಗೊಂಡಿತ್ತು. ಆಗ ಅವರು ತಮ್ಮ ಮನೆಯನ್ನು ಮಾರಾಟ ಮಾಡಿ ಹೈಸ್ಕೂಲ್ ಪುನರಾರಂಭಕ್ಕೆ ವ್ಯವಸ್ಥೆ ಮಾಡಿದ್ದರು. ಆದರೆ ಅವರು ಈ ಬಗ್ಗೆ ಎಲ್ಲಿಯೂ ಬರೆದುಕೊಂಡಿಲ್ಲ, ಮಾತ್ರವಲ್ಲ ಶಾಲೆಯಲ್ಲಿ ತಮ್ಮ ಭಾವಚಿತ್ರ ಹಾಕುವುದಕ್ಕೂ ಅನುಮತಿ ಕೊಡಲಿಲ್ಲ.

ಕರ್ನಾಟಕ ಸರ್ಕಾರವು ಗಡಿನಾಡ ಭಾಗದಲ್ಲಿ ಸಾಹಿತ್ಯ-ಸಂಶೋಧನೆಗಾಗಿ ಸೇವೆ ಸಲ್ಲಿಸಿದವರಿಗೆ ಪ್ರತಿವರ್ಷ 'ಪ್ರೊ. ಕೆ.ಜಿ.ಕುಂದಣಗಾರ ಗಡಿನಾಡ ಸಾಹಿತ್ಯ' ಪ್ರಶಸ್ತಿ ನೀಡುತ್ತದೆ. ಪ್ರಶಸ್ತಿ ₹ 5 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ. ತೆರೆಯ ಮರೆಯಲ್ಲಿ ನಿಂತು ದೊಡ್ಡ ಕೆಲಸ ಮಾಡಿದ ಕುಂದಣಗಾರ ಅವರನ್ನು ಈಗಲೂ ಕೌಜಲಗಿ ಜನ ಗೌರವದಿಂದ ಸ್ಮರಿಸುತ್ತಾರೆ.

ಸಂಪತ್ತು ಗಳಿಸಬೇಕೆಂಬ ಅದಮ್ಯ ಆಸೆ ಮನುಷ್ಯನಲ್ಲಿ ಇರುವಂತೆ, ಸಮಾಜಕ್ಕೆ ಸಹಾಯ ಮಾಡಬೇಕು, ದಾನ ನೀಡಬೇಕು ಎಂಬ ಒಳತುಡಿತ ಕೂಡ ಇರುತ್ತದೆ. ಅದನ್ನು ಪ್ರಚಾರ ಮಾಡಿಕೊಳ್ಳುವುದು ಸರಿಯಲ್ಲ ಎಂಬ ಸರಳ ಸತ್ಯವನ್ನು ಅರಿತುಕೊಳ್ಳಬೇಕು. 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ' ಎಂದು ಬಸವಣ್ಣ ಹೇಳಿದ ಮಾತು ತುಂಬ ಮಾರ್ಮಿಕವಾಗಿದೆ.

---

**ವಾಚಕರ ವಾಣಿ**

## ಕೋವಿಡ್ ನಿಯಮ: ಎಲ್ಲಿದೆ ಸ್ವಾಮಿ ಅಂತರ?

ರಾಜ್ಯ ಸಚಿವ ಸಂಪುಟ ಸಭೆ ಸೇರಿ ಲಾಕ್‌ಡೌನ್, ಸೆಮಿ ಲಾಕ್, ನೈಟ್ ಕರ್ಫ್ಯೂ ಇಲ್ಲ, ಬದಲಾಗಿ ಮಾಸ್ಕ್, ಅಂತರ ಕಾಯ್ದುಕೊಳ್ಳುವಿಕೆ, ಜನಸಂದಣಿ ನಿಯಂತ್ರಣ ಮೊದಲಾದ ಕೋವಿಡ್ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆಯಾಗಬೇಕೆಂದು ನಿರ್ಧರಿಸಿದೆ. ವಿಪರ್ಯಾಸವೆಂದರೆ, ರಾಜ್ಯದಾದ್ಯಂತ ರಥೋತ್ಸವ, ಜಾತ್ರೆಗಳು ಅಪಾರ ಜನಸ್ತೋಮದೊಂದಿಗೆ ಜರುಗುತ್ತಿವೆ. ಮಾಲ್‌ಗಳು, ಸಭೆ, ಸಮಾರಂಭಗಳಲ್ಲಿ ಭರ್ತಿ ಜನ. ಸಿನಿಮಾ ಪ್ರಚಾರಕ್ಕಾಗಿ ಬರುತ್ತಿರುವ ನಾಯಕ ನಟರನ್ನು ಕಾಣಲು ಎಲ್ಲೆಡೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಅಭಿಮಾನಿಗಳು ಒಟ್ಟೊಟ್ಟಾಗಿ ಸೇರುತ್ತಿದ್ದಾರೆ.

ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ಘೋಷಣೆಯಾಗಿದ್ದು, ಪ್ರಚಾರ ಸಭೆಗಳು ನಡೆಯಲಿವೆ. ಜನ ಬೇಕಾಬಿಟ್ಟಿ ಮಾಸ್ಕ್ ಧರಿಸಿ ಬಿಡುಬೀಸಾಗಿ ಪರಸ್ಪರ ತಗುಲಿಕೊಂಡೇ ಓಡಾಡುತ್ತಿದ್ದಾರೆ. ಎಲ್ಲಿದೆ ಸ್ವಾಮಿ ಅಂತರ ಕಾಯ್ದುಕೊಳ್ಳುವಿಕೆ? ಇದನ್ನೆಲ್ಲ ಕಂಡಾಗ, 'ನೀನು ಹೊಡೆದಂತೆ ಮಾಡು, ನಾನು ಅತ್ತಂತೆ ಮಾಡುತ್ತೇನೆ' ಎಂಬ ನಾಣ್ಣುಡಿ ನೆನಪಾಗುತ್ತಿದೆ.

**ಕೆ.ಶ್ರೀನಿವಾಸ ರಾವ್,** ಹರಪನಹಳ್ಳಿ

## ಅನುದಾನ ನಿರಾಕರಿಸುವ ವೈರಾಗ್ಯ ಮೂಡಲಿ

ಕರ್ನಾಟಕದಲ್ಲಿ ಮುಖ್ಯಮಂತ್ರಿಯಾದವರು ಅವರವರದ್ದೇ ಆದ ಹಿತಾಸಕ್ತಿಗಳಿಗಾಗಿ ಮಠ-ಮಾನ್ಯಗಳಿಗೆ ಕೋಟಿಗಟ್ಟಲೆ ಅನುದಾನವನ್ನು ಪ್ರಕಟಿಸುವುದು ಈಗ ಮಾಮೂಲಾಗಿದೆ. ಆದರೆ ಅವರು ಪ್ರಕಟಿಸಿದ ಮಾತ್ರಕ್ಕೆ, ಕೋಟ್ಯಂತರ ರೂಪಾಯಿ ಆಸ್ತಿ ಹೊಂದಿರುವ, ಲಕ್ಷಾಂತರ ರೂಪಾಯಿ ವ್ಯವಹಾರ ಮಾಡುವ ಮಠ-ಮಾನ್ಯಗಳು, ಅವು ಯಾವುದೇ ಜಾತಿ-ಮತ-ಧರ್ಮ ಮತ್ತು ಕೋಮುಗಳನ್ನು ಪ್ರತಿನಿಧಿಸಿದರೂ ಕೊಡಮಾಡುವ ಅನುದಾನವನ್ನು ಸ್ವೀಕರಿಸಲೇಬೇಕೆಂದೇನೂ ಇಲ್ಲ.

ಜನಸಾಮಾನ್ಯರ ಭಯ-ಭಕ್ತಿಪೂರ್ವಕ ಕಾಣಿಕೆಗಳನ್ನು ಪಡೆದು ಜನರಿಗೇ ಹಿಂದಿರುಗಿಸುವ ವಿರಾಗ ದೃಷ್ಟಿಯಿಂದ ಅಸ್ತಿತ್ವಕ್ಕೆ ಬಂದಿರುವ ಮಠ-ಮಾನ್ಯಗಳ ಮುಖ್ಯಸ್ಥರು, ಸರ್ಕಾರಿ ಅನುದಾನಗಳನ್ನು ಬೇಡವೆಂದು ಹೇಳುವ ವೈರಾಗ್ಯವನ್ನೂ ಮೈಗೂಡಿಸಿಕೊಂಡರೆ ಒಳ್ಳೆಯದೆಂದು ತೋರುತ್ತದೆ. ಜನರ ಹೆಸರು ಹೇಳಿಕೊಂಡು ಒಪ್ಪಿಕೊಂಡರೆ, ತಮ್ಮ ಆದಾಯದ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚಿನ ಹಣವನ್ನು ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತಿರುವ ಜನಸಾಮಾನ್ಯರ ಮೇಲಿನ ಹೊರೆ ಮತ್ತಷ್ಟು ಹೆಚ್ಚಾಗುತ್ತದೆ.

**ವಿ.ಎನ್.ಲಕ್ಷ್ಮೀನಾರಾಯಣ,** ಮೈಸೂರು

## ಜಲ ಕಾಯಕ: ಒಟ್ಟಿಗೇ ಕಾರ್ಯಪ್ರವೃತ್ತರಾಗೋಣ

'ಜಲ ಕಾಯುವ ಜಗದ ಕಾಯಕ' ಎಂಬ ವೆಂಕಿ ರಾಘವೇಂದ್ರ, ಗರ್ವಿತಾ ಗುಲಾಟಿ ಹಾಗೂ ಭಾರತಿ ಮಣೂರ್ ಅವರ ವಿಶ್ಲೇಷಣಾ ಲೇಖನ (ಪ್ರ.ವಾ., ಮಾರ್ಚ್ 22) ವಿಶ್ವ ಜಲ ದಿನದ ಸಂದರ್ಭದಲ್ಲಿ ಇಡೀ ಜಗತ್ತೇ ಕೇಳಲು ಬಾರಿಸಿದ ಎಚ್ಚರಿಕೆಯ ಗಂಟೆಯಂತಿದೆ. ಭೂಗ್ರಹದ ಶೇ 70ರಷ್ಟು ಭಾಗ ಜಲಾವೃತವಾಗಿದ್ದರೂ ಕೃಷಿ, ಕೈಗಾರಿಕೆ, ಪಶುಪಕ್ಷಿ ಮತ್ತು ಮನುಷ್ಯನಿಗೆ ಲಭ್ಯವಿರುವ ನೀರು ಶೇಕಡ 3ರಷ್ಟು ಮಾತ್ರ. ಇಷ್ಟರಲ್ಲಿ ಶೇ 90ರಷ್ಟು ಪ್ರಮಾಣ ಧ್ರುವ ಪ್ರದೇಶಗಳಲ್ಲಿ ಮಂಜುಗಡ್ಡೆಯ ರೂಪದಲ್ಲಿ ಇಲ್ಲವೇ ಭೂಗರ್ಭದಲ್ಲಿ ಅಂತರ್ಜಲದ ರೂಪದಲ್ಲಿ ಕಾಣಬರುತ್ತದೆ. ಅಂದರೆ ಶೇ 1ಕ್ಕಿಂತ ಕಡಿಮೆ ಪ್ರಮಾಣದ ನೀರು ನದಿ, ಹಳ್ಳ, ಕೊಳ್ಳ, ಸರೋವರಗಳ ರೂಪದಲ್ಲಿದೆ. ಇದು ಸಹ ಜಾಗತಿಕವಾಗಿ ಸಮನಾಗಿಲ್ಲ.

ಆದರೆ ಮಾನವ ತಾನೇ ಈ ಜಗದ ಕಿರೀಟ ಎಂದು ಬೀಗುತ್ತಾ ನೀರಿನ ಮೂಲಗಳನ್ನು ಯದ್ವಾತದ್ವಾ ಹಾಳುಗೆಡವುತ್ತಾ ಜಲಮಾಲಿನ್ಯ ಸೃಷ್ಟಿಸಿ ನೀರಿಗೆ ಸಂಚಕಾರ ತರುತ್ತಿದ್ದಾನೆ. ಕೇಳಿದವರಿಗೆ, ಬಂದ ಅತಿಥಿಗಳಿಗೆ ನೀರನ್ನಾದರೂ ಕೊಟ್ಟು ಸತ್ಕರಿಸಬೇಕು ಎನ್ನುವ ಸಾಂಸ್ಕೃತಿಕ ಹಿನ್ನೆಲೆಯ ನಾವು ಈಗ ನೀರನ್ನು ಕೊಳ್ಳಬೇಕಾಗಿದೆ. ನೀರಿಗಾಗಿ ಓಣಿ ಜಗಳ, ರಾಜ್ಯಗಳ ಮಧ್ಯೆ ಭಿನ್ನಾಭಿಪ್ರಾಯ, ದೇಶ ದೇಶಗಳ ನಡುವೆ ಕದನ ನಮ್ಮನ್ನು ಎಲ್ಲಿಗೆ ಮುಟ್ಟಿಸುವುದೋ ತಿಳಿದಿಲ್ಲ. ಆದ್ದರಿಂದ ನಾವು ಜಲಸಾಕ್ಷರರಾಗಬೇಕಾಗಿದೆ. ವೃಥಾ ಪೋಲು ಮಾಡದೆ ಜಾಗರೂಕರಾಗಿ ನೀರನ್ನು ಬಳಸಬೇಕಿದೆ. ಇದಲ್ಲದೆ ಕಡಿಮೆ ನೀರು ಬೇಡುವ ಕೃಷಿ ಬೆಳೆಗಳಿಗೆ ಆದ್ಯತೆ ನೀಡಬೇಕಿದೆ. ಮಳೆ ನೀರಿನ ಸಂರಕ್ಷಣೆ ಕುರಿತು ಗಮನ ಹರಿಸಬೇಕಿದೆ. ಇವೆಲ್ಲವನ್ನೂ ಒಟ್ಟಿಗೆ ಮಾಡುವುದರಿಂದ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ಕಂಡುಕೊಳ್ಳುವ ಸಾಧ್ಯತೆ ಇದೆ. ಶಾಶ್ವತ ಪರಿಹಾರಕ್ಕಾಗಿ ಇಡೀ ಜಗತ್ತು ಒಕ್ಕೊರಲಿನಿಂದ ಕಾರ್ಯಪ್ರವೃತ್ತವಾಗಬೇಕಾದ ತುರ್ತು ಇದೆ.

**ಬಿ.ಆರ್.ಅಣ್ಣಾಸಾಗರ,** ಸೇಡಂ

## ರೋಪ್‌ವೇಗೆ ಶಂಕರ್‌ನಾಗ್ ಹೆಸರಿಡಲಿ

'ನಂದಿ ಬೆಟ್ಟಕ್ಕೆ ರೋಪ್‌ವೇ ನಿರ್ಮಿಸಲು ನಿರ್ಧರಿಸಲಾಗಿದೆ. ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ' ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ.ಯೋಗೇಶ್ವರ್ ಹೇಳಿದ್ದಾರೆ (ಪ್ರ.ವಾ., ಮಾರ್ಚ್ 23). ರೋಪ್‌ವೇ ನಿರ್ಮಾಣದಿಂದ ಪ್ರವಾಸೋದ್ಯಮ ಗರಿಗೆದರುತ್ತದೆ. ಸದರಿ ರೋಪ್‌ವೇ ನಿರ್ವಹಣೆ ಮತ್ತು ಸುತ್ತಮುತ್ತಲ ಅಂಗಡಿಮುಂಗಟ್ಟುಗಳಲ್ಲಿ ಸ್ಥಳೀಯರಿಗೆ ಆದ್ಯತೆ ಸಿಗಲಿ. ಜೊತೆಗೆ ಈ ರೋಪ್‌ವೇ ಕನಸು ಕಂಡಿದ್ದು ನಮ್ಮ ಕನ್ನಡದ ಕ್ರಿಯಾಶೀಲ ನಟರಾಗಿದ್ದ ದಿವಂಗತ ಶಂಕರ್‌ನಾಗ್. ಆದ್ದರಿಂದ ಈ ರೋಪ್‌ವೇಗೆ 'ಶಂಕರ್‌ನಾಗ್ ರೋಪ್‌ವೇ' ಎಂದು ಹೆಸರಿಟ್ಟು ಆ ನಟನಿಗೆ ಗೌರವ ಸೂಚಿಸಲಿ.

**ಪತ್ತಂಗಿ ಎಸ್. ಮುರಳಿ,** ಬೆಂಗಳೂರು

## ಜನಪ್ರತಿನಿಧಿಗಳ ಅಭಿನಂದನಾರ್ಹ ಕಾರ್ಯ

ವಿಧಾನಸಭೆಯಲ್ಲಿ ಇತ್ತೀಚೆಗೆ ಪಕ್ಷಭೇದ ಮರೆತು ನ್ಯಾಯಾಂಗ ವ್ಯವಸ್ಥೆಯಲ್ಲಿನ ನ್ಯೂನತೆಗಳ ಬಗ್ಗೆ ಚರ್ಚೆ ನಡೆದಿರುವುದು ಪ್ರಜಾಪ್ರಭುತ್ವದಲ್ಲಿ ಒಳ್ಳೆಯ ಬೆಳವಣಿಗೆ. ಇದು ನಮ್ಮ ರಾಜ್ಯದ ವಿಧಾನಸಭೆಯಲ್ಲಿ ಆರಂಭವಾಗಿರುವುದು ಹೆಮ್ಮೆಯ ಸಂಗತಿ. ಇದಕ್ಕಾಗಿ ನಮ್ಮ ಜನಪ್ರತಿನಿಧಿಗಳನ್ನು ಅಭಿನಂದಿಸಬೇಕು. ಸದನದ ಹೊರಗೆ ಮಾತನಾಡಿದರೆ ಅದು ನ್ಯಾಯಾಂಗ ನಿಂದನೆ ಎನಿಸಿಕೊಳ್ಳುತ್ತದೆ. ಆದ್ದರಿಂದ ಸದನದ ಒಳಗೆ ಇಂಥ ಚರ್ಚೆ ಅಗತ್ಯ. ಸಾಮಾಜಿಕ ನ್ಯಾಯ ಕಾಪಾಡುವ ದಿಸೆಯಲ್ಲಿ ಇಂಥ ಸಂದರ್ಭದಲ್ಲಿ ಶಾಸಕರ ಹೊಣೆಗಾರಿಕೆ ಹೆಚ್ಚಾಗಿರುತ್ತದೆ.

**ನಂಜನಹಳ್ಳಿ ನಾರಾಯಣ,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hospete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಕಚ್ಚಾ ತೈಲ: ಒಪೆಕ್ ಬದಲು ಅಮೆರಿಕದತ್ತ ಒಲವು

**ವಿಶ್ವದಲ್ಲಿ ಅತಿಹೆಚ್ಚು** ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುವ ದೇಶಗಳ ಸಾಲಿನಲ್ಲಿ ಭಾರತವು ಮೂರನೇ ಸ್ಥಾನದಲ್ಲಿದೆ. ದೇಶದಲ್ಲಿ ಪ್ರತಿನಿತ್ಯ ಅಗತ್ಯವಿರುವ ಕಚ್ಚಾತೈಲದ ಶೇ 84ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಈವರೆಗೆ ಕಚ್ಚಾತೈಲಕ್ಕಾಗಿ ಭಾರತವು ಮಧ್ಯಪ್ರಾಚ್ಯ ಮತ್ತು ಕೊಲ್ಲಿ ರಾಷ್ಟ್ರಗಳನ್ನು ಅವಲಂಬಿಸಿತ್ತು. ಈ ರಾಷ್ಟ್ರಗಳು ಒಪೆಕ್ (ಪೆಟ್ರೋಲಿಯಂ ರಫ್ತು ರಾಷ್ಟ್ರಗಳ ಸಂಘಟನೆ) ಸದಸ್ಯ ರಾಷ್ಟ್ರಗಳಾಗಿವೆ. ಈಗಲೂ ಭಾರತಕ್ಕೆ ಆಮದಾಗುವ ಕಚ್ಚಾತೈಲದಲ್ಲಿ ಒಪೆಕ್ ರಾಷ್ಟ್ರಗಳದ್ದೇ ಸಿಂಹಪಾಲು. ಆದರೆ 2021ರ ಜನವರಿ ಮತ್ತು ಫೆಬ್ರುವರಿಯಲ್ಲಿ ಒಪೆಕ್ ದೇಶಗಳಿಂದ ಭಾರತವು ಆಮದು ಮಾಡಿಕೊಂಡ ಕಚ್ಚಾತೈಲದ ಪ್ರಮಾಣದಲ್ಲಿ ಇಳಿಕೆಯಾಗಿದೆ. ಇದೇ ಅವಧಿಯಲ್ಲಿ ಅಮೆರಿಕದಿಂದ ಆಮದು ಮಾಡಿಕೊಂಡ ಕಚ್ಚಾತೈಲದ ಪ್ರಮಾಣದಲ್ಲಿ ಏರಿಕೆಯಾಗಿದೆ.

ಒಪೆಕ್ ರಾಷ್ಟ್ರಗಳು ಕಚ್ಚಾತೈಲದ ಬೆಲೆ ಏರಿಕೆ ಮಾಡಲು ಉತ್ಪಾದನೆ ಕಡಿತ ತಂತ್ರದ ಮೊರೆ ಹೋಗಿದ್ದೇ ಇದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಕಚ್ಚಾತೈಲಕ್ಕಾಗಿ ಒಪೆಕ್ ದೇಶಗಳ ಮೇಲಿನ ಅವಲಂಬನೆಯನ್ನು ಕೇಂದ್ರ ಸರ್ಕಾರವು ಕಡಿಮೆ ಮಾಡುತ್ತಿದೆ. ಕಚ್ಚಾ ತೈಲ ಪೂರೈಕೆಯಲ್ಲಿನ ವ್ಯತ್ಯಯ ಮತ್ತು ಬೆಲೆಯಲ್ಲಿನ ಏರಿಕೆಯೇ ಇದಕ್ಕೆ ಪ್ರಮುಖ ಕಾರಣ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. 2020ರಲ್ಲಿ ಕೋವಿಡ್‌ನ ಕಾರಣದಿಂದ ವಿಶ್ವದಾದ್ಯಂತ ತೈಲದ ಬೇಡಿಕೆ ಕುಸಿದಿತ್ತು. ಇದರಿಂದ ಕಚ್ಚಾತೈಲದ ಬೆಲೆಯೂ ಕುಸಿದಿತ್ತು. ಲಾಕ್‌ಡೌನ್ ತೆರವಿನ ನಂತರ ಕಚ್ಚಾತೈಲಕ್ಕೆ ಬೇಡಿಕೆಯೂ ಹೆಚ್ಚಿತು, ಬೆಲೆಯೂ ಏರಿಕೆಯಾಯಿತು. ಚಳಿಗಾಲದ ಆರಂಭದೊಂದಿಗೆ ವಿಶ್ವದ ಹಲವೆಡೆ ಕೋವಿಡ್-19ರ ಎರಡನೇ ಅಲೆಯೂ ಆರಂಭವಾಯಿತು. ಕಚ್ಚಾತೈಲದ ಬೇಡಿಕೆ ಮತ್ತು ಬೆಲೆ ಮತ್ತೆ ಕುಸಿಯಿತು. ಇದನ್ನು ಸರಿದೂಗಿಸುವ ಉದ್ದೇಶದಿಂದ ಒಪೆಕ್ ರಾಷ್ಟ್ರಗಳು ಕಚ್ಚಾತೈಲ ಉತ್ಪಾದನೆಯನ್ನು ಕಡಿತ ಮಾಡಿದವು. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಪೂರೈಕೆಯಲ್ಲಿ ವ್ಯತ್ಯಯವಾಯಿತು. ಇದರ ಪರಿಣಾಮವಾಗಿ ಕಚ್ಚಾತೈಲದ ಬೆಲೆ ಏರಿಕೆಯಾಯಿತು.

ಒಪೆಕ್ ದೇಶಗಳು ಪೂರೈಕೆ ಮಾಡುತ್ತಿದ್ದ ಬ್ರೆಂಟ್ ಕಚ್ಚಾತೈಲದ ಬೆಲೆಗಿಂತಲೂ ಕಡಿಮೆ ಬೆಲೆಯಲ್ಲಿ ಅಮೆರಿಕದ ಡಬ್ಲ್ಯುಟಿಐ ಕಚ್ಚಾತೈಲ ಲಭ್ಯವಿತ್ತು. ಅಮೆರಿಕದಲ್ಲೂ ಬೇಡಿಕೆ ಕುಸಿದಿತ್ತು ಮತ್ತು ತೈಲ ಕಂಪನಿಗಳಲ್ಲಿ ಸಾಕಷ್ಟು ಸಂಗ್ರಹ ಇದ್ದ ಕಾರಣ, ಅಮೆರಿಕದ ಕಚ್ಚಾತೈಲವು ಕಡಿಮೆ ಬೆಲೆಗೆ ಬಿಕರಿಯಾಯಿತು. ಕಡಿಮೆ ಬೆಲೆಗೆ ಲಭ್ಯವಿದ್ದ ಕಾರಣ ಭಾರತವೂ ಅಮೆರಿಕದ ಕಚ್ಚಾತೈಲವನ್ನು ಖರೀದಿ ಮಾಡಿತು. 2020ರ ಡಿಸೆಂಬರ್‌ನಲ್ಲಿ ಭಾರತಕ್ಕೆ ಹೆಚ್ಚು ಕಚ್ಚಾತೈಲ ಪೂರೈಸಿದ ದೇಶಗಳ ಸಾಲಿನಲ್ಲಿ ಅಮೆರಿಕವು 5ನೇ ಸ್ಥಾನದಲ್ಲಿತ್ತು. 2021ರ ಜನವರಿಯಲ್ಲಿ ಅಮೆರಿಕವು, ಭಾರತಕ್ಕೆ ಹೆಚ್ಚು ಕಚ್ಚಾತೈಲ ಪೂರೈಸಿದ ದೇಶಗಳ ಸಾಲಿನಲ್ಲಿ ಮೂರನೇ ಸ್ಥಾನಕ್ಕೆ ಏರಿತು. ಫೆಬ್ರುವರಿಯಲ್ಲಿ ಅಮೆರಿಕವು ಎರಡನೇ ಸ್ಥಾನವನ್ನು ಗಿಟ್ಟಿಸಿಕೊಂಡಿದೆ.

ಭಾರತಕ್ಕೆ ಹೆಚ್ಚು ಕಚ್ಚಾತೈಲ ಪೂರೈಸುವ ದೇಶಗಳ ಪಟ್ಟಿಯಲ್ಲಿ ಹಲವು ವರ್ಷಗಳಿಂದ ಎರಡನೇ ಸ್ಥಾನವನ್ನು ಕಾಯ್ದುಕೊಂಡಿದ್ದ ಸೌದಿ ಅರೇಬಿಯಾವು, ಇದೇ ಅವಧಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಕುಸಿಯಿತು. ಬೆಲೆ ಹೆಚ್ಚಳದ ಕಾರಣ ಸೌದಿ ಅರೇಬಿಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾತೈಲದ ಪ್ರಮಾಣವನ್ನು ಭಾರತ ಕಡಿತ ಮಾಡಿತು. ಭಾರತಕ್ಕೆ ಹೆಚ್ಚು ಕಚ್ಚಾತೈಲ ಪೂರೈಕೆ ಮಾಡುವ ದೇಶಗಳ ಪಟ್ಟಿಯಲ್ಲಿ ಹಲವು ವರ್ಷಗಳಿಂದ ಇರಾಕ್ ಮೊದಲ ಸ್ಥಾನ ಕಾಯ್ದುಕೊಂಡಿದೆ. ಇರಾಕ್ ಈಗಲೂ ಮೊದಲ ಸ್ಥಾನದಲ್ಲೇ ಇದ್ದರೂ, ಅಲ್ಲಿಂದ ಆಮದು ಮಾಡಿಕೊಳ್ಳುವ ಕಚ್ಚಾತೈಲದ ಪ್ರಮಾಣವನ್ನು ಕೇಂದ್ರ ಸರ್ಕಾರ ಕಡಿತ ಮಾಡಿದೆ. 2020ರ ಫೆಬ್ರುವರಿಗೆ ಹೋಲಿಸಿದರೆ, 2021ರ ಫೆಬ್ರುವರಿಯಲ್ಲಿ ಇರಾಕ್‌ನಿಂದ ಆಮದು ಮಾಡಿಕೊಂಡ ಕಚ್ಚಾತೈಲದ ಪ್ರಮಾಣದಲ್ಲಿ ಶೇ 23ರಷ್ಟು ಇಳಿಕೆಯಾಗಿದೆ.

ಕಚ್ಚಾತೈಲದ ಉತ್ಪಾದನೆ ಕಡಿತ ಮಾಡಿದ್ದರಿಂದಲೇ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಕೆಯಾಗುತ್ತಿದೆ. ಈಗಷ್ಟೇ ಚೇತರಿಸಿಕೊಳ್ಳುತ್ತಿರುವ ಆರ್ಥಿಕತೆಗೆ, ಈ ಬೆಲೆ ಏರಿಕೆಯಿಂದ ಅಡಚಣೆಯಾಗುತ್ತದೆ. ಹೀಗಾಗಿ ತೈಲ ಉತ್ಪಾದನೆ ಮತ್ತು ಪೂರೈಕೆಯನ್ನು ಹೆಚ್ಚಿಸಿ ಎಂದು ಭಾರತವು ಒಪೆಕ್ ಸಂಘಟನೆಗೆ ಮನವಿ ಸಲ್ಲಿಸಿತ್ತು. ಈ ಮನವಿಯನ್ನು ಒಪೆಕ್ ತಿರಸ್ಕರಿಸಿತು. 2020ರಲ್ಲಿ ಅಗ್ಗದ ಬೆಲೆಗೆ ಖರೀದಿಸಿದ ಕಚ್ಚಾತೈಲ ನಿಮ್ಮ ಸಂಗ್ರಹಾಗಾರಗಳಲ್ಲಿ ಇದೆ. ಅದನ್ನು ಬಳಸಿ ಎಂದು ಹೇಳಿತು. ಈ ಬೆಳವಣಿಗೆಯ ನಂತರ ಕೇಂದ್ರ ಸರ್ಕಾರವು, ಕಚ್ಚಾತೈಲ ಆಮದು ನೀತಿಯಲ್ಲಿಯೇ ಬದಲಾವಣೆ ಮಾಡಲು ಕ್ರಮ ತೆಗೆದುಕೊಂಡಿತು.

ಒಪೆಕ್‌ನ ಈ ತಿರಸ್ಕಾರದ ಬೆನ್ನಲ್ಲೇ, 'ಮಧ್ಯಪ್ರಾಚ್ಯ ದೇಶಗಳಿಂದ ಆಮದು ಮಾಡಿಕೊಳ್ಳುವ ಕಚ್ಚಾತೈಲದ ಪ್ರಮಾಣದಲ್ಲಿ ಇಳಿಕೆ ಮಾಡಿ' ಎಂದು ಪೆಟ್ರೋಲಿಯಂ ಸಚಿವಾಲಯವು ಭಾರತದ ತೈಲ ಕಂಪನಿಗಳಿಗೆ ಆದೇಶಿಸಿದೆ. ಇದೇ ಮೇ ತಿಂಗಳಿನಿಂದ ಬೇರೆ ಮೂಲಗಳಿಂದ ಹೆಚ್ಚು ಕಚ್ಚಾತೈಲ ಖರೀದಿಸಲು ತೈಲ ಕಂಪನಿಗಳು ಕ್ರಮ ತೆಗೆದುಕೊಂಡಿವೆ. ಕಡಿಮೆ ಬೆಲೆಗೆ ಲಭ್ಯವಿರುವ ಕಾರಣ ಅಮೆರಿಕದ ಕಚ್ಚಾತೈಲವನ್ನೇ ಖರೀದಿಸುವ ಸಾಧ್ಯತೆಗಳು ಅಧಿಕವಾಗಿವೆ. ಅಮೆರಿಕದಿಂದ ಖರೀದಿಸುವ ಕಚ್ಚಾತೈಲದ ಬೆಲೆ ಕಮ್ಮಿ ಇದ್ದರೂ, ಸಾಗಣೆ ವೆಚ್ಚ ಅಧಿಕವಾಗಿರುವ ಕಾರಣ ಭಾರತದ ಗ್ರಾಹಕನಿಗೆ ಇದರಿಂದ ಗಣನೀಯ ಲಾಭವೇನೂ ಆಗುವುದಿಲ್ಲ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

## ಪರ್ಯಾಯ ಮೂಲಗಳ ಹುಡುಕಾಟ

ಕಚ್ಚಾ ತೈಲ ಉತ್ಪಾದನೆ ಹಾಗೂ ರಫ್ತನ್ನು ಹೆಚ್ಚಿಸುವಂತೆ ಭಾರತವು ಮಾಡಿದ್ದ ಮನವಿಯನ್ನು, ತೈಲ ರಫ್ತು ರಾಷ್ಟ್ರಗಳ ಸಂಘಟನೆ (ಒಪೆಕ್) ತಿರಸ್ಕರಿಸಿದ ಬಳಿಕ ಭಾರತವು ಕಚ್ಚಾ ತೈಲಕ್ಕಾಗಿ ಬೇರೆ ರಾಷ್ಟ್ರಗಳತ್ತ ಮುಖಮಾಡಿದೆ.

ಒಪೆಕ್ ಕೂಟದಲ್ಲಿ ಇಲ್ಲದ ಬೇರೆ ರಾಷ್ಟ್ರಗಳಿಂದ ಕಚ್ಚಾತೈಲ ಆಮದು ಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಸುವಂತೆ ತೈಲ ಸಂಸ್ಕರಣಾ ಸಂಸ್ಥೆಗಳಿಗೆ ಸೂಚನೆಯನ್ನೂ ಸರ್ಕಾರ ನೀಡಿದೆ ಎನ್ನಲಾಗಿದೆ. ಮೇ ತಿಂಗಳ ವೇಳೆಗೆ ಮಧ್ಯಪ್ರಾಚ್ಯದಿಂದ ಭಾರತವು ಮಾಡುತ್ತಿರುವ ಆಮದಿನ ಪ್ರಮಾಣದಲ್ಲಿ ನಾಲ್ಕನೇ ಒಂದರಷ್ಟನ್ನು ಇಳಿಸಲು ತೈಲ ಸಂಸ್ಕರಣಾ ಕಂಪನಿಗಳು ಮುಂದಾಗಿವೆ. ಸೌದಿಯಿಂದ ಆಮದಾಗುವ ಕಚ್ಚಾ ತೈಲದ ಪ್ರಮಾಣವು ಫೆಬ್ರುವರಿ ತಿಂಗಳಲ್ಲಿಯೇ ಗಣನೀಯವಾಗಿ ಇಳಿಕೆಯಾಗಿದೆ.

'ತೈಲ ಆಮದು ನೀತಿಯಲ್ಲಿನ ಈ ಬದಲಾವಣೆಯಿಂದ ಆರಂಭದಲ್ಲಿ ಹೆಚ್ಚು ವೆಚ್ಚವಾಗುವ ಸಾಧ್ಯತೆ ಇದ್ದರೂ, ದೀರ್ಘಾವಧಿಯಲ್ಲಿ ದೇಶಕ್ಕೆ ಅನುಕೂಲವಾಗಲಿದೆ' ಎಂದು ಮೂಲಗಳು ಹೇಳಿವೆ.

ಆದರೆ, ತನ್ನ ಅಗತ್ಯದ ಶೇ 84ಕ್ಕೂ ಹೆಚ್ಚಿನ ಕಚ್ಚಾ ತೈಲವನ್ನು ಆಮದು ಮಾಡುವ ಭಾರತಕ್ಕೆ ಇರುವ ಪರ್ಯಾಯಗಳು ಯಾವುವು? ಹೊಸದಾಗಿ ತೈಲೋತ್ಪಾದನೆಯನ್ನು ಆರಂಭಿಸಿರುವ ಗಯಾನಾದಿಂದ ಆಮದು ಮಾಡುವುದು ಸರ್ಕಾರದ ಮುಂದೆ ಇರುವ ಒಂದು ಪ್ರಸ್ತಾವವಾಗಿದೆ. ನೈಜೀರಿಯಾದಿಂದಲೂ ಆಮದನ್ನು ಹೆಚ್ಚಿಸುವ ಪ್ರಯತ್ನಗಳು ನಡೆದಿವೆ. ಅಮೆರಿಕದ ನಿಷೇಧಗಳ ಕಾರಣದಿಂದಾಗಿ ಇರಾನ್‌ನಿಂದ ತೈಲ ಆಮದು ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಆದರೆ ಶೀಘ್ರದಲ್ಲೇ ಅದು ಪುನರಾರಂಭವಾಗಬಹುದು ಎಂಬ ವಿಶ್ವಾಸದಲ್ಲಿ ಭಾರತ ಇದೆ ಎಂದು ಮೂಲಗಳು ಹೇಳುತ್ತಿವೆ.

ಬ್ರೆಜಿಲ್‌ನಿಂದ ಕಚ್ಚಾತೈಲ ಆಮದು ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲೂ ಭಾರತ ಕ್ರಮ ಕೈಗೊಂಡಿದೆ. ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊಕೆಮಿಕಲ್ಸ್ ಲಿ. (ಎಂಆರ್‌ಪಿಎಲ್) ಬ್ರೆಜಿಲ್‌ನಿಂದ 10 ಲಕ್ಷ ಬ್ಯಾರಲ್ ಕಚ್ಚಾ ತೈಲ ಖರೀದಿಯ ಒಪ್ಪಂದ ಮಾಡಿಕೊಂಡಿದೆ. ಮೇ ತಿಂಗಳಲ್ಲಿ ಇದು ಭಾರತಕ್ಕೆ ಬರಲಿದೆ. ಇದೇ ಮೊದಲ ಬಾರಿಗೆ ಬ್ರೆಜಿಲ್‌ನಿಂದ ಕಚ್ಚಾ ತೈಲ ಖರೀದಿಸಲಾಗಿದೆ.

ಇದಲ್ಲದೆ, ಹಿಂದೆ ತನಗೆ ತೈಲ ಸರಬರಾಜು ಮಾಡುತ್ತಿದ್ದ ಮಿತ್ರ ರಾಷ್ಟ್ರ ರಷ್ಯಾದ ಮೇಲೂ ಭಾರತ ಕಣ್ಣಿಟ್ಟಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಸಂಸ್ಥೆಯು ರಷ್ಯಾದ ಜತೆಗಿನ ತನ್ನ ತೈಲ ಆಮದು ಒಪ್ಪಂದವನ್ನು ಈಗಾಗಲೇ ನವೀಕರಿಸಿಕೊಂಡಿದೆ.

## 74 ದಿನಗಳಷ್ಟು ತೈಲ ದಾಸ್ತಾನು

ತನ್ನ ಬಳಕೆಯ ಬಹುಪಾಲು ತೈಲವನ್ನು ಆಮದು ಮಾಡಿಕೊಳ್ಳುವ ಭಾರತ, ದೇಶದ ಮೂರು ಕಡೆ ಬೃಹತ್ ತೈಲ ಸಂಗ್ರಹಾಗಾರಗಳನ್ನು ನಿರ್ಮಿಸಿಕೊಂಡಿದೆ. ಇದರಲ್ಲಿ ಎರಡು ಸಂಗ್ರಹಾಗಾರಗಳು ಕರ್ನಾಟಕದಲ್ಲಿದ್ದರೆ, ಒಂದು ಆಂಧ್ರಪ್ರದೇಶದಲ್ಲಿದೆ. ಪಶ್ಚಿಮ ಕರಾವಳಿಯ ಮಂಗಳೂರು ಹಾಗೂ ಉಡುಪಿಯ ಪಾದೂರಿನಲ್ಲಿ ಬೃಹತ್ ಸಂಗ್ರಹ ಕೇಂದ್ರಗಳಿವೆ. ಪೂರ್ವ ಕರಾವಳಿಯ ವಿಶಾಖಪಟ್ಟಣದಲ್ಲಿ ಮತ್ತೊಂದು ಇದೆ. ಈ ಮೂರರ ಒಟ್ಟು ಸಾಮರ್ಥ್ಯ ಸುಮಾರು 53 ಲಕ್ಷ ಟನ್.

ಕೇಂದ್ರ ಸರ್ಕಾರವು ಸ್ಥಾಪಿಸಿರುವ ವಿಶೇಷ ಉದ್ದೇಶದ 'ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ಲಿಮಿಟೆಡ್' (ಐಎಸ್‌ಪಿಆರ್‌ಎಲ್) ನಿರ್ವಹಣೆಯಲ್ಲಿ ಈ ಮೂರು ಸಂಗ್ರಹಾಗಾರಗಳು ಇವೆ. ಈ ಮೂರು ಕಡೆಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೀಸಲು ದಾಸ್ತಾನು ಮಾಡಲಾಗುತ್ತದೆ.

ಈ ಪೈಕಿ ವಿಶಾಖಪಟ್ಟಣದಲ್ಲಿ 13.3 ಲಕ್ಷ ಟನ್, ಮಂಗಳೂರಿನಲ್ಲಿ 15 ಲಕ್ಷ ಟನ್ ಹಾಗೂ ಪಾದೂರಿನಲ್ಲಿ 25 ಲಕ್ಷ ಟನ್ ತೈಲ ದಾಸ್ತಾನು ಮಾಡುವ ಸಾಮರ್ಥ್ಯವಿದೆ. ಒಡಿಶಾದ ಚಂಡಿಖೋಲದಲ್ಲಿ ಸುಮಾರು 40 ಲಕ್ಷ ಟನ್ ಸಾಮರ್ಥ್ಯದ ಸಂಗ್ರಹಾಗಾರ ನಿರ್ಮಾಣ ಹಂತದಲ್ಲಿದೆ.

ಈ ಮೂರು ಕಡೆಗಳಲ್ಲಿ ಇರುವ ದಾಸ್ತಾನು ಸುಮಾರು 9.5 ದಿನಗಳ ಕಚ್ಚಾ ತೈಲ ಅಗತ್ಯವನ್ನು ಪೂರೈಸುತ್ತದೆ ಎಂದು ಅಂದಾಜಿಸಲಾಗಿದೆ. ಇನ್ನು ದೇಶದ ತೈಲ ಕಂಪನಿಗಳು (ಒಎಂಸಿ) 64.5 ದಿನಗಳಿಗೆ ಆಗುವಷ್ಟು ಕಚ್ಚಾತೈಲ ಮತ್ತು ತೈಲೋತ್ಪನ್ನ ಶೇಖರಿಸಬಲ್ಲವು. ಹೀಗಾಗಿ ಪ್ರಸ್ತುತ 74 ದಿನಗಳ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನ ದಾಸ್ತಾನು ಮಾಡಬಹುದು.

2020ರ ಏಪ್ರಿಲ್/ಮೇ ತಿಂಗಳಲ್ಲಿ ತೈಲೋತ್ಪನ್ನಗಳಿಗೆ ಬೇಡಿಕೆ ಕಡಿಮೆ ಇತ್ತು. ಕಡಿಮೆ ಬೆಲೆಯ ಕಚ್ಚಾ ತೈಲದ ಲಾಭವನ್ನು ಪಡೆದುಕೊಂಡು, ಮೀಸಲು ಪೆಟ್ರೋಲಿಯಂ ಸಂಗ್ರಹಾಗಾರಗಳನ್ನು ಅವುಗಳ ಪೂರ್ಣ ಸಾಮರ್ಥ್ಯಕ್ಕೆ ಅನುಗುಣವಾಗಿ ಭರ್ತಿ ಮಾಡಲಾಗಿದೆ. ಇದರಿಂದ ಬೊಕ್ಕಸಕ್ಕೆ ಸುಮಾರು ₹5,000 ಕೋಟಿ ಉಳಿತಾಯವಾಗಿದೆ.

## ಅಮೆರಿಕದಿಂದ ಆಮದು ಏರಿಕೆ




**48%** ಫೆಬ್ರುವರಿಯಲ್ಲಿ ಅಮೆರಿಕದಿಂದ ಕಚ್ಚಾತೈಲ ಆಮದಿನ ಏರಿಕೆ ಪ್ರಮಾಣ

**42%** ಫೆಬ್ರುವರಿಯಲ್ಲಿ ಸೌದಿ ಅರೇಬಿಯಾದಿಂದ ಕಚ್ಚಾತೈಲ ಆಮದಿನ ಇಳಿಕೆ ಪ್ರಮಾಣ

**23%** ಫೆಬ್ರುವರಿಯಲ್ಲಿ ಇರಾಕ್‌ನಿಂದ ಕಚ್ಚಾತೈಲ ಆಮದಿನ ಇಳಿಕೆ ಪ್ರಮಾಣ

ಆಧಾರ: ರಾಯಿಟರ್ಸ್, ಪಿಐಬಿ, ಪಿಟಿಐ



ಮಾನವರಹಿತ ಪೂರ್ವಭಾವಿ ಗಗನಯಾನದಲ್ಲಿ ಬಳಕೆಯಾಗಲಿರುವ ಮನುಷ್ಯ ಪ್ರತಿಕೃತಿ 'ವ್ಯೋಮಮಿತ್ರ' –ಪ್ರಜಾವಾಣಿ ಚಿತ್ರ

# ಗಗನಯಾನಿಗಳ ತರಬೇತಿ ಪೂರ್ಣ

• ರಶೀದ್ ಕಪ್ಪನ್

**ಬೆಂಗಳೂರು:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಹತ್ವಾಕಾಂಕ್ಷೆಯ ಮಾನವಸಹಿತ ಗಗನಯಾನ ಯೋಜನೆಗೆ ಆಯ್ಕೆಯಾಗಿರುವ ನಾಲ್ವರು ಗಗನಯಾನಿಗಳು ರಷ್ಯಾದಲ್ಲಿ ತರಬೇತಿಯನ್ನು ಪೂರ್ಣಗೊಳಿಸಿದ್ದಾರೆ. ರಷ್ಯಾದ ಸ್ಟಾರ್ ಸಿಟಿಯಲ್ಲಿ ಇರುವ ಜಿಸಿಟಿಸಿ ಕೇಂದ್ರದಲ್ಲಿ 2020ರ ಫೆಬ್ರುವರಿಯಿಂದ ನಡೆಯುತ್ತಿದ್ದ ತರಬೇತಿಯು ಈಗ ಪೂರ್ಣಗೊಂಡಿದೆ.

ಭಾರತೀಯ ವಾಯುಪಡೆಯ ನಾಲ್ವರು ಪೈಲಟ್‌ಗಳನ್ನು ಈ ಯೋಜನೆಗೆ ಗಗನಯಾನಿಗಳಾಗಲು ಆಯ್ಕೆ ಮಾಡಲಾಗಿತ್ತು. ಈ ಗಗನಯಾನಿಗಳ ತರಬೇತಿ ಪೂರ್ಣಗೊಂಡಿರುವ ಮಾಹಿತಿಯನ್ನು ರಷ್ಯನ್ ಸ್ಟೇಟ್ ಸ್ಪೇಸ್ ಕೊಆಪರೇಷನ್-ರಾಸ್ಕೋಸ್ಮೋಸ್ ಬಹಿರಂಗಪಡಿಸಿದೆ. 'ಗಗನಯಾನ ತರಬೇತಿಯನ್ನು ಪೂರ್ಣಗೊಳಿಸಿದ ಭಾರತದ ಗಗನಯಾನಿಗಳನ್ನು ಭೇಟಿಯಾಗಿದ್ದೆ. ಜತೆಗೆ ಜಂಟಿ ಬಾಹ್ಯಾಕಾಶ ಯೋಜನೆಗಳ ಬಗ್ಗೆ ಭಾರತದ ರಾಯಭಾರಿಯ ಜತೆ ಚರ್ಚಿಸಿದೆ' ಎಂದು ರಾಸ್ಕೋಸ್ಮೋಸ್ ಪ್ರಧಾನ ನಿರ್ದೇಶಕ ಡಿಮಿಟ್ರಿ ರೊಗೋಝಿನ್ ಟ್ವೀಟ್ ಮಾಡಿದ್ದಾರೆ.

### ಮುಖ್ಯಾಂಶಗಳು

- ವಾಯುಪಡೆಯ ನಾಲ್ವರು ಪೈಲಟ್‌ಗಳಿಗೆ ರಷ್ಯಾದಲ್ಲಿ ವಿಶೇಷ ತರಬೇತಿ
- ಭಾರತಕ್ಕೆ ವಾಪಸಾದ ನಂತರ ಇನ್ನೂ ಮೂರು ಭಿನ್ನ ತರಬೇತಿ
- 2022ರ ಆಗಸ್ಟ್‌ಗೂ ಮುನ್ನ ಗಗನಯಾನ ಕಾರ್ಯಾಚರಣೆ ಸಾಧ್ಯತೆ

2020ರ ಫೆಬ್ರುವರಿ 10ರಂದು ತರಬೇತಿ ಆರಂಭವಾಗಿತ್ತು. ಆದರೆ, ಕೋವಿಡ್‌ನ ಕಾರಣದಿಂದ ತರಬೇತಿ ಸ್ಥಗಿತವಾಗಿತ್ತು. ಮತ್ತೆ ಮೇ ತಿಂಗಳಿನಲ್ಲಿ ತರಬೇತಿ ಆರಂಭವಾಗಿತ್ತು. ಬಾಹ್ಯಾಕಾಶ ಕ್ಯಾಪ್ಸೂಲ್‌ಗಳಲ್ಲಿ ಲ್ಯಾಂಡಿಂಗ್ ಆಗುವ ತರಬೇತಿಯನ್ನು ಈ ಗಗನಯಾನಿಗಳಿಗೆ ನೀಡಲಾಗಿದೆ. ಭಿನ್ನ ವಾತಾವರಣ ಮತ್ತು ಭಿನ್ನ ಮೇಲ್ಮೈನಲ್ಲಿ ಲ್ಯಾಂಡಿಂಗ್ ತರಬೇತಿ ಕೊಡಲಾಗಿದೆ.

ಜತೆಗೆ, ಬಾಹ್ಯಾಕಾಶದಲ್ಲಿನ ಶೂನ್ಯ ಗುರುತ್ವ ಸ್ಥಿತಿಯಲ್ಲಿ ಹೇಗಿರಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಗಿದೆ. ಇದಕ್ಕಾಗಿ, ವಿಶೇಷ ವಿಮಾನದಲ್ಲಿ ಹಾರಾಟದ ವೇಳೆ ಶೂನ್ಯ ಗುರುತ್ವ ಸ್ಥಿತಿ ನಿರ್ಮಾಣ ಮಾಡಲಾಗಿತ್ತು. ಅಲ್ಲದೆ, ತುರ್ತು ಸಂದರ್ಭದಲ್ಲಿ ಹೇಗೆ ವರ್ತಿಸಬೇಕು ಎಂಬುದರ ತರಬೇತಿ ನೀಡಲಾಗಿದೆ. ಈ ತರಬೇತಿಯ ಭಾಗವಾಗಿ ಭಾರತದ ಗಗನಯಾನಿಗಳು ರಷ್ಯನ್ ಭಾಷೆ ಕಲಿತಿದ್ದಾರೆ, ಸೋಯುಜ್ ಮಾನವಸಹಿತ ಬಾಹ್ಯಾಕಾಶ ನೌಕೆಯ ವಿನ್ಯಾಸ ಮತ್ತು ವ್ಯವಸ್ಥೆಗಳನ್ನು ಅಧ್ಯಯನ ಮಾಡಿದ್ದಾರೆ.

ಈ ಗಗನಯಾನಿಗಳು ಭಾರತಕ್ಕೆ ವಾಪಸಾದ ನಂತರ, ಬೆಂಗಳೂರಿನಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಏವಿಯೇಷನ್ ಮೆಡಿಸಿನ್, ಪುಣೆಯ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್ ಮತ್ತು ಮುಂಬೈನಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ನೇವಲ್ ಮೆಡಿಸಿನ್‌ನಲ್ಲಿ ತರಬೇತಿ ಪಡೆಯಲಿದ್ದಾರೆ.

ಮಾನವಸಹಿತ ಗಗನಯಾನಕ್ಕೆ ಪೂರ್ವಬಾವಿಯಾಗಿ, ಇಸ್ರೊ ಎರಡು ಮಾನವರಹಿತ ಗಗನಯಾನ ನಡೆಸಲಿದೆ. ಈ ಎರಡೂ ಕಾರ್ಯಾಚರಣೆಗಳಲ್ಲಿ ಮನುಷ್ಯನ ಪ್ರತಿಕೃತಿ 'ವ್ಯೋಮಮಿತ್ರ'ವನ್ನು ಬಳಸಲಾಗುತ್ತದೆ. ಗಗನಯಾನಿಗಳು ಬಾಹ್ಯಾಕಾಶದಲ್ಲಿ 7 ದಿನಗಳನ್ನು ಕಳೆಯಲಿದ್ದಾರೆ. ₹10,000 ಕೋಟಿ ಮೊತ್ತದ ಈ ಯೋಜನೆಯು 2022ರಲ್ಲಿ ನಡೆಯುವ ಸಾಧ್ಯತೆ ಇದೆ. ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ತುಂಬುವ ಮುನ್ನವೇ ಈ ಕಾರ್ಯಾಚರಣೆಯನ್ನು ನಡೆಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಬಾಂಗ್ಲಾದೇಶದ** ಥಾಕುರ್ ಗಾವ್‌ನಲ್ಲಿ ಕಾಳಿ ಮಾತೆಯ ಮೂರ್ತಿಯನ್ನು ದಹನ ಮಾಡಲಾಗಿದೆ ಎಂದು 'ಪೋಸ್ಟ್‌ಕಾರ್ಡ್ ಕನ್ನಡ' ತನ್ನ ಫೇಸ್‌ಬುಕ್ ಪುಟದಲ್ಲಿ ಮಂಗಳವಾರ ಒಂದು ಪೋಸ್ಟ್ ಮಾಡಿದೆ. ಸುಟ್ಟುಹೋಗಿರುವ ಕಾಳಿ ಮಾತೆಯ ಮೂರ್ತಿಯ ಚಿತ್ರವನ್ನೂ ಪೋಸ್ಟ್‌ನಲ್ಲಿ ಹಂಚಿಕೊಳ್ಳಲಾಗಿದೆ. ಜತೆಗೆ, 'ಕೆಲವು ತಿಂಗಳ ಹಿಂದೆ ಪಾಕಿಸ್ತಾನದಲ್ಲಿ ಕೃಷ್ಣ ದೇವಸ್ಥಾನವನ್ನು ಬೆಂಕಿ ಹಚ್ಚಿ ನಾಶ ಮಾಡಲಾಗಿತ್ತು. ಆದರೆ ವಿಶ್ವಸಂಸ್ಥೆ ಮಾತ್ರ ಮೌನವಾಗಿದೆ. ಅವರಿಗೆ ಕೇವಲ ಅಬ್ರಾಹಮಿಕ್ ಮತಗಳ ಮೇಲಿನ ದಾಳಿಗಳಷ್ಟೇ ಕಾಣುತ್ತವೆ' ಎಂದು ಪೋಸ್ಟ್‌ನಲ್ಲಿ ಬರೆಯಲಾಗಿದೆ.

**ಇದು ಸುಳ್ಳು ಸುದ್ದಿ** ಎಂದು ದಿ ಪ್ರಿಂಟ್, ಆಲ್ಟ್ ನ್ಯೂಸ್ 2020ರ ಸೆಪ್ಟೆಂಬರ್‌ನಲ್ಲಿಯೇ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. 2020ರ ಸೆಪ್ಟೆಂಬರ್ 20ರಂದು ಬಿಜೆಪಿ ಸಂಸದ ಅರ್ಜುನ್ ಸಿಂಗ್, ಟ್ವಿಟರ್‌ನಲ್ಲಿ ಈ ಚಿತ್ರವನ್ನು ಟ್ವೀಟ್ ಮಾಡಿದ್ದರು. ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ಮುಸ್ಲಿಮರು ಕಾಳಿ ಮಾತೆಯ ಮೂರ್ತಿಯನ್ನು ಸುಟ್ಟಿದ್ದಾರೆ ಎಂದು ಅವರು ಆರೋಪಿಸಿದ್ದರು. ಆದರೆ, 'ಬೆಂಕಿ ಅವಘಡದಿಂದ ಮೂರ್ತಿ ಸುಟ್ಟುಹೋಗಿದೆ. ಇದರಲ್ಲಿ ಬೇರೆ ಧರ್ಮವನ್ನು ಎಳೆದು ತರುವುದು ಬೇಡ. ನಮ್ಮ ಗ್ರಾಮದಲ್ಲಿ ಹಿಂದೂ-ಮುಸ್ಲಿಮರು ಸಾಮರಸ್ಯದಿಂದ ಇದ್ದೇವೆ' ಎಂದು ದೇವಾಲಯದ ಟ್ರಸ್ಟಿ ಸುಖದೇವ್ ವಾಜಪೇಯಿ ಅವರು ಹೇಳಿಕೆ ನೀಡಿದ್ದರು. ಮುರ್ಶಿದಾಬಾದ್ ಪೊಲೀಸ್ ವರಿಷ್ಠಾಧಿಕಾರಿ ಸಹ ಇದನ್ನು ದೃಢಪಡಿಸಿದ್ದರು.

## ಗುಂಡಣ್ಣ

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಕನ್ಯಾ ಪರೀಕ್ಷೆ

**ಮಹೋಷಧಕುಮಾರ** ಅಮರಾದೇವಿಯನ್ನು ತನ್ನ ಹೆಂಡತಿಯಾಗಲು ತಕ್ಕ ಕನ್ಯೆ ಎಂದು ಮನದಲ್ಲಿ ತೀರ್ಮಾನಿಸಿದ. ಆದರೂ ಆಕೆಯ ಗುಣಗಳನ್ನು ಮತ್ತಷ್ಟು ಪರೀಕ್ಷೆ ಮಾಡಬೇಕು ಎಂದುಕೊಂಡ. ಮಾತುಕತೆಯಾದ ಮೇಲೆ ಅಮರಾದೇವಿ, 'ಸ್ವಾಮಿ, ನಾನು ಗೋಧಿ ಗಂಜಿ ತಂದಿದ್ದೇನೆ. ಕುಡಿಯುತ್ತೀರಾ?' ಎಂದು ಕೇಳಿದಳು. ಆಹಾರವನ್ನು ಬೇಡವೆನ್ನುವುದು ಅಮಂಗಲವೆಂದುಕೊಂಡು, 'ಆಯ್ತು ಕೊಡು, ದೇವಿ' ಎಂದ. ಆಕೆ ಗಂಜಿಯ ಮಡಕೆಯನ್ನು ಕೆಳಗಿಳಿಸಿದಳು. ಕುಮಾರ ಗಮನಿಸುತ್ತಿದ್ದ. ಆಕೆ ಕೈ ತೊಳೆಯಲು ನೀರು ಕೊಟ್ಟರೆ ಸರಿ, ಇಲ್ಲವಾದರೆ ಆಕೆಯನ್ನು ಬಿಟ್ಟು ಹೋಗುತ್ತೇನೆ ಎಂದುಕೊಂಡ. ಆಕೆ ಒಂದು ಲೋಟದಲ್ಲಿ ಸ್ವಚ್ಛವಾದ ನೀರು ತೆಗೆದುಕೊಂಡು, 'ಸ್ವಾಮಿ, ಊಟಕ್ಕೆ ಮೊದಲು ಕೈ ತೊಳೆಯಿರಿ' ಎಂದು ನೀರು ಹಾಕಿದಳು. ಕುಮಾರನಿಗೆ ಸಂತೋಷವಾಯಿತು. ಆಕೆ ತಟ್ಟೆಯಲ್ಲಿ ನೀಡಿದ ಗಂಜಿಯನ್ನು ಕುಡಿದ. ಅದು ತುಂಬ ತೆಳ್ಳಗಾಗಿ, ಗೋಧಿಯ ಅಂಶ ಕಡಿಮೆಯಾಗಿತ್ತು. 'ಭದ್ರೆ, ಗಂಜಿ ಬಹಳ ಮಂದವಾಗಿದೆ' ಎಂದ. ಆಕೆ, 'ಹೌದು, ಸ್ವಾಮಿ, ಈ ವರ್ಷ ಹೆಚ್ಚು ನೀರು ದೊರಕಲಿಲ್ಲ' ಎಂದಳು. ಹಾಗೆಂದರೆ ಈ ವರ್ಷ ಮಳೆ ಕಡಿಮೆಯಾಗಿ, ಬೆಳೆ ಸರಿಯಾಗಿ ಬರದೆ, ಮನೆಯಲ್ಲಿ ಬಡತನ ಬಂದಿದೆ ಎಂದು ತಿಳಿದುಕೊಂಡ.

ಕೈ, ಬಾಯಿ ತೊಳೆದುಕೊಂಡು, ಆಕೆಯ ಮನೆಯ ವಿಳಾಸವನ್ನು ಕೇಳಿ ತಿಳಿದುಕೊಂಡ. ನಂತರ ಮನೆಯನ್ನು ಹುಡುಕಿಕೊಂಡು ಹೋದ. ಅಮರಾದೇವಿಯ ತಾಯಿ ಅವನನ್ನು ಪ್ರೀತಿಯಿಂದ ಸ್ವಾಗತಿಸಿದಳು. ಆಕೆಗೆ ಈತ ತನ್ನ ಮಗಳನ್ನು ಹುಡುಕಿಕೊಂಡು ಬಂದಿರಬೇಕು ಎನ್ನಿಸಿತು. ಕುಮಾರ ಮನೆಯನ್ನು ನೋಡಿದ. ಅವರು ದರಿದ್ರರಾಗಿದ್ದಾರೆಂದೂ, ಒಂದು ಕಾಲಕ್ಕೆ ಚೆನ್ನಾಗಿ ಬದುಕಿದವರೆಂದು ತಿಳಿಯಿತು. 'ಅಮ್ಮಾ, ನಾನೊಬ್ಬ ದರ್ಜಿ. ಹೊಲಿಯಲು ಯಾವುದಾದರೂ ಬಟ್ಟೆ ಇದ್ದರೆ ಕೊಡಿ' ಎಂದ ಕುಮಾರ. ಆಕೆ, 'ಬಟ್ಟೆಗಳಿವೆ, ಆದರೆ ಹೊಲಿಯಲು ಕೊಡಲು ಹಣವಿಲ್ಲ' ಎಂದಳು. 'ಅಮ್ಮಾ, ನನಗೆ ಕೂಲಿಯ ಅಪೇಕ್ಷೆ ಇಲ್ಲ. ಬಟ್ಟೆ ಕೊಡಿ ಹೊಲಿಯುತ್ತೇನೆ' ಎಂದ ಮಹೋಷಧಕುಮಾರ. ಆಕೆ ಹಳೆ ಬಟ್ಟೆಗಳನ್ನು ತಂದುಕೊಟ್ಟಳು. ಆತ ಅವುಗಳನ್ನು ಕ್ಷಣಾರ್ಧದಲ್ಲಿ ಹೊಲಿದು ಸರಿ ಮಾಡುತ್ತಿದ್ದ. ಆಕೆ ತಮ್ಮ ಮನೆಯ ಸುತ್ತಮುತ್ತಲಿನವರಿಗೆ ಈ ಪವಾಡ ಸದೃಶ ಕೆಲಸವನ್ನು ಹರಡಿದಳು. ಜನ ಬಟ್ಟೆಗಳನ್ನು ತಂದು ತಂದು ಕೊಟ್ಟರು. ಒಂದೇ ದಿನದಲ್ಲಿ ಕುಮಾರ ಸಾವಿರ ನಾಣ್ಯಗಳನ್ನು ಸಂಪಾದಿಸಿದ. ಸಂಜೆಯ ಹೊತ್ತಿಗೆ ಅಮರಾದೇವಿ ತಲೆಯ ಮೇಲೆ ಸೌದೆಯ ಹೊರೆಯನ್ನು ಎತ್ತಿಕೊಂಡು ಬಂದು ಅಡುಗೆ ಮಾಡಿದಳು. ಊಟ ರುಚಿಯಾಗಿತ್ತು. ಹಾಗಾದರೆ ಕನ್ಯೆ ಪಾಕಶಾಸ್ತ್ರ ನಿಪುಣೆಯಾಗಿದ್ದಾಳೆ ಎಂದುಕೊಂಡ.

ಎಲ್ಲರ ಊಟವಾದ ಮೇಲೆ ಏನಾದರೂ ಪದಾರ್ಥ ಉಳಿದಿದೆಯೇ ಎಂದು ಅಡುಗೆ ಮನೆಗೆ ಹೋಗಿ ನೋಡಿ ಬಂದ. ಯಾವ ಪದಾರ್ಥವೂ ಉಳಿದು ವ್ಯರ್ಥವಾಗಿರಲಿಲ್ಲ. ಆದ್ದರಿಂದ ಆಕೆ ತುಂಬ ಜಾಣೆ, ಯಾವ ಪದಾರ್ಥವನ್ನು ವ್ಯಯ ಮಾಡದೆ, ಹಣಕಾಸನ್ನು ಚೆನ್ನಾಗಿ ನಿಭಾಯಿಸುತ್ತಾಳೆ ಎಂದು ತಿಳಿದುಕೊಂಡ. ಆದರೂ, ಅಡುಗೆ ಯಾವುದೂ ಚೆನ್ನಾಗಿರಲಿಲ್ಲ, ಪದಾರ್ಥವನ್ನೆಲ್ಲ ವ್ಯರ್ಥ ಮಾಡಿದೆ ಎಂದು ಆಕೆಯನ್ನು ತೆಗಳಿದ. ಆಕೆ ಮಾತಿಗೆ ವಿರೋಧ ತೋರದೆ, ಮೃದುವಾಗಿ ನಕ್ಕಳು. ನಕ್ಕದ್ದು ಏಕೆ ಎಂದು ಕೇಳಿದಾಗ, 'ನೀವು ಸುಮ್ಮನೆ ನನ್ನನ್ನು ಪರೀಕ್ಷಿಸಲು ತೆಗಳಿದ್ದು. ನೀವು ಊಟ ಮಾಡುವಾಗ ಮುಖದಲ್ಲಿ ಇದ್ದ ಸಂತೃಪ್ತಿಯನ್ನು ಕಂಡಿದ್ದೆ. ನೀವು ಎರಡೆರಡು ಬಾರಿ ಹಾಕಿಸಿಕೊಂಡಾಗ ಊಟ ಇಷ್ಟವಾಯಿತು ಎಂಬುದು ತಿಳಿದಿತ್ತು. ಅದಕ್ಕೆ ನಗೆ ಬಂತು' ಎಂದಳು. ಹಾಗಾದರೆ ಈ ಹುಡುಗಿ ಮನಸ್ಸನ್ನು ಚೆನ್ನಾಗಿ ಅರಿಯುತ್ತಾಳೆ ಎಂಬುದು ಖಚಿತವಾಗಿ, ಮನಸ್ಸು ಆಕೆಯನ್ನು ಒಪ್ಪಿತು. ❖

## ದಿನ ಭವಿಷ್ಯ

ಬುಧವಾರ 24 ಮಾರ್ಚ್ 2021

**ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ಏಕಾದಶೀ ಗಂ. 57-57 (ಬೆ.ಘಾ. 5-38) ಬುಧವಾರ ನಿತ್ಯ ನಕ್ಷತ್ರ ಪುಷ್ಯ ಗಂ. 31-57 (ರಾ. 7-14) ಅತಿಗಂಡ ನಾಮ ಯೋಗ ಗಂ. 3-56 ವಣಿಜ ಕರಣ ಗಂ. 28-00 ವಿಷಾಭಾವಃ ಅಮೃತ ಗಂ. 14-45:** ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-25 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 4 7

**ಮೇಷ:** ನಿಮ್ಮ ವಿರುದ್ಧ ಪಿತೂರಿ ನಡೆಸುತ್ತಿರುವವರ ಬಣ್ಣ ಇಂದು ಬಯಲಾಗಲಿದೆ. ಮೇಧಾವಿ ತನದಿಂದಾಗಿ ಹಿತಕರ ವಾತಾವರಣ ನಿಮ್ಮದಾಗುವುದು. ಗೊಂದಲದ ನಿವಾರಣೆಗಾಗಿ ವೆಚ್ಚ ಮಾಡುವ ಸಾಧ್ಯತೆ ಇದೆ.

**ವೃಷಭ:** ಅಭಿರುಚಿಗೆ ತಕ್ಕಂತೆ ಸ್ವಾವಲಂಬಿ ಕಾರ್ಯಗಳಲ್ಲಿ ತೊಡಗುವಿರಿ. ಆದರ್ಶ ಹೊಂದಿದ ಕೆಲಸಕಾರ್ಯಗಳಿಗೆ ಸಹಾಯ ದೊರಕಿ ಕಾರ್ಯಸಾಧನೆ ಮಾಡಲಿದ್ದೀರಿ. ಘನತೆ ಗೌರವಗಳು ನಿಮ್ಮದಾಗಲಿವೆ.

**ಮಿಥುನ:** ಹೊಂದಿಕೊಳ್ಳುವ ಮನೋಭಾವದಿಂದಾಗಿ ಮಹತ್ವದ ವಿಷಯಗಳಲ್ಲಿ ಒಡಂಬಡಿಕೆಗೆ ಬರುವ ಸಾಧ್ಯತೆ. ವಿಪರೀತ ಸನ್ನಿವೇಶಗಳು ಎದುರಾಗಬಹುದು. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯ ಚರ್ಚೆ ನಡೆಯುವ ಸಾಧ್ಯತೆ.

**ಕರ್ಕಾಟಕ:** ಸದಾಚಾರ ಕಾರ್ಯಗಳಲ್ಲಿ ಸ್ವಸ್ಥ ಮನಸ್ಸಿನಿಂದ ತೊಡಗುವಿರಿ. ಇಷ್ಟ ಮಿತ್ರರ ಮಧ್ಯಸ್ಥಿಕೆಯಲ್ಲಿ ಗಂಭೀರ ಸಮಾಲೋಚನೆಗಳು ನಡೆಯುವ ಸಾಧ್ಯತೆ ಇದ್ದು ಶುಭದಾಯಕವಾಗಿ ಪರಿಣಮಿಸಲಿದೆ.

**ಸಿಂಹ:** ಸಮಸ್ಯೆಗಳ ಪರಿಹಾರಕ್ಕಾಗಿ ನಿಮ್ಮ ಹೊಸ ಜಾಣ್ಮೆಯನ್ನು ಬಳಸಬೇಕಾದ ಸಂದರ್ಭ ಬರಬಹುದು. ನಿಮ್ಮ ದಿಟ್ಟ ಮಾತುಗಳಿಂದಾಗಿ ಅನಾವಶ್ಯಕ ಹೊರೆ. ಸಾಂಸಾರಿಕ ಸಂತೋಷ ಅನುಭವಿಸುವಿರಿ.

**ಕನ್ಯಾ:** ಭರವಸೆಗಳ ಮಹಾಪೂರವೆ ಹರಿದುಬಂದು ಸಂತೋಷ ಮೂಡುವುದು. ಸೇವಾಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಸವಾಲುಗಳು ಎದುರಾಗಲಿದ್ದು ಎದೆಗುಂದದೇ ಮುನ್ನುಗ್ಗಿ, ಯಶಸ್ಸು ನಿಮ್ಮದಾಗಲಿದೆ.

**ತುಲಾ:** ಬೇರೆಯವರ ಸಲಹೆಯಿಂದಾಗಿ ಅಪಾಯದಲ್ಲಿ ಸಿಲುಕಿಕೊಳ್ಳುವ ಸಾಧ್ಯತೆ. ಹಿರಿಯರ ಮಾತುಗಳನ್ನು ಗೌರವಿಸುವುದರಿಂದ ಆಪತ್ತಿನಿಂದ ಪಾರು. ಛಲಕ್ಕೊಂದು ಬಲದೊರೆತು ಯಶಸ್ಸು ನಿಮ್ಮದಾಗಲಿದೆ.

**ವೃಶ್ಚಿಕ:** ನಿಮ್ಮ ಬಹುದಿನಗಳ ಬಯಕೆ ಈಡೇರುವ ಸಾಧ್ಯತೆ. ವೃತ್ತಿಯಲ್ಲಿ ಬದಲಾವಣೆ ಮಾಡುವ ಸಾಧ್ಯತೆ. ಉತ್ತಮ ಕೆಲಸ ಕಾರ್ಯಗಳಿಂದಾಗಿ ಮನ್ನಣೆ ಗಳಿಸುವಿರಿ. ಮನೆಯವರ ಆರೋಗ್ಯದ ಬಗ್ಗೆ ನಿಗಾ ವಹಿಸಿ.

**ಧನು:** ಬಂಧುಗಳ ಸಲಹೆ ಮತ್ತು ಆಶ್ವಾಸನೆಗಳಲ್ಲಿ ವಿಶ್ವಾಸ ಇಡಿ. ಹೊಸ ಕೆಲಸಕಾರ್ಯಗಳಲ್ಲಿ ತೊಡಗಲು ಪ್ರಶಸ್ತವಾಗಿದೆ. ಷರತ್ತು ಬದ್ಧ ಅವಕಾಶಗಳು ದೊರಕುವ ಸಾಧ್ಯತೆ. ಉದ್ಯೋಗರಂಗದಲ್ಲಿ ಬದಲಾವಣೆ ಸಾಧ್ಯತೆ.

**ಮಕರ:** ಕಷ್ಟಗಳೆಲ್ಲವೂ ಕರಗಿ ಕಾರ್ಯ ಯೋಜನೆಗಳು ಸುಲಭವಾಗಿ ಸಾಕಾರಗೊಳ್ಳುವವು. ಕೆಲಸಕಾರ್ಯಗಳಿಗೆ ಸ್ಫೂರ್ತಿ ದೊರಕುವುದು. ಬಂಧುವರ್ಗದವರಿಂದ ಸಕಾಲಿಕ ನೆರವು ಸಾಧ್ಯತೆ.

**ಕುಂಭ:** ನಂಬಿ ಬಂದವರಿಗೆ ಉತ್ತಮ ಆಸರೆ ನೀಡಿ ಹರ್ಷದಾಯಕ ಸಂದೇಶ ನೀಡುವ ಸಾಧ್ಯತೆ. ಚಮತ್ಕಾರಿಕವಾಗಿ ಸತ್ಕಾರ್ಯಗಳಲ್ಲಿ ತೊಡಗಿ ನಿರ್ವಹಿಸುವ ಅವಕಾಶ ನಿಮ್ಮದಾಗಲಿದೆ. ಪ್ರಶಂಸೆಗೆ ಪಾತ್ರರಾಗುವಿರಿ.

**ಮೀನ:** ಬಹುದಿನಗಳಿಂದ ಬಾಕಿ ಇರುವ ಕೆಲಸ ಕಾರ್ಯಗಳು ಇಂದು ವಿಳಂಬವಿಲ್ಲದೇ ನೆರವೇರುವ ಸಾಧ್ಯತೆ. ಗೌರವಾದರಗಳು ನಿಮ್ಮನ್ನರಸಿ ಬರುವವು. ಭರವಸೆಗಳ ಈಡೇರಿಕೆಗಾಗಿ ಅತ್ಯಂತ ಶ್ರಮ ವಹಿಸಬೇಕಾದೀತು.

**ನಿಮ್ಮ ಜನ್ಮದಿನ 24-ಮಾರ್ಚ್** ಈ ದಿನವು ಅತ್ಯಂತ ಶುಭಕರವಾಗಿದ್ದು, ವ್ಯವಹಾರದಲ್ಲಿ ಪ್ರಸ್ತುತ ವರ್ಷದಲ್ಲಿ ವಿಶೇಷ ಸಾಧನೆಯೊಂದನ್ನು ಮಾಡಲಿದ್ದೀರಿ. ಪ್ರಾರಂಭಿಸಬೇಕೆಂದಿರುವ ಉದ್ಯಮವನ್ನು ಪ್ರಾರಂಭಿಸಿ. ಸಂಗಾತಿಯಿಂದ ನಿಮ್ಮ ನಡವಳಿಕೆಗಳ ಬಗ್ಗೆ ಗೌರವಾದರ ದೊರಕಿ ದಾಂಪತ್ಯದಲ್ಲಿ ಸದಾ ಸಂತೋಷವನ್ನು ಅನುಭವಿಸುವಿರಿ.

## ಪದಬಂಧ 4546 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಅರಸಿದಾಗ ಕಾಣಿಸಿದ ರಾಜ! (3)
3.ತಾರೀಕು ಇಲ್ಲಿ ನಮೂದಾಗಿದೆ (3)
4.ಬಿಡದಿ ಹತ್ತಿರ ಕಾಣಿಸಿದ ಹೆಂಡತಿ (3)
6.ಆರ್ಭಟದಲ್ಲೇ ಈ ಕ್ರೀಡೆ ಇದೆ! (2)
7.ವನದಲ್ಲಿ ತಿರುಗಿರುವಾಗ ಹೊಸದು ಕಂಡಿತೇ? (2)
11.ಹುಡುಕಿಸಿದಾಗ ತಿಳಿದ ಅಸತ್ಯ! (2)
13.ಭೂಲೋಕದ ಅಮೃತ (2)
14.ಈತ ಎಲ್ಲರಿಗಿಂತ ದೊಡ್ಡವನು (3)
15.ಕೈ ಮುಂದಿರುವ ಇಂದ್ರಿಯ! (3)
16.ದಿಣ್ಣೆ ಇಲ್ಲಿಯೇ ಕಾಣುತ್ತಿದೆ (3)

**ಮೇಲಿಂದ ಕೆಳಕ್ಕೆ**
1.ಯಾವುದೇ ಕಳಂಕ ಇಲ್ಲದ್ದು (4)
2.ಹೊಂದಾಣಿಕೆಗೊಂದು ಪರ್ಯಾಯ ಪದ (4)
3.ದಿಟ್ಟತನದಿಂದ ನುಡಿದಿರುವ ಸತ್ಯ (2)
5.ಇಪ್ಪತ್ನಾಲ್ಕು ಗಂಟೆಗಳ ಕಾಲ (2)
6.ಉದ್ದವಾದ ತೋಳು (5)
8.ವರನಲ್ಲಿಯೇ ಬಣ್ಣಗುಂದುವಿಕೆ! (5)
9.ತನ್ನದೆಂಬ ಭಾವನೆ (4)
10.ಕೊಬ್ಬಿದ ಆನೆಯಿದು (4)
12.ಕಹಿಯಲ್ಲ, ಮಧುರ ರುಚಿ (2)
13.ದಾಕ್ಷಿಣ್ಯ ಪಟ್ಟು ಸೊರಗಿದುದು (2)



### 4545ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಅಲೆಮಾರಿ 3.ಆಘ್ರಾಣಿಸು 5.ನಿಜ 7.ತಿರುಕ 8.ಹಂತ 9.ಜಾಲ 10.ಅಸುರ 12.ಕರ 14.ನರಾಕೃತಿ 15.ಪರಸ್ಪರ

**ಮೇಲಿಂದ ಕೆಳಕ್ಕೆ:** 1.ಅವಧಾನಿ 2.ರಿಯಾಯಿತಿ 3.ಆಮುಷ್ಮಿಕ 4.ಸುರಕ್ಷಿತ 6.ಜಟಿಲ 8.ಹಂತಕ 9.ಜಾಣತನ 10.ಅನುಮತಿ 11.ರಜನಿಪ 13.ರತ್ನಾಕರ

## ಸುಡೊಕು 4932

| | | | | | | | | |
|---|---|---|---|---|---|---|---|---|
| 6 | | 4 | 9 | | 7 | | | 8 |
| | | | | | 6 | | | |
| | 7 | 8 | 2 | | | 4 | | 6 |
| 7 | | | | | 8 | | 6 | |
| | 8 | | 4 | | | 7 | | 5 |
| | | 5 | | 7 | | | | |
| 4 | 9 | | 3 | 8 | | 6 | | 1 |
| | 6 | | | | | 5 | | |
| 8 | | 7 | 1 | | 4 | | | 3 |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 4931 ಸುಡೊಕು

| | | | | | | | | |
|---|---|---|---|---|---|---|---|---|
| 9 | 1 | 7 | 3 | 5 | 8 | 6 | 2 | 4 |
| 8 | 4 | 6 | 9 | 2 | 7 | 5 | 1 | 3 |
| 2 | 5 | 3 | 4 | 1 | 6 | 9 | 7 | 8 |
| 5 | 3 | 8 | 1 | 6 | 2 | 7 | 4 | 9 |
| 4 | 2 | 9 | 7 | 3 | 5 | 1 | 8 | 6 |
| 6 | 7 | 1 | 8 | 4 | 9 | 2 | 3 | 5 |
| 3 | 8 | 5 | 6 | 7 | 1 | 4 | 9 | 2 |
| 7 | 9 | 2 | 5 | 8 | 4 | 3 | 6 | 1 |
| 1 | 6 | 4 | 2 | 9 | 3 | 8 | 5 | 7 |

## ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 14,737 |
| ಇಂದಿನ ಅಂತ್ಯ | 14,815 |
| ▲ | 78 |
| ದಿನದ ಗರಿಷ್ಠ | 14,878 |

### ವಿನಿಮಯ ದರ

| | |
|---|---|
| $ ಡಾಲರ್ | 72.43 |
| £ ಪೌಂಡ್ | 99.78 |
| € ಯುರೊ | 86.15 |
| ¥ ಯೆನ್ (100ಕ್ಕೆ) | 67 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹385 |
| 12 ಮೊಟ್ಟೆಗೆ | ₹52 |
| ಮೈಸೂರು | |
| 100 ಮೊಟ್ಟೆಗೆ | ₹388 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1555 (1550) |
| ಸೋಯಾ (ರಿಫೈನ್ಡ್) | ₹1285 (1240) |
| ಸೂರ್ಯಕಾಂತಿ (ರಿಫೈನ್ಡ್) | ₹1700 (1730) |
| ಪಾಮೋಲಿನ್ | ₹1237(1228) |

### ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹24000-30000
2ನೇ ದರ್ಜೆ ₹16000-25000

### ಕೊಬ್ಬರಿ ಧಾರಣೆ

| | |
|---|---|
| ಬೆಂಗಳೂರು | ₹15500-19000 |
| ಮಂಗಳೂರು | ₹8000-11500 |
| ಪುತ್ತೂರು | ₹5000-14000 |

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅವಧಿ ವಿಸ್ತರಣೆ: ಆರ್‌ಬಿಐ, ಕೇಂದ್ರ ಸರ್ಕಾರದ ತೀರ್ಮಾನದಲ್ಲಿ ಮಧ್ಯಪ್ರವೇಶಕ್ಕೆ ‘ಸುಪ್ರೀಂ’ ನಕಾರ

# ಸಾಲದ ಕಂತು ವಿನಾಯಿತಿ ಅವಧಿಗೆ ಚಕ್ರಬಡ್ಡಿ ಇಲ್ಲ

ನವದೆಹಲಿ (ಪಿಟಿಐ): ಸಾಲದ ಕಂತುಗಳ ಮರುಪಾವತಿಗೆ ನೀಡಿದ್ದ ಆರು ತಿಂಗಳ ವಿನಾಯಿತಿ ಅವಧಿಗೆ ಸಾಲಗಾರರಿಗೆ ಚಕ್ರಬಡ್ಡಿ ಅಥವಾ ಬಡ್ಡಿಗೆ ದಂಡ ವಿಧಿಸುವಂತಿಲ್ಲ, ಚಕ್ರಬಡ್ಡಿ ಅಥವಾ ಬಡ್ಡಿಗೆ ದಂಡವನ್ನು ಆ ಅವಧಿಗೆ ಈಗಾಗಲೇ ವಸೂಲು ಮಾಡಿದ್ದರೆ, ಅದನ್ನು ಮರುಪಾವತಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವಿನಾಯಿತಿ ಅವಧಿಯು 2020ರ ಆಗಸ್ಟ್ 31ರ ನಂತರ ವಿಸ್ತರಣೆ ಇಲ್ಲ ಎಂದು ಕೇಂದ್ರ ಸರ್ಕಾರ ಹಾಗೂ

ಭಾರತೀಯ ರಿಸರ್ವ್ ಬ್ಯಾಂಕ್ ಕೈಗೊಂಡ ತೀರ್ಮಾನದಲ್ಲಿ ತಾನು ಮಧ್ಯಪ್ರವೇಶ ಮಾಡುವುದಿಲ್ಲ ಎಂದು ಕೋರ್ಟ್ ಹೇಳಿದೆ.

‘ಕೇಂದ್ರವು ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ಕೈಗೊಳ್ಳುವ ನೀತಿ ನಿರ್ಣಯಗಳು ದುರುದ್ದೇಶ ಹೊಂದಿಲ್ಲದಿದ್ದರೆ, ಮನಸೋಇಚ್ಛೆ ತೀರ್ಮಾನ ಅಲ್ಲದಿದ್ದರೆ ಅಂಥವುಗಳನ್ನು ನ್ಯಾಯಾಂಗವು ಪರಾಮರ್ಶಿಸಲು ಆಗದು’ ಎಂದು ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ನ್ಯಾಯಪೀಠ ಹೇಳಿದೆ.

ಸಾಲದ ಕಂತು ಮರುಪಾವತಿಗೆ ನೀಡಿದ್ದ ವಿನಾಯಿತಿ ಅವಧಿಯನ್ನು ವಿಸ್ತರಿಸಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಹಲವು ಅರ್ಜಿಗಳಿಗೆ ಸಂಬಂಧಿಸಿದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ. ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಲು ಆಗದು ಎಂದು ಹೇಳಿದೆ.

## ಬ್ಯಾಂಕ್ ಷೇರು ಗಳಿಕೆ; ಸೆನ್ಸೆಕ್ಸ್ ಏರಿಕೆ

ಮುಂಬೈ (ಪಿಟಿಐ): ವಿನಾಯಿತಿ ಅವಧಿಗೆ ಸಾಲಗಾರರಿಗೆ ಚಕ್ರಬಡ್ಡಿ ಅಥವಾ ಬಡ್ಡಿಗೆ ದಂಡ ವಿಧಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಮಂಗಳವಾರ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟಿಗೆ ಕಾರಣವಾಯಿತು.

ಬ್ಯಾಂಕಿಂಗ್ ವಲಯದ ಷೇರುಗಳು ಗಳಿಕೆ ಕಂಡಿದ್ದರಿಂದ ಷೇರುಪೇಟೆ ಸೂಚ್ಯಂಕಗಳೂ ಏರಿಕೆ ಕಂಡವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 280 ಅಂಶ ಹೆಚ್ಚಾಗಿ 50,051 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 78 ಅಂಶ ಹೆಚ್ಚಾಗಿ 14,815 ಅಂಶಗಳಿಗೆ ತಲುಪಿತು. ಜಾಗತಿಕ ಷೇರುಪೇಟೆಗಳ ವಹಿವಾಟು ಇಳಿಮುಖವಾಗಿದ್ದರೂ, ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಬ್ಯಾಂಕಿಂಗ್ ಷೇರುಗಳು ಉತ್ತಮ ಗಳಿಕೆ ಕಂಡಿದ್ದರಿಂದ ದೇಶಿ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

22nd DEATH ANNIVERSARY

GOPAMMA N
(W/o N.M. Viswanath)
(DOD: 24-3-1999)
Propritex Sri Gopi Metal Industries
ESTD. 1962 Office- #125, S.P.Road. Bengaluru
Remembering you always. N.M.Viswanath & Family.
Industrialist & Exporters
Sri Viswanatha Silver Mfg. & Electroplating Works. Srikanteshwara Nilaya .
# 2, 26th Cross. Kilari Road, Bangalore-53
Ph: 22268532, 22386001. Mobile: 9243102358

1st Death Anniversary



DOB:09.06.1939 DOD: 24.03.2020
D N RAJU B.E.(Elec.)
Superintending Engineer (Rtd.) - KEB
"You will always be remembered in our Thoughts & Hearts"
Fondly Remembered by:
Smt. Yashodha R,
Sons, Daughter-in-law,
Grandchildren, Family & Friends.
Sector3, HSR Layout,
Bengaluru - 560102

ಉತ್ತರ ಕ್ರಿಯಾದಿ ಮತ್ತು ವೈಕುಂಠ ಸಮಾರಾಧನಾ ಆಹ್ವಾನ ಪತ್ರಿಕೆ
ಶ್ರೀಮತಿ ಅನುಸೂಯ ಹೆಚ್. ಸಂಜೀವಯ್ಯ ಕುಟುಂಬದವರು
ಶ್ರೀ ಲಕ್ಷ್ಮೀನಿವಾಸ ನಂ. 67, 40 ಅಡಿ, ಕೆ.ಟಿ.ಜಿ. ಕಾಲೇಜು ರಸ್ತೆ, ಶ್ರೀಗಂಧನಗರ, ಹೆಗ್ಗನಹಳ್ಳಿ ಕ್ರಾಸ್, ಸುಂಕದಕಟ್ಟೆ, ಬೆಂಗಳೂರು-560 091 ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ 16-03-2021 ನೇ ಮಂಗಳವಾರ ನನ್ನ ಪೂಜ್ಯ ಪತಿಯವರಾದ
ಶ್ರೀ ಹೆಚ್. ಸಂಜೀವಯ್ಯರವರು
ನಿವೃತ್ತ ಪೊಲೀಸ್ ಅಧಿಕಾರಿ
(ಲೇ. ಶ್ರೀ ಹೆಚ್. ಎಸ್. ಹನುಮಯ್ಯ ಮತ್ತು ಲೇ. ಶ್ರೀಮತಿ ವೆಂಕಟರಂಗಮ್ಮರವರ ಜ್ಯೇಷ್ಠ ಪುತ್ರ)
ಹೊಸಪೇಟೆ, ಮಾಗಡಿ ತಾ. ರಾಮನಗರ ಜಿಲ್ಲೆ
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ 26-03-2021 ರಂದು ಶುಕ್ರವಾರ ಬೆಳಿಗ್ಗೆ 10:00 ಘಂಟೆಗೆ ಮೇಲ್ಕಂಡ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು: ಪತ್ನಿ, ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಭೋಜನ: 1:00 ಘಂಟೆಗೆ
ಮೊ. 9880223212, 9886212366, 9731272555

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

7ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ.ಪ್ರಭಾಕರ ರೆಡ್ಡಿ
(ಮಾಜಿ ಶಾಸಕರು ಹಾಗೂ ಕನ್ನಡ ಚಳುವಳಿ ಹೋರಾಟಗಾರರು)
ಹೃದಯಪೂರ್ವಕ ಸ್ಮರಣೆಯೊಂದಿಗೆ
ಶ್ರೀ ಕೆ.ಪ್ರಭಾಕರ ರೆಡ್ಡಿ
ಇಂತಿ :
ಶ್ರೀಮತಿ ಸವಿತ್ರ ಪ್ರಭಾಕರ ರೆಡ್ಡಿ, ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು ಹಾಗೂ ಬಂಧು-ಮಿತ್ರರು.

## ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

**ನಾಗಮೋಹನ್,** ರಾಜಾಜಿನಗರ, ಬೆಂಗಳೂರು

- **ಪ್ರಶ್ನೆ: ನಾನು ನಿವೃತ್ತ ಸರ್ಕಾರಿ ನೌಕರ. ನಾನು ಮತ್ತು ಮಕ್ಕಳು ಠೇವಣಿ ಹಾಗೂ ಪಿಪಿಎಫ್ ಖಾತೆಯನ್ನು ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹೊಂದಿದ್ದೇವೆ. ಸುಮಾರು ₹ 35 ಲಕ್ಷ ಠೇವಣಿ ಇದೆ. ಈ ಬ್ಯಾಂಕು ಖಾಸಗೀಕರಣವಾದಲ್ಲಿ ನಮ್ಮ ಹಣಕ್ಕೆ ಭದ್ರತೆ ಇಲ್ಲವಾದ್ದರಿಂದ ಠೇವಣಿ ಹಾಗೂ ಪಿಪಿಎಫ್‌ಅನ್ನು ಅವಧಿಗೆ ಮುನ್ನ ಪಡೆದು ಬೇರೊಂದು ಸರ್ಕಾರಿ ಬ್ಯಾಂಕ್‌ನಲ್ಲಿ ಇಡಲು ನಿಮ್ಮ ಅಭಿಪ್ರಾಯ ತಿಳಿಸಿ.**

ಉತ್ತರ: ಸರ್ಕಾರಿ ಸ್ವಾಮ್ಯದ ಬ್ಯಾಂಕು ಖಾಸಗೀಕರಣವಾದಲ್ಲಿ ಠೇವಣಿದಾರನಿಗೆ ಭದ್ರತೆ ದೊರಕದು ಎನ್ನುವ ವಿಚಾರ ಸತ್ಯಕ್ಕೆ ದೂರ. ಬಹಳಷ್ಟು ಜನರು ನನಗೆ ಕರೆ ಮಾಡಿ ವಿಚಾರಿಸಿದ್ದಾರೆ. ಈ ವಿಚಾರದಲ್ಲಿ ಗ್ರಾಹಕರು ಭಯಪಡುವ ಅಗತ್ಯವಿಲ್ಲ.

ಎಕ್ಸಿಸ್ ಬ್ಯಾಂಕ್, ಐಸಿಐಸಿಐ, ಕೋಟಕ್ ಮಹೀಂದ್ರ ಹಾಗೂ ನಮ್ಮ ರಾಜ್ಯದ ಕರ್ಣಾಟಕ ಬ್ಯಾಂಕ್ ಇವೆಲ್ಲವೂ ಖಾಸಗಿ ಬ್ಯಾಂಕ್‌ಗಳು. ಇವು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಜೊತೆ ಪೈಪೋಟಿ ನಡೆಸಿ, ಉತ್ತಮ ಫಲಿತಾಂಶ ಹಾಗೂ ಡಿವಿಡೆಂಡ್ ಕೊಡುತ್ತಿರುವುದನ್ನು ನೋಡುತ್ತಿದ್ದೇವೆ. ಈ ಬ್ಯಾಂಕ್‌ಗಳ ಷೇರುಗಳು ಷೇರು ಮಾರುಕಟ್ಟೆಯಲ್ಲಿ ಹೆಚ್ಚಿನ ಮೌಲ್ಯ ಹೊಂದಿವೆ. ಮುಖ್ಯವಾಗಿ ಖಾಸಗಿ ಬ್ಯಾಂಕ್‌ಗಳಲ್ಲಿ ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶ ಇಲ್ಲದ ಕಾರಣ ಇಲ್ಲಿಯ ಅನುತ್ಪಾದಕ ಆಸ್ತಿ (ಎನ್‌ಪಿಎ) ಕೂಡಾ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗಿಂತಲೂ ಕಡಿಮೆ ಇರುತ್ತದೆ. ಅವಧಿಗೆ ಮುನ್ನ ಠೇವಣಿ ಹಿಂಪಡೆದು ನಷ್ಟ ಅನುಭವಿಸಿ ಬ್ಯಾಂಕ್ ಆಫ್ ಇಂಡಿಯಾದಿಂದ ಹೊರಬರುವ ಅವಶ್ಯಕತೆ ಇಲ್ಲ. ಪಿಪಿಎಫ್, ಸುಕನ್ಯಾ ಸಮೃದ್ಧಿ, ಹಿರಿಯನಾಗರಿಕ ಠೇವಣಿಗಳನ್ನು ಜನರ ಅನುಕೂಲಕ್ಕಾಗಿ ಬ್ಯಾಂಕ್‌ಗಳಲ್ಲಿ ಪ್ರಾರಂಭಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈ ಠೇವಣಿಗೂ ಬ್ಯಾಂಕ್‌ಗಳಿಗೂ ಸಂಬಂಧವಿಲ್ಲ. ಈ ಹಣವನ್ನು ಬ್ಯಾಂಕ್ ಮುಟ್ಟುವಂತಿಲ್ಲ. ಈ ಹಣ ಕೇಂದ್ರ ಸರ್ಕಾರಕ್ಕೆ ಸೇರಿದ್ದಾಗಿದೆ.

**ಹೆಸರು,** ಊರು ಬೇಡ

- **ಪ್ರಶ್ನೆ: ನಾನು ನಿವೃತ್ತ ನೌಕರ. ವಯಸ್ಸು 85 ವರ್ಷ. ನನ್ನ ವಾರ್ಷಿಕ ಪಿಂಚಣಿ ₹ 3,09,168. ಸ್ಥಳೀಯ ಕರ್ಣಾಟಕ ಬ್ಯಾಂಕ್‌ನಲ್ಲಿ ₹ 2.26 ಲಕ್ಷ, ಎಸ್‌ಬಿಐನಲ್ಲಿ ₹ 1.91 ಲಕ್ಷ, ಅಂಚೆ ಕಚೇರಿ ಹಿರಿಯ ನಾಗರಿಕರ ಠೇವಣಿಯಲ್ಲಿ ₹ 4.50 ಲಕ್ಷ ಉಳಿತಾಯ ಮಾಡಿದ್ದೇನೆ. ಅಂಚೆ ಕಚೇರಿಯಲ್ಲಿ ₹ 1,000ಕ್ಕೆ ಆರ್.ಡಿ. ಇದೆ. ನನಗೆ ತುಮಕೂರಿನಲ್ಲಿ ಸ್ವಂತ ಮನೆ ಇದೆ. ಉಳಿತಾಯದ ವಿಚಾರದಲ್ಲಿ ಹಾಗೂ ತೆರಿಗೆ ಬಗ್ಗೆ ವಿಸ್ತಾರವಾಗಿ ತಿಳಿಸಿ.**

ಉತ್ತರ: ನಿಮ್ಮ ಉಳಿತಾಯ ಚೆನ್ನಾಗಿದೆ. ನಿಮ್ಮ ಠೇವಣಿಗೆ ನಾಮನಿರ್ದೇಶನ ಮಾಡಿರಬಹುದು ಎಂದು ಭಾವಿಸುತ್ತೇನೆ. ನೀವು ಸರ್ಕಾರದ ನಿವೃತ್ತ ನೌಕರರಾದ್ದರಿಂದ ನಿಮಗೆ ಸೆಕ್ಷನ್ 16 (ಎ) ಆಧಾರದ ಮೇಲೆ ಸ್ಟ್ಯಾಂಡರ್ಡ್ ಡಿಡಕ್ಷನ್ ₹ 50 ಸಾವಿರ, ಹಿರಿಯ ನಾಗರಿಕರಾದ್ದರಿಂದ ಬ್ಯಾಂಕ್ ಬಡ್ಡಿಯಲ್ಲಿ ಸೆಕ್ಷನ್ 80ಟಿಟಿಬಿಯಲ್ಲಿ ₹ 50 ಸಾವಿರ ವಿನಾಯಿತಿ ಇದೆ. ಇವೆರಡನ್ನೂ ನಿಮ್ಮ ಒಟ್ಟು ಆದಾಯದಿಂದ ಕಳೆದು ತೆರಿಗೆ ಕೊಡಬಹುದು. ಹೀಗೆ ಮಾಡಿದಾಗ ನಿಮ್ಮ ವಾರ್ಷಿಕ ಪಿಂಚಣಿ ಆದಾಯ ಹಾಗೂ ಠೇವಣಿ ಬಡ್ಡಿ ಸೇರಿಸಿ ಒಟ್ಟು ಆದಾಯ ₹ 5 ಲಕ್ಷ ದಾಟದಿರುವುದರಿಂದ ನಿಮಗೆ ಆದಾಯ ತೆರಿಗೆ ಬರುವುದಿಲ್ಲ ಹಾಗೂ ನೀವು ಅತೀ ಹಿರಿಯ ನಾಗರಿಕರಾದ್ದರಿಂದ ಐ.ಟಿ. ರಿಟರ್ನ್ಸ್ ಸಲ್ಲಿಸುವ ಅಗತ್ಯ ಇಲ್ಲ. ನಿಮ್ಮ ತುಮಕೂರು ಮನೆ ವಿಚಾರದಲ್ಲಿ ನೀವು ಉಯಿಲು ಪತ್ರ (Will) ಬರೆಯಿರಿ. ನೀವು ಇನ್ನು ಪತ್ರ ಬರೆಯುವುದು ಬೇಡ. ಏನೇ ಬೇಕಾದರೂ ದೂರವಾಣಿ ಮುಖಾಂತರ ನನ್ನನ್ನು ಸಂಪರ್ಕಿಸಿ.

**ಹೆಸರು ಬೇಡ,** ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ

- **ಪ್ರಶ್ನೆ: ನಾನು ಒಂದು ಆಸ್ತಿಯನ್ನು 1990ರಲ್ಲಿ ₹ 15 ಸಾವಿರಕ್ಕೆ ಕೊಂಡಿದ್ದೇನೆ. ಅದನ್ನು ಈಗ ಮಾರಾಟ ಮಾಡಿದರೆ ₹ 3 ಕೋಟಿ ಬರುತ್ತದೆ. ಇನ್ನೊಂದು ಆಸ್ತಿ ಈ ಹಣದಿಂದ ಕೊಂಡಾಗ ತೆರಿಗೆ ಬರುವುದಿಲ್ಲ ಎಂಬುದಾಗಿ ತಿಳಿಸಿದ್ದೀರಿ. ನಾನು ನನ್ನ ತಂಗಿಗೆ ಈ ಹಣದಿಂದ ಮನೆ ಕಟ್ಟಿಸಿಕೊಡಲು ಸಾಧ್ಯವಿದೆಯೇ, ಅಥವಾ ಬೇರಾವ ದಾರಿ ಇದೆ? ಹೀಗೆ ನಾನು ಕೊಟ್ಟರೆ ಅವರಿಗೆ ತೆರಿಗೆ ಬರಬಹುದೇ ತಿಳಿಸಿ.**

ಉತ್ತರ: ಒಂದು ಆಸ್ತಿ ಮಾರಾಟ ಮಾಡಿ ಬಂದ ಸಂಪೂರ್ಣ ಹಣದಿಂದ ಮೊತ್ತೊಂದು ನಿವೇಶನ- ಮನೆ ಮಾಡಬಹುದು. ಹೀಗೆ ಮಾಡುವಾಗ ಅದೇ ವ್ಯಕ್ತಿಯ ಹೆಸರಿನಲ್ಲಿ ಮಾಡಬೇಕಾಗುತ್ತದೆ. ನೀವು ಆಸ್ತಿ ಮಾರಾಟ ಮಾಡಿ, ನಿಮ್ಮ ಹೆಸರಿನಲ್ಲಿಯೇ ನಿವೇಶನ-ಮನೆ ಮಾಡಿ. ಮುಂದೆ ಬೇಕಾದರೆ ತಂಗಿಯ ಹೆಸರಿನಲ್ಲಿ ದಾನ ಪತ್ರ (Gift Deed) ಮಾಡಿಕೊಡಿ. ರಕ್ತ ಸಂಬಂಧಿಗಳಲ್ಲಿ ದಾನಪತ್ರ ಮಾಡುವಾಗ ದಾನ ಕೊಡುವ ಅಥವಾ ದಾನ ಪಡೆಯುವ ವ್ಯಕ್ತಿಗಳಿಗೆ ಯಾವುದೇ ತರಹದ ತೆರಿಗೆ ಬರುವುದಿಲ್ಲ.

ಇದೇ ವೇಳೆ ದಾನಪತ್ರ ಮುಖಾಂತರ ಪಡೆದ ಆಸ್ತಿಯನ್ನು ನಿಮ್ಮ ತಂಗಿಯು ಮುಂದೆ ಮಾರಾಟ ಮಾಡುವಾಗ ಬಂಡವಾಳ ವೃದ್ಧಿ ತೆರಿಗೆ ಕೊಡಬೇಕಾಗುತ್ತದೆ. ಆಸ್ತಿ ಅನುಭವಿಸುವಾಗ ತೆರಿಗೆ ಬರುವುದಿಲ್ಲ.

**ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ**
**ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in**

## ಜಾಗ್ವಾರ್ ಐ-ಪೇಸ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗ್ವಾರ್ ಲ್ಯಾಂಡ್ ರೋವರ್ ಇಂಡಿಯಾ ಕಂಪನಿಯು ಸಂಪೂರ್ಣ ವಿದ್ಯುತ್ ಚಾಲಿತ ‘ಜಾಗ್ವಾರ್ ಐ-ಪೇಸ್’ ವಾಹನವನ್ನು ಭಾರತದ ಮಾರುಕಟ್ಟೆಗೆ ಬಿಡುಗಡೆ ಮಾಡಿರುವುದಾಗಿ ಮಂಗಳವಾರ ಘೋಷಿಸಿದೆ.

ಐ-ಪೇಸ್ ಆರಂಭಿಕ ಬೆಲೆ ₹ 105.9 ಲಕ್ಷ (ಎಕ್ಸ್‌ಷೋರೂಂ) ಇದ್ದು, ಐದು ವರ್ಷಗಳ ಸೇವಾ ಪ್ಯಾಕೇಜ್, ಐದು ವರ್ಷಗಳ ರಸ್ತೆ ಬದಿ ನೆರವಿನ ಪ್ಯಾಕೇಜ್, 7.4 ಕಿಲೊವಾಟ್ ಎಸಿ ವಾಲ್ ಮೌಂಟೆಡ್ ಚಾರ್ಜರ್ ಮತ್ತು 8 ವರ್ಷಗಳ ಅಥವಾ 1.60 ಲಕ್ಷ ಕಿಲೊಮೀಟರ್ ಬ್ಯಾಟರಿ ವಾರಂಟಿಯನ್ನೂ ಒಳಗೊಂಡಿದೆ.

90 ಕಿಲೊವಾಟ್ ಲೀಥಿಯಂ ಐಯಾನ್ ಬ್ಯಾಟರಿಯನ್ನು ಹೊಂದಿದ್ದು, 294 ಕಿಲೊವಾಟ್ ಪವರ್ ಮತ್ತು 696 ಎನ್‌ಎಂ ಟಾರ್ಕ್ ಶಕ್ತಿ ನೀಡಬಲ್ಲದು.

‘ಭಾರತದಲ್ಲಿ ಬಿಡುಗಡೆ ಮಾಡಿರುವ ಸಂಪೂರ್ಣ ವಿದ್ಯುತ್ ಚಾಲಿತ ಮೊದಲ ಎಸ್‌ಯುವಿ ಇದಾಗಿದೆ. ಆಧುನಿಕ ತಂತ್ರಜ್ಞಾನ ಮತ್ತು ವಿನ್ಯಾಸ ಇರುವ ವಾಹನ ಖರೀದಿಸಲು ಇಚ್ಛಿಸುವ ಜನರಿಗೆ ಐ-ಪೇಸ್ ಸೂಕ್ತವಾಗಿದೆ’ ಎಂದು ಕಂಪನಿಯ ಅಧ್ಯಕ್ಷ ರೋಹಿತ್ ಸೂರಿ ಅವರು ವರ್ಚುವಲ್ ಕಾರ್ಯಕ್ರಮದಲ್ಲಿ ತಿಳಿಸಿದರು.

### ಮುಂಬೈ ಧಾರಣೆ

**ಶೇಂಗಾ**

23-3-2021

| | |
|---|---|
| ಜಾವಾ 70/80(ಹೊಸ) | 10900-10950 |
| ಜಾವಾ 80/90(ಹೊಸ) | 10400-10450 |
| ದಪ್ಪ ಮಧ್ಯಪ್ರದೇಶ(ಹೊಸ) | 9700-9800 |
| ದಪ್ಪ ಗುಜರಾತ್(ಹೊಸ) | 9000-9100 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1565 (1565) |
| ಒಂದು ವಾರದ ಡೆಲಿವರಿ | 1560 (1560) |
| ಸೋಯಾ ಕಚ್ಚಾ | 1270 (1240) |
| ಪಾಮ್ ವಾರದ ಡೆಲಿವರಿ | 1235 (1226) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1700 (1680) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ
44,700 (44,700)
ಬೆಳ್ಳಿ ಕೆ.ಜಿ 65,550 (65,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಚಿನ್ನ ₹ 116 ಹೆಚ್ಚಳ, ಬೆಳ್ಳಿ ₹ 117 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ದರ ಏರಿಕೆ, ಬೆಳ್ಳಿ ದರ ಇಳಿಕೆ ಕಂಡಿವೆ.

10 ಗ್ರಾಂ ಚಿನ್ನದ ದರ ₹ 116ರಷ್ಟು ಹೆಚ್ಚಾಗಿ ₹ 44,374ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 117ರಷ್ಟು ಇಳಿಕೆಯಾಗಿ ₹ 65,299ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಚಿನ್ನದ ದರದಲ್ಲಿ ಏರಿಕೆ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 900-950 |
| ನಡುಗೋಲು | 1000-1050 |
| ರಾಶಿ | 1200-1300 |
| ರಾಶಿ ಉತ್ತಮ | 1300-1400 |
| ಜರಡಿ | 1500-1550 |
| ಹೆರಕಿದ್ದು | 1900-2000 |
| ಹಸಿರು ಸಾಧಾರಣ | 1300-1400 |
| ಹಸಿರು ಉತ್ತಮ | 1700-1750 |
| ಹಸಿರು ಅತಿ ಉತ್ತಮ | 1900-2000 |
| ಕಾಳು ಮೆಣಸು | 350 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-40500 |
| ಹಳತು | 42500-50500 |
| **ಕಾರ್ಕಳ** | |
| ಹೊಸತು | 35000-40000 |
| ಹಳತು | 45000-50000 |
| **ಪುತ್ತೂರು** | |
| ಕೋಕ | 9500-24000 |
| ಹೊಸತು | 28500-40500 |
| **ಸಿದ್ದಾಪುರ** | |
| ಬಿಳಿಗೋಟು | 21199-29899 |
| ಚಾಲಿ | 34639-36699 |
| ಕೋಕ | 18099-29789 |
| ಕೆಂಪುಗೋಟು | 26089-29609 |
| ರಾಶಿ | 39889-41599 |
| ತಟ್ಟಿಬೆಟ್ಟೆ | 28011-35899 |
| **ಯಲ್ಲಾಪುರ** | |
| ಬಿಳಿಗೋಟು | 23612-31069 |
| ಚಾಲಿ | 31899-38919 |
| ಕೋಕ | 19309-28899 |
| ಕೆಂಪುಗೋಟು | 27699-33611 |
| ರಾಶಿ | 39990-44199 |
| ತಟ್ಟಿಬೆಟ್ಟೆ | 32899-39699 |
| **ಶಿವಮೊಗ್ಗ ಎಪಿಎಂಸಿ** | |
| ಬೆಟ್ಟೆ | 41300-43147 |
| ಗೊರಬಲು | 14060-31819 |
| ರಾಶಿ | 37269-42509 |
| ಸರಕು | 46000-72640 |
| **ಸಾಗರ** | |
| ಬಿಳಿಗೋಟು | 14899-25899 |
| ಚಾಲಿ | 32299-33333 |
| ಕೋಕ | 29499-31109 |
| ಕೆಂಪುಗೋಟು | 29199-29699 |
| ರಾಶಿ | 40309-41899 |
| ಸಿಪ್ಪೆಗೋಟು | 15600-17830 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ (ಸಿ.ಬಿ) | 231-378 |
| ದ್ವಿತಳಿ (ಬಿ.ವಿ) | 251-432 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 10050 | 9900 | 9850 | 130.10 ಸೆಂಟ್ಸ್ |
| ಎಸಿ | 4090 | 3850 | 3850 | |
| ಆರ್‌ಪಿ | 5200 | 5150 | 5150 | |
| ಆರ್‌ಸಿ | 3000 | 3050 | 2940 | 1398 ಡಾಲರ್ಸ್ |

ನಗರಸಭಾ ಕಾರ್ಯಾಲಯ ಹೊಸಪೇಟೆ
ಕ್ರಸಂ/ನಸಹೊ/ತಾಂತ್ರಿಕ/ನೀಸ/ನಗರಸಭೆ ನಿಧಿ/2020-21 ದಿನಾಂಕ:10-03-2021
ಟೆಂಡರ್ ಪ್ರಕಟಣೆ
(ಇ-ಪ್ರೋಕ್ಯೂರಮೆಂಟ್ ಮುಖಾಂತರ)
2020-21ನೇ ಸಾಲಿನ ನಗರಸಭೆ ನಿಧಿ ಅನುದಾನದಡಿಯಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.govt.in ವೆಬ್‌ಸೈಟ್ ಮೂಲಕ ಪಡೆದುಕೊಂಡು, ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.
(1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 25-03-2021 ಸಂಜೆ 4.00 ಗಂಟೆ ವರೆಗೆ (2)ಟೆಂಡರ್‌ಗಳನ್ನು ತೆರೆಯುವ ದಿನಾಂಕ: 26-03-2021 ಸಂಜೆ 4.30 ಗಂಟೆಗೆ (3) ಟೆಂಡರ್‌ಗಳನ್ನು ತೆರೆಯುವ ಸ್ಥಳ: ನಗರಸಭೆ, ಹೊಸಪೇಟೆ ಕೆಲಸದ ವಿವರ ಮತ್ತು ಇಂಡೆಂಟ್ ನಂ.CMM/HPT/WS/LABOUR/2020-21-Call-2 ಟೆಂಡರಿಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ): 47.61 ಟೆಂಡರ್ ಪ್ರೋಸೆಸ್ಸಿಂಗ್ ಫೀ.: ಇ-ಪ್ರೋಕ್ಯೂರಮೆಂಟ್ ನಿಗಧಿಪಡಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂಧನೆಗಳಿಗೆ ನಗರಸಭೆ ಕಾರ್ಯಾಲಯ ಹೊಸಪೇಟೆ ಕಚೇರಿ ಕೆಲಸದಂದು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನಗರಸಭೆ, ಹೊಸಪೇಟೆ.
ಸಹಿ/- ಪೌರಾಯುಕ್ತರು ನಗರಸಭೆ, ಹೊಸಪೇಟೆ.

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ
ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ ಕಛೇರಿ
ವಾಣಿಜ್ಯ ತೆರಿಗೆ ಸಂಕೀರ್ಣ, 80 ಅಡಿ ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ತುಮಕೂರು-572103
ಕಛೇರಿ ದೂರವಾಣಿ: 0816-2291489 ಇ-ಮೇಲ್: acctenf.tum@ka.gov.in
ಸಂ.ವಾತೆಸಆ/ಜಾರಿ/ತು/ಜಿಸಿಆರ್-67/20-21 ದಿನಾಂಕ: 23.03.2021
ಅಡಿಕೆ ಮತ್ತು ಸರಕು ವಾಹನ ಹರಾಜು ಪ್ರಕಟಣೆ
ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರು ದಿನಾಂಕ: 08.09.2020 ರಂದು 25120 ಕೆ.ಜಿ. ಅಡಿಕೆಯನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017ರ ಕಲಂ 130ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸದರಿ ಸರಕನ್ನು ಮತ್ತು ಸರಕು ವಾಹನವನ್ನು “ಹೇಗೆ ಇದೆಯೋ ಹಾಗೆಯೇ” ಇರುವ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿ ದಿನಾಂಕ 17.03.2021ರಂದು ಹರಾಜು ಪ್ರಕಟಣೆ ನೀಡಲಾಗಿತ್ತು ಈ ಸಂಬಂಧ ಆಸಕ್ತಿಯುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ಡು ಲಕೋಟೆಯನ್ನು ಸಲ್ಲಿಸಲು ದಿನಾಂಕ 23.03.2021 ರವರೆಗೆ ಸಂಜೆ 5.00 ಗಂಟೆಯವರೆಗೆ ಅವಧಿಯನ್ನು ನಿಗದಿಪಡಿಸಲಾಗಿತ್ತು, ಹಾಗೂ ಸೀಲ್ ಮಾಡಿದ ಬಿಡ್ ಕವರ್‌ಗಳನ್ನು ತೆರೆಯಲು ದಿನಾಂಕ: 24.03.2021ರ ಅವಧಿಯನ್ನು ನಿಗಧಿಪಡಿಸಲಾಗಿತ್ತು. ಪ್ರಸ್ತುತ ಬಿಡ್‌ದಾರರಿಗೆ ಸೀಲ್ ಮಾಡಿದ ಬಿಡ್ ಕವರ್‌ಗಳನ್ನು ಸಲ್ಲಿಸಲು ದಿನಾಂಕ 30.03.2021ರಂದು ಸಂಜೆ 5.00 ಗಂಟೆಯವರೆಗೆ ಅವಧಿಯನ್ನು ವಿಸ್ತರಿಸಿ ದಿನಾಂಕ 23.03.2021 ರಂದು ಆದೇಶ ಹೊರಡಿಸಲಾಗಿದೆ ಹಾಗೂ ಸೀಲ್ ಮಾಡಿದ ಬಿಡ್ ಕವರ್‌ಗಳನ್ನು ದಿನಾಂಕ 31.03.2021 ದಂದು 11.00 ಗಂಟೆಯ ನಂತರ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ರವರ ಕಛೇರಿಯಲ್ಲಿ ತೆರೆಯಲಾಗುವುದು, ಆಸಕ್ತಿಯುಳ್ಳ ಖರೀದಿದಾರರು / ಬಿಡ್‌ದಾರರು ಮುಚ್ಚಿದ ಲಕೋಟೆಯಲ್ಲಿ ಬಿಡ್‌ನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ನಿಯಮಗಳು ಮತ್ತು ಷರತ್ತುಗಳು ದಿನಾಂಕ 17.03.2021ರ ಪ್ರಕಟಣೆಯಲ್ಲಿರುವಂತೆ ಮುಂದುವರೆಯುತ್ತವೆ. ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣ http://ctax.kar.nic.in/publicauction.asp ರಲ್ಲಿ ಪ್ರಕಟಿಸಲಾಗಿದೆ.
ಸಹಿ/
ವಾಸಾಸಂಇ/ಉನಿಕ/ಬೆಂ.ನ/ಶಿರಡಿ ಸಾಯಿ/3215/2020-21 ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9886275111

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WANTED - Competent English,Science,Maths,Kannada Teachers/Volunteers(F/M) for a free residential, coeducational alternative school for opportunity deprived children aged between 6-17 years, run by Mysuru based NGO, inspired by Swami Vivekananda. Salary+Vegetarian food+Accomodation. Youtube Link:- https://youtu.be/fDRCGbPOIEw Email ID:- divyadeepa.trust@gmail.com WhatsApp:- 8088586087.

PERMANENT ಉದ್ಯೋಗದ ಹುಡುಕಾಟದಲ್ಲಿರುವ SSLC ಮೇಲ್ಪಟ್ಟ ಅಭ್ಯರ್ಥಿಗಳಿಗೆ Government Registered UCM ಕಂಪನಿಯಲ್ಲಿ ನೇರನೇಮಕಾತಿ ಉಚಿತ ವಸತಿಯೊಂದಿಗೆ 19000-30000/-. ಕೃತಿಕ: 8550858973, 7483145274

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಕಂಪನಿಗಳಿಗೆ ಬೇಕಾಗಿದ್ದಾರೆ. VIDEOCON, ಟಯೋಟ, TVS ಬ್ರಿಟಾನಿಯಾಗಳಿಗೆ SSLC, ITI ನವರು, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 9611715755

Marketing & Sales

ಬೇಕಾಗಿದ್ದಾರೆ ಹೆಸರಾಂತ ಮಾರ್ಕೆಟಿಂಗ್ ಕಂಪನಿಗೆ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್, ಟೆಲಿಕಾಲರ್ಸ್ ಮತ್ತು ಅಕೌಂಟೆಂಟ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ವೇತನ ರೂ. 12,000/- ರಿಂದ ಪ್ರಾರಂಭ ಕೂಡಲೇ ಸಂಪರ್ಕಿಸಿ: 95356 77634 76764 98707

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611625051, 9741133555

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME: ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಕೆಲಸ,ಗಳಿಸಿ 15000-22000/- ಕೊರಿಯರ್ ಸೌಲಭ್ಯವಿದೆ. 9108059956, 7338376317

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ. ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ . ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10, 000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು - 56. ಸಂಪರ್ಕಿಸಿ : 9606385001, 9606523337 .

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಕೆಲಸಕ್ಕೆ ಬೇಕಾಗಿದ್ದಾರೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ + OT 15,800-86,000 8884054160, 9739544856 .

ತಕ್ಷಣ ಬೇಕಾಗಿದ್ದಾರೆ VOLVO, TVS, TOYOTA, ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್‌ಗಳಿಗೆ ಯುವಕಯುವತಿಯರು ವಸತಿಯೂಟದೊಂದಿಗೆ 15,800/- 55000/-. 8951036487, 8951036488

ಫೀಲ್ಡ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಕೆಲಸ ಬೆಂಗಳೂರಿನಲ್ಲಿ. ಎಸ್.ಎಸ್.ಎಲ್.ಸಿ ಆದವರು ಊಟ ವಸತಿ ಸೌಲಭ್ಯವಿದೆ. 9513668615, 8073250084

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

ಭವಿಷ್ಯ

Astrology

★॥ಶ್ರೀಪ್ರಸಿದ್ಧ ರಕ್ತಕಾಂಡೇಶ್ವರಿಯ॥★ ಮಾಟಮಂತ್ರ, ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ ಹಣಕಾಸಿನ ತೊಂದರೆ ಕೊಳ್ಳೆಗಾಲದ ಮೋಡಿ ಪೂಜಾಶಕ್ತಿಯಿಂದ ಶಾಶ್ವತ ಪರಿಹಾರ. ಪಂಡಿತ್.ಕಾಶಿನಾಥಭಟ್ 8050018724

ವಶೀಕರಣ ಮಾಂತ್ರಿಕರು, ಪಂಚವಟಿರುದ್ರಾ ದೇವಿಯ ಪವಾಡ ಶಕ್ತಿಗಳಿಂದ ಸ್ತ್ರೀ, ಪುರುಷ ವಶೀಕರಣ, ಶತ್ರುನಾಶ, ಸಾಲಬಾಧೆ, ವ್ಯವಹಾರ, ದಾಂಪತ್ಯ, ಕೇವಲ 1 ಗಂಟೆಯಲ್ಲಿ ಪರಿಹಾರ. 9148244231

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★॥ಶ್ರೀಚಾಮುಂಡೇಶ್ವರಿದೇವಿ ಆರಾಧಕರು॥★ ಕೇರಳದ ಅಘೋರಿ ನಾಗಸಾಧು ಮೋಡಿಮಾಂತ್ರಿಕರು ಮಾಟಮಂತ್ರ, ಸ್ತ್ರೀ-ಪುರುಷ ವಶೀಕರಣ ಇನ್ನಾವುದೇ ಕಠಿಣಸಮಸ್ಯೆಗಳಿದ್ದರೂ ತಕ್ಷಣ ಪರಿಹಾರ.ಶ್ರೀರಾಘವೇಂದ್ರ ಆಚಾರ್ಯರು. 8050061378

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★॥(ಉಚಿತ ಭವಿಷ್ಯ)॥★ ದುರ್ಗಾಅಂಜನ ಜ್ಯೋತಿಷ್ಯಾಲಯ ಸಂತಾನಭಾಗ್ಯ, ದಾಂಪತ್ಯ,ಪ್ರೀತಿಯಲ್ಲಿ ಮೋಸ, (ಸ್ತ್ರೀ ಪುರುಷ ವಶೀಕರಣ) ಸಮಸ್ಯೆ ಏನೇಯಿರಲಿ ಕ್ಷಣಮಾತ್ರದಲ್ಲಿ ಪರಿಹಾರ. 8197357241

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನಿದ್ದರೂ 2ದಿನದಲ್ಲಿ ಪರಿಹಾರ.9886755306

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ ಪರಿಹಾರಕ್ಕೆ ಶ್ರೀಕಾಂತ್ ದಾಸ್. 8217472895

ಪ್ರವಾಸ

Travel

02.05.2021, 14.05.2021, 04.06.2021,04.07.2021 ರಿಂದ 14/20/27 ದಿನಗಳ ಕಾಶಿ,ಗಯಾ, ಪೂರಿಜಗನ್ನಾಥ್, ಪ್ರಯಾಗ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ವೈಷ್ಣೋದೇವಿ, ದೆಹಲಿ/14 ದಿನಗಳ ಮುಕ್ತಿನಾಥ್, ನೇಪಾಳ, ಪೊಖ್ರಾ,ಜನಕಪುರಿ, ನೈಮಿಶಾರಣ್ಯ, ಫೋರಕ್-ಪುರ್. 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

| PUBLICATION | TEXT AD RATE PER INS FOR 15 WORDS | CLASSIFIEDS DISPLAY RATE PER SQCM |
|---|---|---|
| DH ALL KARNATAKA+ PV BENGALURU | 1020/- | 480/- |
| PV ALL KARNATAKA | 900/- | 430/- |

*GST applicable

SPECIAL SCHEMES ALL CATEGORY

| | | | | | |
|---|---|---|---|---|---|
| PAY | 2 | And | GET | 1 | Free |
| PAY | 3 | And | GET | 2 | Free |
| PAY | 5 | And | GET | 5 | Free |

For More Details
Contact: 9880856233 | 9731810277
9901641752 | 9845114560 | 9886213331

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝುಣ ಝುಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

## ರಾಜ್ಯ ರಾಜಕಾರಣವೇ ಸಾಕು: ಸಿದ್ದರಾಮಯ್ಯ

ಬೆಂಗಳೂರು: 'ರಾಷ್ಟ್ರ ರಾಜಕಾರಣ ಪ್ರವೇಶಿಸುವ ಬಯಕೆ ಇಲ್ಲ. ನನ್ನ ರಾಜಕಾರಣ ಏನೇ ಇದ್ದರೂ ಕರ್ನಾಟಕಕ್ಕೆ ಸೀಮಿತ' ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಮಂಗಳವಾರ ಸುದ್ದಿಗಾರರ ಜತೆ ಅನೌಪಚಾರಿಕವಾಗಿ ಮಾತನಾಡಿದ ಅವರು, 'ಇಲ್ಲೇ ಉತ್ತಮ ರಾಜಕಾರಣ ಮಾಡಲು ಬಿಟ್ಟರೆ ಸಾಕು' ಎಂದು ತಿಳಿಸಿದರು.

ಇತ್ತೀಚೆಗೆ ಜೆಡಿಎಸ್‌ನ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು 'ಸಿದ್ದರಾಮಯ್ಯ ಅವರು ರಾಷ್ಟ್ರ ರಾಜಕಾರಣಕ್ಕೆ ಹೋಗಬೇಕು' ಎಂದು ಹೇಳಿಕೆ ನೀಡಿದ್ದರು. ಇದು, ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಇದಕ್ಕೆ ಸಿದ್ದರಾಮಯ್ಯ 'ಅವರು ಏಕೆ ಹೇಳಿದ್ದಾರೋ ಗೊತ್ತಿಲ್ಲ. ನನಗೆ ರಾಷ್ಟ್ರ ರಾಜಕಾರಣ ಆಸಕ್ತಿ ಇಲ್ಲ 'ಎಂದರು.

ವಿಧಾನಸಭೆಯಲ್ಲಿ ಬಿಸಿ ಚರ್ಚೆ • ಮೇಟಿ ಪ್ರಕರಣದಲ್ಲಿ ಕಾಂಗ್ರೆಸ್ ನಡೆ ಹೇಗಿತ್ತು: ಗೃಹ ಸಚಿವರ ಪ್ರಶ್ನೆ

# ದಾಖಲೆ ಪ್ರದರ್ಶಿಸಿ ಹರಿಹಾಯ್ದ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಅಬಕಾರಿ ಸಚಿವ ಎಚ್.ವೈ.ಮೇಟಿ ವಿರುದ್ಧ 2016 ರಲ್ಲಿ ಅತ್ಯಾಚಾರ ಆರೋಪ ಬಂದಾಗ ಯಾವುದೇ ಠಾಣೆಯಲ್ಲೂ ಎಫ್‌ಐಆರ್ ದಾಖಲಿಸದೇ ಕಾಂಗ್ರೆಸ್ ಸರ್ಕಾರ ಸಿಐಡಿ ವಿಚಾರಣೆಗೆ ಆದೇಶ ಮಾಡಿತ್ತು ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ಅಂದಿನ ದಾಖಲೆ ಪ್ರದರ್ಶಿಸಿದರು.

ಧರಣಿ ನಿರತ ಕಾಂಗ್ರೆಸ್ ಸದಸ್ಯರ ಆರೋಪಗಳಿಗೆ ಉತ್ತರ ನೀಡಿದ ಅವರು, 'ಇವರಿಗೆ ಸತ್ಯ ಬಯಲಿಗೆ ಬರುವುದು ಬೇಕಿಲ್ಲ. ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು ಎಂದು ಮೇಟಿಯವರನ್ನು ಅತ್ಯಾಚಾರ ಪ್ರಕರಣದಲ್ಲಿ ರಕ್ಷಿಸಲಾಯಿತು.ಈಗ ನಮಗೆ ಬೋಧನೆ ಮಾಡಲು ಬರುತ್ತಿದ್ದಾರೆ' ಎಂದು ಬೊಮ್ಮಾಯಿ ಗುಡುಗಿದರು.

ಮೇಟಿ ಪ್ರಕರಣದಲ್ಲೂ ವಿಚಾರಣೆಗೆ ಆದೇಶ ಮಾಡುವಾಗ ಕಾರ್ಯವ್ಯಾಪ್ತಿಯನ್ನು ಸೂಚಿಸಿರಲಿಲ್ಲ.

ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯರ ಧರಣಿ ಮಧ್ಯೆಯೇ ಸರ್ಕಾರವನ್ನು ಸಮರ್ಥಿಸಿಕೊಂಡ ಸಚಿವ ಬಸವರಾಜ ಬೊಮ್ಮಾಯಿ

ಅಲ್ಲಿಯೂ 'ತನಿಖೆ' ಬದಲಿಗೆ 'ವಿಚಾರಣೆ' ನಡೆಸಿ ಸರ್ಕಾರಕ್ಕೆ ವರದಿ ನೀಡಬೇಕು ಎಂದು ಆದೇಶದಲ್ಲಿ ನಮೂದಿಸಲಾಗಿತ್ತು. ಆ ಪ್ರಕರಣದಲ್ಲಿ ಸಂತ್ರಸ್ತೆ ತನ್ನ ಮೇಲೆ ಅತ್ಯಾಚಾರ ನಡೆದಿದೆ ಎಂದು ದೂರು ನೀಡಿದ್ದರು. ಯಾವುದೇ ಠಾಣೆಯಲ್ಲೂ ಎಫ್‌ಐಆರ್ ದಾಖಲಿಸಲಿಲ್ಲ. ವಿಚಾರಣೆಯ ಆರಂಭದ ಮೊದಲೇ ಕ್ಲೀನ್‌ಚಿಟ್ ಕೊಟ್ಟು, ಬಳಿಕ ಬಿ ರಿಪೋರ್ಟ್ ನೀಡಿದರು ಎಂದು ಬೊಮ್ಮಾಯಿ ಹರಿಹಾಯ್ದರು.

'ಆಗ ಗೃಹ ಸಚಿವರಾಗಿದ್ದ ರಾಮಲಿಂಗಾರೆಡ್ಡಿ ಅವರು ಯಾವ ರೀತಿ ಆದೇಶ ಹೊರಡಿಸಿದ್ದರೋ ಅದೇ ರೀತಿಯಲ್ಲಿ ಈಗ ಆದೇಶ ಹೊರಡಿಸಲಾಗಿದೆ. ಕಾಂಗ್ರೆಸ್‌ಗೆ ರಾಜಕೀಯ ದುರುದ್ದೇಶ ಬಿಟ್ಟರೆ ಈ ಪ್ರಕರಣದಲ್ಲಿ ಬೇರೆ ಏನೂ ಇಲ್ಲ. ಇವರು ಏನೂ ಮಾಡಿದರೂ ಸರಿ, ನಾವು ಮಾಡಿದರೆ ತಪ್ಪು. ಸತ್ಯ ಮರೆ ಮಾಚಿ, ಭಂಡತನದ ಆರೋಪ ಮಾಡುತ್ತಿದ್ದಾರೆ. ಇವರೇನು ಸತ್ಯ ಹರಿಶ್ಚಂದ್ರರಲ್ಲ' ಎಂದು ಕಿಡಿಕಾರಿದರು.

'ಮೇಟಿ ಪ್ರಕರಣದಲ್ಲಿ ಒಬ್ಬ ವ್ಯಕ್ತಿಯನ್ನೇ ತನಿಖಾಧಿಕಾರಿ ಮತ್ತು ವಿಚಾರಣಾಧಿಕಾರಿ ಎಂದು ನೇಮಿಸಲಾಗಿತ್ತು. ನಾವು ಎಸ್‌ಐಟಿ ರಚಿಸಿದ್ದೇವೆ. ಅವರು ವಿಚಾರಣೆಗಿಂತ ಮೊದಲೇ ಮೇಟಿ ನಿರ್ದೋಷಿ ಎಂದು ಘೋಷಿಸಿದ್ದರು' ಎಂದರು.

'ಮೇಟಿ ಪ್ರಕರಣದಲ್ಲಿ ಅತ್ಯಾಚಾರದ ದೂರು ನೀಡಿದ್ದ ಮಹಿಳೆಯ ಗತಿ ಏನಾಯಿತು. ಆಗ ಕಾಂಗ್ರೆಸ್ ಸರ್ಕಾರ ಆ ಮಹಿಳೆ ವಿರುದ್ಧ ನಿಂತಿತ್ತು. ಆದ್ದರಿಂದ ಕಾಂಗ್ರೆಸ್‌ನಿಂದ ನಾವು ಪಾಠ ಕಲಿಯಬೇಕಾಗಿಲ್ಲ' ಎಂದು ಬೊಮ್ಮಾಯಿ ಕುಟುಕಿದರು.

**ಸಿ.ಡಿ ಪ್ರಕರಣ– ಪರಿಷತ್‌ನಲ್ಲಿ ಇಂದು ಪ್ರಸ್ತಾವ:** ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ ಪ್ರಕರಣವನ್ನು ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಸ್ತಾಪಿಸಲು ಕಾಂಗ್ರೆಸ್ ನಿರ್ಧರಿಸಿದೆ.

ವಿಧಾನಸಭೆ ಕಲಾಪ ಮಂಗಳವಾರ ಸಿ.ಡಿ.ಪ್ರಕರಣ ಚರ್ಚೆಗೆ ಬಲಿಯಾದ ಬಳಿಕ ವಿಧಾನ ಪರಿಷತ್‌ನ ಮೊಗಸಾಲೆಗೆ ಬಂದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಸಿ.ಡಿ ವಿಷಯವನ್ನು ಪರಿಷತ್‌ನಲ್ಲಿ ಇನ್ನೂ ಪ್ರಸ್ತಾಪಿಸದ ಬಗ್ಗೆ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಬಳಿ ಚರ್ಚೆ ನಡೆಸಿದರು.

## ಸಿ.ಡಿ: ಇ.ಡಿ.ಗೆ ಕಾಂಗ್ರೆಸ್ ದೂರು

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಸಂಬಂಧಿಸಿದ್ದು ಎನ್ನಲಾಗುತ್ತಿರುವ ಸಿ.ಡಿ ವಿಚಾರದಲ್ಲಿ ನಡೆದಿದೆ ಎನ್ನಲಾದ ಹಣದ ವಹಿವಾಟಿನ ಕುರಿತು ತನಿಖೆ ನಡೆಸುವಂತೆ ಜಾರಿ ನಿರ್ದೇಶನಾಲಯಕ್ಕೆ ಕಾಂಗ್ರೆಸ್ ದೂರು ನೀಡಿದೆ.

ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಪ್ರಧಾನ ಕಾರ್ಯದರ್ಶಿ ವೈ. ಪುಟ್ಟರಾಜು ನೇತೃತ್ವದ ನಿಯೋಗ ಜಾರಿ ನಿರ್ದೇಶನಾಲಯದ ಜಂಟಿ ನಿರ್ದೇಶಕರ ಕಚೇರಿಗೆ ಮಂಗಳವಾರ ದೂರು ಸಲ್ಲಿಸಿದೆ. ಈ ಸಂಬಂಧ ಮಾರ್ಚ್ 9ರಂದು ರಮೇಶ ಜಾರಕಿಹೊಳಿ ನಡೆಸಿದ್ದ ಸುದ್ದಿಗೋಷ್ಠಿಯ ರೆಕಾರ್ಡಿಂಗ್ ಇರುವ ಸಿ.ಡಿಯನ್ನೂ ದೂರಿನೊಂದಿಗೆ ನೀಡಿದೆ.

'ಪ್ರಕರಣದಲ್ಲಿ ₹ 5 ಕೋಟಿಯಿಂದ ₹ 100 ಕೋಟಿಯವರೆಗೂ ಹಣದ ವಹಿವಾಟು ನಡೆದಿದೆ, ಸಿ.ಡಿಯಲ್ಲಿರುವ ಮಹಿಳೆಗೆ ಎರಡು ಫ್ಲ್ಯಾಟ್ ಕೊಡಿಸಲಾಗಿದೆ ಎಂದು ರಮೇಶ ಜಾರಕಿಹೊಳಿ ಆರೋಪಿಸಿದ್ದಾರೆ. ಈ ವಿಚಾರಗಳ ಕುರಿತು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ತನಿಖೆ ನಡೆಸಬೇಕು' ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಕಾಂಗ್ರೆಸ್ ಸದಸ್ಯರ ಧರಣಿ ನಡುವೆಯೇ ಚರ್ಚೆ ಇಲ್ಲದೇ ವಿಧಾನಸಭೆಯಲ್ಲಿ ಮಸೂದೆಗೆ ಒಪ್ಪಿಗೆ

# ಅಲ್ಪಸಂಖ್ಯಾತರ ಸೊಸೈಟಿಗಳಿಗೆ ಆಡಳಿತಾಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಪಸಂಖ್ಯಾತ ಸಮುದಾಯದವರು ನಡೆಸುವ ಸಹಕಾರಿ ಸೊಸೈಟಿಗಳಲ್ಲಿ ಆಡಳಿತಾಧಿಕಾರಿಗಳನ್ನು ನೇಮಿಸಲು ಸಹಕಾರ ಇಲಾಖೆಗೆ ಅಧಿಕಾರ ನೀಡುವ ಕರ್ನಾಟಕ ಸೊಸೈಟಿಗಳ ನೋಂದಣಿ (ತಿದ್ದುಪಡಿ) ಮಸೂದೆ 2021 ಕ್ಕೆ ವಿಧಾನಸಭೆ ಅಂಗೀಕಾರ ನೀಡಿತು.

ಕಾಂಗ್ರೆಸ್ ಸದಸ್ಯರು ಧರಣಿ ನಡೆಸುತ್ತಿದ್ದ ಕಾರಣ ಮಸೂದೆಯ ಬಗ್ಗೆ ಯಾವುದೇ ಚರ್ಚೆ ನಡೆಯಲಿಲ್ಲ. ಜೆಡಿಎಸ್ ಸದಸ್ಯರು ಚರ್ಚೆಗೆ ಸಿದ್ಧರಾಗಿದ್ದರೂ ಗದ್ದಲದ ಕಾರಣ ಯಾರಿಗೂ ಮಾತನಾಡಲು ಸಾಧ್ಯವಾಗಲಿಲ್ಲ. ಇದರಿಂದ ಬೇಸತ್ತ ಜೆಡಿಎಸ್ ಸದಸ್ಯರು ಸಭಾತ್ಯಾಗ ನಡೆಸಿದರು.

ಮಸೂದೆಯನ್ನು ಮಂಡಿಸಿ ಮಾತನಾಡಿದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು, ರಾಜ್ಯದಲ್ಲಿ 3.71 ಲಕ್ಷ ಸಹಕಾರ ಸೊಸೈಟಿಗಳಿವೆ, ಇದರಲ್ಲಿ 6,807 ಸೊಸೈಟಿಗಳನ್ನು ಅಲ್ಪಸಂಖ್ಯಾತರ ನಡೆಸುತ್ತಿದ್ದಾರೆ. ಈ ಮಸೂದೆಯಿಂದ ಸೊಸೈಟಿಗಳನ್ನು ನಿಯಂತ್ರಿಸುವುದು ಮಾತ್ರವಲ್ಲದೆ, ಸೊಸೈಟಿಗಳ ಸದಸ್ಯರು ಮತ್ತು ಸಾರ್ವಜನಿಕರ ಹಿತವನ್ನು ಕಾಪಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ 1960 ರ ಸೆಕ್ಷನ್ 27 ಎ ಗೆ ತಿದ್ದುಪಡಿ ಮಾಡಲಾಗಿದೆ. ಇದರಿಂದ ಅಲ್ಪಸಂಖ್ಯಾತರಿಗೆ ಸೇರಿದ ಸೊಸೈಟಿಗಳಲ್ಲಿ ವ್ಯಾಜ್ಯದಿಂದ ಅಥವಾ ಬೇರೆ ಕಾರಣಗಳಿಂದ ವಾರ್ಷಿಕ ಮಹಾಸಭೆ ನಡೆಸದಿದ್ದರೆ, ಆಡಳಿತ ಮಂಡಳಿ ಸದಸ್ಯರ ಅಧಿಕಾರ ಅವಧಿ ಮುಕ್ತಾಯವಾದರೆ ಮತ್ತು ಹೊಸ ಮಂಡಳಿ ರಚಿಸದಿದ್ದರೆ, ರಿಜಿಸ್ಟ್ರಾರ್ ಅವರ ವರದಿ ಮೇರೆಗೆ ಅಂತಹ ಸೊಸೈಟಿಗಳಿಗೆ ಆಡಳಿತಾಧಿಕಾರಿಯನ್ನು ನೇಮಿಸಬಹುದಾಗಿದೆ ಎಂದು ಸೋಮಶೇಖರ್ ವಿವರಿಸಿದರು.

ಈ ಮಸೂದೆಗೆ ವಿಧಾನಪರಿಷತ್‌ನಲ್ಲಿ ಒಪ್ಪಿಗೆ ಸಿಕ್ಕಿದ ಬಳಿಕ ರಾಷ್ಟ್ರಪತಿಗಳ ಅಂಕಿತಕ್ಕೆ ಕಳಿಸಲಾಗುವುದು ಎಂದು ಅವರು ತಿಳಿಸಿದರು. ಇದೇ ಸಂದರ್ಭ ಕರ್ನಾಟಕ ಒಳನಾಡು ಜಲ ಸಾರಿಗೆ ಮಂಡಳಿ(ತಿದ್ದುಪಡಿ) ಮಸೂದೆಗೂ ಚರ್ಚೆ ಇಲ್ಲದೆ ಒಪ್ಪಿಗೆ ನೀಡಲಾಯಿತು.

## 'ಮೈಕ್ರೋ ಸಾಲ: ನಿರ್ಲಕ್ಷ್ಯ ವಹಿಸಿದರೆ ಕ್ರಮ'

ಬೆಂಗಳೂರು: 'ಮೈಕ್ರೋ ಸಾಲ (ವೈಯುಕ್ತಿಕ) ಸೇರಿದಂತೆ ಇಲಾಖೆಯ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸುವ ವಿಷಯದಲ್ಲಿ ನಿರ್ಲಕ್ಷ್ಯ ವಹಿಸುವ ಜಿಲ್ಲಾ ಮಟ್ಟದ ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು' ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಶ್ರೀಮಂತ ಪಾಟೀಲ ಎಚ್ಚರಿಕೆ ನೀಡಿದರು.

ಕಂಪ್ಯೂಟರ್ ತಂತ್ರಜ್ಞಾನದ ಲಾಟರಿ ಮೂಲಕ ಮೈಕ್ರೋ ಸಾಲ ಯೋಜನೆಯ 2020-21ನೇ ಸಾಲಿನ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದ ಅವರು, 'ರಾಜ್ಯದಲ್ಲಿ ಪ್ರವಾಸ ಮಾಡಿದಾಗ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಅನೇಕ ದೂರುಗಳು ಗಮನಕ್ಕೆ ಬಂದಿವೆ. ಅಧಿಕಾರಿಗಳ ಅಸಡ್ಡೆಯನ್ನು ಸಹಿಸುವುದಿಲ್ಲ' ಎಂದರು.

'ಬಡವರಿಗೆ ಆರ್ಥಿಕ ನೆರವು ನೀಡಲು ಮೈಕ್ರೋ ಸಾಲ ಯೋಜನೆ ರೂಪಿಸಲಾಗಿದೆ. ಅರ್ಹ ಫಲಾನುಭವಿಗಳಿಗೆ ತಲುಪಬೇಕಾದರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಬೇಕು' ಎಂದರು.

18 ಸಾವಿರ ಮಂದಿಗೆ ಸಾಲ: 'ಮೈಕ್ರೋ ಸಾಲ ಯೋಜನೆಯಡಿ ಒಬ್ಬ ಫಲಾನುಭವಿಗೆ ₹ 10 ಸಾವಿರ ನೆರವು ನೀಡಲಾಗುತ್ತದೆ. ಇದರಲ್ಲಿ ₹ 8 ಸಾವಿರ ಸಾಲದ ರೂಪದಲ್ಲಿ ನೀಡಿದರೆ, ₹ 2 ಸಾವಿರ ಸಹಾಯಧನವಾಗಿ ನೀಡಲಾಗುತ್ತದೆ. 2020-21ನೇ ಸಾಲಿನಲ್ಲಿ 44,862 ಅರ್ಜಿಗಳು ಬಂದಿದ್ದವು. ಇದರಲ್ಲಿ 42,501 ಅರ್ಜಿಗಳನ್ನು ಅಂತಿಮವಾಗಿ ಆಯ್ಕೆ ಮಾಡಲಾಗಿದೆ. ನಮ್ಮ ಗುರಿ 18,790 ಫಲಾನುಭವಿಗಳಿಗೆ ಸಾಲ ನೀಡುವುದು. ಅರ್ಹ ಫಲಾನುಭವಿಗಳಿಗೆ ಅನ್ಯಾಯ ಆಗದಂತೆ ಮತ್ತು ಮಧ್ಯಪ್ರವೇಶಕ್ಕೆ ಅವಕಾಶ ಇಲ್ಲದಂತೆ ಆನ್‌ಲೈನ್ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ' ಎಂದರು.

'ಈ ಯೋಜನೆಗೆ ₹ 18.50 ಕೋಟಿ ವ್ಯಯ ಮಾಡಲಾಗುತ್ತಿದೆ. ಅರ್ಜಿಗಳ ವಿಲೇವಾರಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ವಾರದ ಗಡುವು ನೀಡಲಾಗಿದೆ. ರಾಜ್ಯ ಮಟ್ಟದ ಅಧಿಕಾರಿಗಳು, ನಿಗಮ ಮತ್ತು ಆಯೋಗದ ಮುಖ್ಯಸ್ಥರು ಈ ಬಗ್ಗೆ ಗಮನಹರಿಸುವಂತೆ ಸೂಚಿಸಲಾಗಿದೆ' ಎಂದು ಸಚಿವರು ವಿವರಿಸಿದರು.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಖ್ತಾರ್ ಹುಸೇನ್ ಎಫ್. ಪಠಾಣ, ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ, ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕ ಮಹಿಬೂಬ್ ಸಾಬ್ ಇದ್ದರು.

11,284 ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯವೇ ಇಲ್ಲ

# ಎಲ್ಲ ಶಾಲೆಗಳಿಗೆ ನೀರು, ಶೌಚಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳು ಮತ್ತು ಅಂಗನವಾಡಿಗಳಿಗೆ ಶುದ್ಧವಾದ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸುವ ಪ್ರಕ್ರಿಯೆ ಶೀಘ್ರದಲ್ಲಿ ಪೂರ್ಣಗೊಳ್ಳಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, 'ಕೇಂದ್ರದ ಜಲಜೀವನ ಮಿಷನ್ ಯೋಜನೆಯಡಿ ರಾಜ್ಯದ 53,568 ಸರ್ಕಾರಿ ಶಾಲೆಗಳ ಪೈಕಿ 40,062 ಶಾಲೆಗಳಿಗೆ ಶುದ್ಧ ನೀರು ಪೂರೈಕೆ ವ್ಯವಸ್ಥೆ ಮಾಡಲಾಗಿದೆ. 13,206 ಶಾಲೆಗಳಿಗೆ ನೀರಿನ ಸೌಲಭ್ಯ ಕಲ್ಪಿಸುವುದು ಬಾಕಿ ಇದೆ' ಎಂದರು.

ರಾಜ್ಯದಲ್ಲಿ 55,396 ಅಂಗನವಾಡಿಗಳಿದ್ದು, 31872 ಅಂಗನವಾಡಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

23,524 ಶಾಲೆಗಳಿಗೆ ನೀರಿನ ಪೂರೈಕೆಗೆ ವ್ಯವಸ್ಥೆ ಆಗಬೇಕಿದೆ. ಎಲ್ಲ ಶಾಲೆ ಮತ್ತು ಅಂಗನವಾಡಿಗಳಲ್ಲಿ ಕೈ ತೊಳೆಯಲು ನಲ್ಲಿ ನೀರಿನ ವ್ಯವಸ್ಥೆ ಮಾಡುವ ಕೆಲಸವೂ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

42,284 ಶಾಲೆಗಳಲ್ಲಿ ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕವಾದ ಶೌಚಾಲಯಗಳ ಸೌಲಭ್ಯವಿದೆ. 45,330 ಅಂಗನವಾಡಿಗಳಲ್ಲೂ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇದೆ. ಉಳಿದಿರುವ ಶಾಲೆ ಮತ್ತು ಅಂಗನವಾಡಿಗಳಲ್ಲಿಯೂ ಪ್ರತ್ಯೇಕವಾದ ಶೌಚಾಲಯ ಒದಗಿಸಲಾಗುವುದು ಎಂದರು.

ಜಲಜೀವನ ಮಿಷನ್ ಯೋಜನೆಯಡಿ ಅನುದಾನ ದೊರೆಯದಿದ್ದರೂ, ಇತರೆ ಮೂಲಗಳಿಂದ ಅಗತ್ಯ ಹಣ ಒದಗಿಸಿ ಎಲ್ಲ ಶಾಲೆ, ಅಂಗನವಾಡಿಗಳಿಗೆ ಶೌಚಾಲಯ, ಕುಡಿಯುವ ನೀರು ಒದಗಿಸಲಾಗುವುದು. ಈ ಸಂಬಂಧ ಗ್ರಾಮ ಪಂಚಾಯಿತಿಗಳಿಗೆ ಈಗಾಗಲೇ ಆದೇಶ ಹೊರಡಿಸಲಾಗಿದೆ. ಉದ್ಯೋಗ ಖಾತರಿ ಯೋಜನೆಯಡಿ ಎಲ್ಲ ಶಾಲೆ, ಅಂಗನವಾಡಿಗಳಿಗೆ ಕಾಂಪೌಂಡ್ ನಿರ್ಮಿಸಲಾಗುವುದು ಎಂದು ಈಶ್ವರಪ್ಪ ತಿಳಿಸಿದರು.

ನೆರವು ಪಡೆಯಲು ಸಲಹೆ: ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆ, ಅಂಗನವಾಡಿಗಳಿಗೆ ನೀರು, ಶೌಚಾಲಯ ಒದಗಿಸಲು ಸರ್ಕಾರದಿಂದ ಸರಿಯಾಗಿ ಅನುದಾನ ದೊರಕುತ್ತಿಲ್ಲ ಎಂದು ಬಿಜೆಪಿಯ ಅರುಣ್ ಶಹಾಪುರ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ಶಿವಮೊಗ್ಗ ನಗರದಲ್ಲಿ ವಿವಿಧ ಇಲಾಖೆಗಳ ಅನುದಾನದ ಜತೆಗೆ ಸಂಘ ಸಂಸ್ಥೆಗಳು ಹಾಗೂ ಕಾರ್ಪೋರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ ನೆರವು ಪಡೆದು ಶಾಲೆ, ಸೌಲಭ್ಯ ಒದಗಿಸಿದ್ದೇವೆ. ಅದೇ ಮಾದರಿಯಲ್ಲಿ ಇತರ ಕಡೆಯಲ್ಲೂ ಮಾಡಬೇಕು' ಎಂದು ಸಲಹೆ ನೀಡಿದರು.

## ₹13,158 ಕೋಟಿ ಪೂರಕ ಅಂದಾಜು

ಬೆಂಗಳೂರು: ರಾಜ್ಯ ಸರ್ಕಾರ 2020–21 ರ ಸಾಲಿನಲ್ಲಿ ಅನುಮೋದನೆ ಪಡೆದಿದ್ದ ಬಜೆಟ್‌ನ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಖರ್ಚು ಮಾಡಲು ₹13,158.25 ಕೋಟಿ ಮೊತ್ತದ ಪೂರಕ ಅಂದಾಜನ್ನು ಮಂಗಳವಾರ ವಿಧಾನಸಭೆಯಲ್ಲಿ ಮಂಡಿಸಿತು.

ಮುಖ್ಯಮಂತ್ರಿ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಪೂರಕ ಅಂದಾಜುಗಳು ಮೂರನೇ ಕಂತಿನ ಬೇಡಿಕೆಗಳ ಪ್ರಸ್ತಾವ ಮಂಡಿಸಿದರು. ಇದರಲ್ಲಿ ರೈತರಿಗೆ ಸಹಾಯಧನ, ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಮತ್ತು ಪುನರ್‌ವಸತಿಯೂ ಸೇರಿದೆ. ಹೊಸ ಸಚಿವರು, ರಾಜ್ಯಸಭಾ, ಲೋಕಸಭಾ ಸದಸ್ಯರಿಗೆ ಹೊಸ ವಾಹನ ಖರೀದಿಸಲು ₹2 ಕೋಟಿ ಖರೀದಿಗೆ ಎಂದು ತೋರಿಸಲಾಗಿದೆ.

# ಶ್ರವಣದೋಷ ಇರುವ ನೌಕರನ ವಿರುದ್ಧದ ಶಿಸ್ತು ಕ್ರಮ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಡಿಕೇಟ್ ಬ್ಯಾಂಕ್(ಈಗ ಕೆನರಾ ಬ್ಯಾಂಕ್) ನೌಕರರೊಬ್ಬರ ವಿರುದ್ಧ ಮಾನವ ಹಕ್ಕು ಉಲ್ಲಂಘಿಸಿ ಜರುಗಿಸಿದ್ದ ಶಿಸ್ತು ಕ್ರಮವನ್ನು ಹೈಕೋರ್ಟ್ ರದ್ದುಪಡಿಸಿದೆ.

'ಶೇ 98ರಷ್ಟು ಶ್ರವಣದೋಷ ಇರುವ ವ್ಯಕ್ತಿ ತನ್ನ ವಿರುದ್ಧದ ಆರೋಪಗಳಿಗೆ ಸಮಜಾಯಿಷಿ ನೀಡಲು ಸಮಂಜಸವಾದ ಅವಕಾಶ ನೀಡದಿರುವ ಬ್ಯಾಂಕಿನ ಕ್ರಮ ಪ್ರಶ್ನಿಸುವಂತದ್ದು' ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ಅಭಿಪ್ರಾಯಪಟ್ಟಿದೆ.

ಅರ್ಜಿದಾರ ಎ.ಕೆ.ಸಿದ್ದಲಿಂಗಪ್ಪ ಅವರು 1976ರ ಅಕ್ಟೋಬರ್‌ನಲ್ಲಿ ಬ್ಯಾಂಕ್‌ಗೆ ಗುಮಾಸ್ತರಾಗಿ ಸೇರಿದ್ದರು. ಸ್ಟೇಷನರಿ ಖರೀದಿ ಅಕ್ರಮದ ವಿಷಯದಲ್ಲಿ 2012ರಲ್ಲಿ ಶೋಕಾಸ್ ನೋಟಿಸ್ ಅನ್ನು ಬ್ಯಾಂಕ್ ನೀಡಿತ್ತು. ಅಂಗವೈಕಲ್ಯದ ಕಾರಣಕ್ಕೆ ಸಮರ್ಥನೆ ನೀಡಲು ಸಹಾಯಕರನ್ನು ನೇಮಿಸಬೇಕೆಂದು ವಿಚಾರಣಾಧಿಕಾರಿ ಮುಂದೆ ಅವರು ಮನವಿ ಮಾಡಿದ್ದರು. ಅದಕ್ಕೆ ಅವಕಾಶ ನೀಡದ ವಿಚಾರಣಾಧಿಕಾರಿ, ಅರ್ಜಿದಾರ ತಪ್ಪಿತಸ್ಥ ಎಂದು ತೀರ್ಮಾನಿಸಿತು. ಬಳಿಕ ಅವರು ನಿವೃತ್ತರಾದರು.

'ಬ್ಯಾಂಕ್ ನಡೆಸಿರುವ ವಿಚಾರಣೆಯು ಬ್ಯಾಂಕ್ ನಿಯಮಗಳ ಉಲ್ಲಂಘನೆ ಅಲ್ಲ. ಆದರೆ, ಮಾನವ ಹಕ್ಕುಗಳ ಉಲ್ಲಂಘನೆ. ಅರ್ಜಿದಾರರನ್ನು ವಿಚಾರಣೆಯ ಉದ್ದಕ್ಕೂ ಸಾಮಾನ್ಯ ವ್ಯಕ್ತಿಯಂತೆ ಪರಿಗಣಿಸಲಾಗಿದೆ' ಎಂದು ಪೀಠ ಹೇಳಿತು.

'ಅರ್ಜಿದಾರರು ಶೇ 98ರಷ್ಟು ಶ್ರವಣದೋಷದಿಂದ ಬಳಲುತ್ತಿದ್ದಾರೆ ಎಂಬುದರಲ್ಲಿ ವಿವಾದ ಇಲ್ಲ. ಅವರನ್ನು ಸಾಮಾನ್ಯರಂತೆ ಪರಿಗಣಿಸಲು ಆಗುವುದಿಲ್ಲ' ಎಂದು ತಿಳಿಸಿದ ಪೀಠ, ಶಿಸ್ತು ಕ್ರಮವನ್ನು ರದ್ದುಪಡಿಸಿತು. ನಿವೃತ್ತಿ ವೇತನ ಹಾಗೂ ಇನ್ನಿತರ ಸವಲತ್ತುಗಳನ್ನು ಪಡೆದುಕೊಳ್ಳಲು ಅವರು ಅರ್ಹರಿದ್ದಾರೆ. ಇನ್ನು ಎರಡು ತಿಂಗಳಲ್ಲಿ ಅವರಿಗೆ ಎಲ್ಲವನ್ನೂ ನೀಡಬೇಕು' ಎಂದು ತಿಳಿಸಿತು.

## ಹಲ್ಲೆಗೀಡಾಗಿದ್ದ ಬಾಲಕ ಸಾವು

ಹಾವೇರಿ: ಹಾನಗಲ್ ತಾಲ್ಲೂಕಿನ ಉಪ್ಪುಣಸಿ ಗ್ರಾಮದಲ್ಲಿ ಹಲ್ಲೆಗೀಡಾಗಿದ್ದ ಎನ್ನಲಾದ ಬಾಲಕ ಹರೀಶಯ್ಯ ಹಿರೇಮಠ (10) ಚಿಕಿತ್ಸೆಗೆ ಸ್ಪಂದಿಸದೆ ಸೋಮವಾರ ರಾತ್ರಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಹರೀಶಯ್ಯ

ಅದೇ ಗ್ರಾಮದ ಪ್ರವೀಣ ಕರಿಶೆಟ್ಟರ, ಬಸವಣ್ಣೆವ್ವ ಕರಿಶೆಟ್ಟರ ಹಾಗೂ ಶಿವರುದ್ರಪ್ಪ ಹಾವೇರಿ, ಕುಮಾರ ಹಾವೇರಿ ಎಂಬ ನಾಲ್ವರು ಆರೋಪಿಗಳ ವಿರುದ್ಧ ಬಾಲಕನ ತಂದೆ ನಾಗಯ್ಯ ಹಿರೇಮಠ ಆಡೂರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. 'ಮಾರ್ಚ್ 16ರಂದು ನನ್ನ ಮಗ ಸ್ನೇಹಿತರೊಂದಿಗೆ ಆಟವಾಡುತ್ತಾ, ತಿನಿಸು ತರಲು ಅಂಗಡಿಗೆ ಹೋಗಿದ್ದ. ಆಗ ಕಳ್ಳತನದ ಆರೋಪ ಹೊರಿಸಿ, ಆರೋಪಿಗಳು ಥಳಿಸಿದ್ದಾರೆ. ಬಾಲಕನ ಕಿವಿ ಹಿಡಿಸಿ, ಭಾರವಾದ ಕಲ್ಲನ್ನು ಹೊರಿಸಿ, ಹಿತ್ತಲ ಗುಂಡಿಯಲ್ಲಿ ಹೂತು ಹಾಕಲು ಯತ್ನಿಸಿದ್ದಾರೆ. ಮಗನನ್ನು ಬಿಡಿಸಲು ಹೋದ ತಾಯಿ ಮೇಲೂ ಹಲ್ಲೆ ನಡೆಸಿದ್ದಾರೆ. ನಮಗೆ ಜೀವ ಬೆದರಿಕೆಯನ್ನೂ ಹಾಕಿದ್ದಾರೆ' ಎಂದು ತಿಳಿಸಿದ್ದಾರೆ.

**ಪ್ರತಿಭಟನೆ:** ಬಾಲಕ ಮೃತಪಟ್ಟ ವಿಷಯ ತಿಳಿದ ಸಂಬಂಧಿಕರು, ಆರೋಪಿಗಳ ಬಂಧನದವರೆಗೂ ಅಂತ್ಯಕ್ರಿಯೆಗೆ ಅವಕಾಶ ನೀಡುವುದಿಲ್ಲ ಎಂದು ಆರೋಪಿಗಳ ಅಂಗಡಿ ಮುಂದೆ ಶವ ಇಟ್ಟು ಮಂಗಳವಾರ ತಡರಾತ್ರಿವರೆಗೂ ಪ್ರತಿಭಟನೆ ನಡೆಸಿದರು. ಘಟನಾ ಸ್ಥಳಕ್ಕೆ ಎಸ್ಪಿ, ಜಿಲ್ಲಾಧಿಕಾರಿ ಬರಬೇಕು ಎಂದು ಆಗ್ರಹಿಸಿದರು. ಆಡೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ತನಿಖೆ ನಡೆಸುತ್ತಿದ್ದೇವೆ. ಆರೋಪಿಗಳ ಬಂಧನಕ್ಕೆ ತಂಡ ರಚಿಸಲಾಗಿದೆ' ಎಂದು ಹೆಚ್ಚುವರಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

## '2ಎ' ಪಟ್ಟಿಗೆ ಮರಾಠಾ ಸಮುದಾಯ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮರಾಠಾ ಸಮುದಾಯದ ಜನರನ್ನು ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಪಟ್ಟಿಗೆ ಸೇರಿಸಿ ಆದೇಶ ಹೊರಡಿಸುವಂತೆ ಕಾಂಗ್ರೆಸ್‌ನ ಶ್ರೀಕಾಂತ ಘೋಟ್ನೇಕರ ವಿಧಾನ ಪರಿಷತ್‌ನಲ್ಲಿ ಮಂಗಳವಾರ ಆಗ್ರಹಿಸಿದರು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ಮರಾಠಾ ಸಮುದಾಯವನ್ನು 2ಎ ಪಟ್ಟಿಗೆ ಸೇರಿಸುತ್ತೇನೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದರು. ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಏಳು ವರ್ಷಗಳಿಂದ ನಾನು ಸದನದಲ್ಲಿ ಈ ಬಗ್ಗೆ ಪ್ರಸ್ತಾಪಿಸುತ್ತಲೇ ಇದ್ದೇನೆ' ಎಂದರು.

ಶ್ರೀಕಾಂತ್

ಮರಾಠಾ ಸಮುದಾಯದವರು ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಅವರನ್ನು ಮಹಾರಾಷ್ಟ್ರ ಸರ್ಕಾರ 2ಎ ಪಟ್ಟಿಗೆ ಸೇರಿಸಿದೆ. ಅದೇ ರೀತಿ ರಾಜ್ಯದಲ್ಲೂ ತೀರ್ಮಾನ ಕೈಗೊಳ್ಳಬೇಕು ಎಂದ ಘೋಟ್ನೇಕರ, ಯಡಿಯೂರಪ್ಪ ಅವರ ಭಾಷಣದ ರೆಕಾರ್ಡಿಂಗ್ ಇದ್ದ ಸಿ.ಡಿ ಪ್ರದರ್ಶಿಸಿದರು. ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಧರಣಿಗೂ ಮುಂದಾದರು. ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನೀಡಿದರು. ಧರಣಿ ಮಾಡದಂತೆ ಇತರ ಸದಸ್ಯರು ಘೋಟ್ನೇಕರ ಅವರ ಮನವೊಲಿಸಿದರು.

ಬೆಳ್ಳೂರಿನಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಕೊಡಗು ಜಿಲ್ಲೆಯ ವಿವಿಧ ಭಾಗದ ರೈತರು ಪಾಲ್ಗೊಂಡಿದ್ದರು

ಹುಲಿ ಉಪಟಳಕ್ಕೆ ತಡೆ: ಅರಣ್ಯಾಧಿಕಾರಿಗಳ ಭರವಸೆ

# ಪ್ರತಿಭಟನೆ ಕೈಬಿಟ್ಟ ರೈತರು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ದಕ್ಷಿಣ ಭಾಗದಲ್ಲಿ ವನ್ಯಜೀವಿಗಳ ಹಾವಳಿ ತಡೆಗೆ ಆಗ್ರಹಿಸಿ, ಪೊನ್ನಂಪೇಟೆ ತಾಲ್ಲೂಕಿನ ಬೆಳ್ಳೂರಿನಲ್ಲಿ 16 ದಿನಗಳಿಂದ ನಡೆಯುತ್ತಿದ್ದ ಪ್ರತಿಭಟನೆಯನ್ನು ರೈತರು, ಅರಣ್ಯಾಧಿಕಾರಿಗಳ ಭರವಸೆ ಆಧರಿಸಿ ಕೈಬಿಟ್ಟಿದ್ದಾರೆ.

ಹುಲಿ ಉಪಟಳವಿದ್ದ ಗ್ರಾಮಗಳ ಗ್ರಾಮಸ್ಥರು ಹಾಗೂ ರೈತ ಮುಖಂಡರು ರೈತ ಸಂಘದ ಜಿಲ್ಲಾ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ನೇತೃತ್ವದಲ್ಲಿ ಹುದಿಕೇರಿ ಸಮೀಪದ ಬೆಳ್ಳೂರು ವೃತ್ತದಲ್ಲಿ ಪ್ರತಿಭಟನೆ ನಡೆಸುತ್ತಿದ್ದರು.

ರಾಜ್ಯ ಹೆದ್ದಾರಿ ತಡೆ, ಮತ್ತಿಗೋಡಿನ ವನ್ಯಜೀವಿ ಕಚೇರಿಗೆ ಮುತ್ತಿಗೆ, ಪೊನ್ನಂಪೇಟೆ ತಾಲ್ಲೂಕು ಬಂದ್, ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ... ಹೀಗೆ ಹಂತ ಹಂತವಾಗಿ ಪ್ರತಿಭಟನೆ ನಡೆಸಿದ್ದ ರೈತರು, ಸೋಮವಾರ ಬೆಂಗಳೂರಿನ ಅರಣ್ಯ ಭವನದ ಎದುರೂ ಧರಣಿ ನಡೆಸಿದ್ದರು. 'ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅಧ್ಯಕ್ಷತೆಯಲ್ಲಿ ಸಭೆ ನಡೆಸುವ ಭರವಸೆ ಸಿಕ್ಕಿದೆ. ವನ್ಯಜೀವಿಗಳ ದಾಳಿಯಿಂದ ಜಾನುವಾರು ಮೃತಪಟ್ಟರೆ ನೀಡುವ ಪರಿಹಾರವನ್ನು ಈಗಿರುವ ₹ 10 ಸಾವಿರದಿಂದ ₹ 30 ಸಾವಿರಕ್ಕೆ ಹೆಚ್ಚಿಸುವ ಭರವಸೆಯನ್ನು ಅಧಿಕಾರಿಗಳು ನೀಡಿದ್ದಾರೆ. ಕಾರ್ಯಾಚರಣೆ ವೇಳೆ ಕಾಫಿ ತೋಟಕ್ಕೆ ಆಗಿರುವ ನಷ್ಟಕ್ಕೂ ಪರಿಹಾರ ವಿತರಿಸುವ ಭರವಸೆ ನೀಡಿದ್ದಾರೆ' ಎಂದು ಮನು ಸೋಮಯ್ಯ ಮಂಗಳವಾರ ಪ್ರತಿಭಟನಾ ಸ್ಥಳದಲ್ಲಿ ಹೇಳಿದರು.

ಕಿಗ್ಗಟ್ಟುನಾಡು ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ಕಾಟಿಮಾಡ ಜಿಮ್ಮಿ ಅಯ್ಯಣ್ಣ, ಟಿ.ಶೆಟ್ಟಿಗೇರಿ ಕೊಡವ ಸಮಾಜದ ಅಧ್ಯಕ್ಷ ಚೊಟ್ಟೆಯಂಡಮಾಡ ಬೋಸ್ ವಿಶ್ವನಾಥ್, ಇಟ್ಟಿರ ಲಾಲಪ್ಪ, ಇಟ್ಟಿರ ವಿಷ್ಣು, ಪುಚ್ಚಿಮಾಡ ಸುಭಾಷ್ ಸುಬ್ಬಯ್ಯ ಇದ್ದರು.

ಕಿಸಾನ್ ಮೋರ್ಚಾದ ನಾಯಕ ಡಾ. ದರ್ಶನ್ ಪಾಲ್

# ಹೆಜ್ಜೆ ಹಿಂದಿಡುವ ಪ್ರಶ್ನೆಯೇ ರೈತರ ಮುಂದಿಲ್ಲ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 'ಪಂಜಾಬ್‌ನಲ್ಲಿ ರೈತ ಹೋರಾಟ ಆರಂಭವಾಗಿ ಏಳು ತಿಂಗಳು ಸಮೀಪಿಸುತ್ತಿದೆ. ಈ ಅವಧಿಯಲ್ಲಿ ಚಳವಳಿಯನ್ನು ಒಡೆಯಲು, ಹತ್ತಿಕ್ಕಲು ಕೇಂದ್ರ ಸರ್ಕಾರ ಏನೆಲ್ಲಾ ಪ್ರಯತ್ನಗಳನ್ನು ಮಾಡಿದೆ ಎಂದು ದೇಶದ ಜನರಿಗೆ ಗೊತ್ತಿದೆ. ಈಗ ಉತ್ತರ ಭಾರತದಲ್ಲಿ ಕಟಾವು ಹಂಗಾಮಿನಲ್ಲಿ ರೈತರು ಸ್ವಯಂ ಒತ್ತಡಕ್ಕೆ ಸಿಲುಕಿ ಚಳವಳಿಯಿಂದ ಹಿಂದಿರುಗುತ್ತಾರೆ ಎಂಬ 'ಆಸೆ'ಯನ್ನು ಕೇಂದ್ರ ಸರ್ಕಾರ ಇಟ್ಟುಕೊಂಡಿದೆ. ಯಾವ ಕಾರಣಕ್ಕೂ ಅಂತಹ ಬೆಳವಣಿಗೆ ನಡೆಯುವುದಿಲ್ಲ. ಹೋರಾಟದಿಂದ ಹೆಜ್ಜೆ ಹಿಂದಿಡುವ ಪ್ರಶ್ನೆಯೇ ರೈತರ ಮುಂದಿಲ್ಲ' ಎನ್ನುತ್ತಾರೆ ಸಂಯುಕ್ತ ಕಿಸಾನ್ ಮೋರ್ಚಾದ ಪ್ರಮುಖ ನಾಯಕರಲ್ಲಿ ಒಬ್ಬರಾದ ಡಾ.ದರ್ಶನ್ ಪಾಲ್.

ಕೇಂದ್ರ ಸರ್ಕಾರದ ಇಂಥ 'ಆಸೆ' ಈಡೇರದು. ರೈತ ಹೋರಾಟಕ್ಕೆ ಪೂರಕವಾಗಿ ವಿದ್ಯುತ್ ಮಂಡಳಿ ಸಿಬ್ಬಂದಿ, ಶಿಕ್ಷಣ ಇಲಾಖೆ ಮತ್ತು ಮಂಡಿ ಸಿಬ್ಬಂದಿ ನಿತ್ಯವೂ ಹೋರಾಟದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದ್ದಾರೆ ಎನ್ನುತ್ತಾರೆ ದರ್ಶನ್ ಪಾಲ್.

ಕಿಸಾನ್ ಮಹಾ ಪಂಚಾಯತ್‌ನಲ್ಲಿ ಪಾಲ್ಗೊಳ್ಳಲು ರಾಜ್ಯಕ್ಕೆ ಬಂದಿದ್ದ ಅವರೊಂದಿಗೆ 'ಪ್ರಜಾವಾಣಿ' ನಡೆಸಿದ ವಿಶೇಷ ಸಂದರ್ಶನದ ಆಯ್ದ ಭಾಗ ಇಲ್ಲಿದೆ.



ಪ್ರಜಾವಾಣಿ ಸಂದರ್ಶನ

ಡಾ.ದರ್ಶನ್ ಪಾಲ್

• **ಪ್ರಶ್ನೆ: ದೆಹಲಿಯಲ್ಲಿ ರೈತರ ಪ್ರತಿಭಟನೆ 116 ದಿನಗಳನ್ನು ಪೂರೈಸಿದರೂ ಕೇಂದ್ರ ಸರ್ಕಾರ ನಿಮ್ಮ ಬೇಡಿಕೆಗಳಿಗೆ ಸ್ಪಂದಿಸಿಲ್ಲ. ಮುಂದಿನ ದಾರಿ ಏನು?**

ಈಗ ದೆಹಲಿಯ ಗಡಿಗಳಲ್ಲಿ ಸತ್ಯಾಗ್ರಹ ಮುಂದುವರಿದಿದ್ದರೆ, ದೇಶದ ಉದ್ದಗಲಕ್ಕೆ ಚಳವಳಿ ವ್ಯಾಪಿಸುತ್ತಿದೆ. ಅದನ್ನು ಮತ್ತಷ್ಟು ಬಲಗೊಳಿಸುವುದಕ್ಕೆ ಪೂರಕವಾಗಿ ಸಂಯುಕ್ತ ಕಿಸಾನ್ ಮೋರ್ಚಾ ಕಾರ್ಯಸೂಚಿಗಳನ್ನು ರೂಪಿಸುತ್ತಿದೆ.

• **ರೈತ ಹೋರಾಟದ ಹಿಂದೆ ಕೆಲವು ರಾಜಕೀಯ ಪಕ್ಷಗಳಿವೆ ಮತ್ತು ಹಣವನ್ನೂ ಒದಗಿಸುತ್ತಿವೆ ಎಂದು ಕೇಂದ್ರ ಸರ್ಕಾರ ಆರೋಪಿಸುತ್ತಿದೆಯಲ್ಲ?**

ನಾನು ಚಳವಳಿಯ ಆರಂಭದಿಂದಲೂ ಮುಂಚೂಣಿಯಲ್ಲಿ ಇರುವವನು. ಸಿಂಘು ಗಡಿಗೆ ಬಂದ ಸಂಸದನನ್ನು ಹೊರಕ್ಕೆ ಕಳಿಸಿದೆವು. ಅರವಿಂದ ಕೇಜ್ರಿವಾಲ್ ಅವರಿಗೂ ಅವಕಾಶ ನೀಡಲಿಲ್ಲ. ಕೆಲವು ಪಕ್ಷಗಳ ಸದಸ್ಯರು ರೈತರಾಗಿ ಹೋರಾಟಕ್ಕೆ ಬಂದಿರಬಹುದು. ಆದರೆ, ರಾಜಕೀಯ ಪಕ್ಷಗಳು ಹೋರಾಟವನ್ನು ಮುನ್ನಡೆಸುತ್ತಿವೆ ಎಂದು ಹೇಳಲಾಗದು.

• **ವೈದ್ಯರಾಗಿದ್ದವರು ಈಗ ರೈತ ಹೋರಾಟ ಮುನ್ನಡೆಸುತ್ತಿದ್ದೀರಿ. ಅನುಭವ ಹೇಳಿ?**

ನಾನು ಬಾಲ್ಯದಿಂದಲೂ ಕೃಷಿಯ ಜತೆಗೆ ನಂಟು ಹೊಂದಿದ್ದವನು. ಎಂಬಿಬಿಎಸ್ ಪದವಿ ಪಡೆಯುವವರೆಗೂ ಹೊಲಗಳಲ್ಲಿ ದುಡಿಯುತ್ತಿದ್ದೆ. 2007ರವರೆಗೂ ವೈದ್ಯಕೀಯ ವೃತ್ತಿ ಜತೆಗೆ ಹೋರಾಟದಲ್ಲೂ ಇದ್ದಿದ್ದರಿಂದ ರೈತ ಸಂಘಟನೆಗಳ ಜತೆ ನಿಕಟ ಸಂಪರ್ಕ ಇತ್ತು. 2007ರಿಂದ ಮತ್ತೆ ಪಿತ್ರಾರ್ಜಿತ ಜಮೀನಿನಲ್ಲಿ ಕೃಷಿಕನಾಗಿರುವೆ. ಹೀಗಾಗಿಯೇ ಹೋರಾಟದಲ್ಲಿರುವೆ.

ಪ್ರತಿಭಟನಾ ಸ್ಥಳಗಳಿಗೆ ನೀರು, ಆಹಾರ, ಹಾಸಿಗೆ, ಹೊದಿಕೆ ಮತ್ತಿತರ ಸೌಲಭ್ಯಗಳನ್ನು ಹಲವು ಧಾರ್ಮಿಕ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಒದಗಿಸುತ್ತಿವೆ. ರೈತ ಸಂಘಟನೆಗಳ ಬಳಿ ರೈತರು ನೀಡಿದ ದೇಣಿಗೆಯೇ ಇದೆ. ಹೊರಗಿನವರಿಂದ ಬಂದ ದೇಣಿಗೆಯ ಪ್ರಸ್ತಾವಗಳನ್ನು ನಾವು ತಿರಸ್ಕರಿಸಿದ್ದೇವೆ.

• **ನಿಮ್ಮ ಹೋರಾಟ ಕಾಯ್ದೆಗಳ ವಿರುದ್ಧವೋ ಅಥವಾ ಕೇಂದ್ರ ಸರ್ಕಾರದ ವಿರುದ್ಧವೋ?**

ಬೆಂಬಲ ಬೆಲೆ ಮತ್ತು ಮೂರು ಕಾಯ್ದೆಗಳ ವಿರುದ್ಧ ನಮ್ಮ ಹೋರಾಟ. ರಾಜ್ಯಗಳ ಪಟ್ಟಿಯಲ್ಲಿರುವ ಕೃಷಿ ವಿಷಯದಲ್ಲಿ ಕೇಂದ್ರ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡುತ್ತಿದೆ. ಆ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ಬಲಹೀನಗೊಳಿಸಲು ಹೊರಟಿದೆ. ಈ ಹೋರಾಟದ ಮೂಲಕ ಒಕ್ಕೂಟ ವ್ಯವಸ್ಥೆಯ ಮೇಲಿನ ಕೇಂದ್ರದ ದಾಳಿಯನ್ನೂ ವಿರೋಧಿಸುತ್ತಿದ್ದೇವೆ.

• **ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೋರ್ಚಾ ಏನು ಮಾಡಲಿದೆ?**

ತಮಿಳುನಾಡು, ಕೇರಳ ಮತ್ತು ಪುದುಚೇರಿಯಲ್ಲಿ ಜನರು ರೈತ ಹೋರಾಟದ ಪರವಾಗಿ ಇದ್ದಾರೆ. ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ವಿರುದ್ಧ ಮತದಾರರಿಗೆ ಪತ್ರ ರವಾನಿಸಲು ಸಂಯುಕ್ತ ಕಿಸಾನ್ ಮೋರ್ಚಾ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಆದರೆ, ಯಾವುದೇ ಪಕ್ಷ ಅಥವಾ ವ್ಯಕ್ತಿಯ ಪರವಾಗಿ ಮೋರ್ಚಾ ಪ್ರಚಾರ ಮಾಡುವುದಿಲ್ಲ.

• **ಸುಪ್ರೀಂಕೋರ್ಟ್ ಮಧ್ಯಪ್ರವೇಶದ ಬಳಿಕ ಕೆಲವು ಸಂಘಟನೆಗಳು ಹೋರಾಟದಿಂದ ಹಿಂದೆ ಸರಿದಿದ್ದರಿಂದ ಹಿನ್ನಡೆ ಆಗಿಲ್ಲವೆ?**

ಹೋರಾಟದ ಭಾಗವೇ ಆಗದಿದ್ದವರು ಹಾಗೆ ಘೋಷಿಸಿಕೊಂಡಿದ್ದಾರೆ. ಕೆಲವರನ್ನು ಮೊದಲೇ ನಾವು ದೂರ ಇರಿಸಿದ್ದೆವು. ಇದರಿಂದ ಯಾವ ಹಿನ್ನಡೆಯೂ ಆಗಿಲ್ಲ. ಈಗ ರಾಕೇಶ್ ಟಿಕಾಯತ್ ಅವರಂತಹ ಪ್ರಬಲ ನಾಯಕ ನಮ್ಮನ್ನು ಸೇರಿಕೊಂಡಿದ್ದಾರೆ. ದೇಶದಲ್ಲಿ ನೂರಾರು ಸಂಘಟನೆಗಳು ಹೋರಾಟದ ಜತೆ ಕೈಜೋಡಿಸಿವೆ.

• **ಕರ್ನಾಟಕದಲ್ಲಿ ಚಳವಳಿಗೆ ಸ್ಪಂದನೆ ಹೇಗಿದೆ? ಹೋರಾಟದ ವಿಸ್ತರಣೆಗೆ ಇರುವ ಯೋಜನೆಗಳೇನು?**

ಪಂಜಾಬ್, ಹರಿಯಾಣ ಮತ್ತು ಕರ್ನಾಟಕ, ದೇಶದಲ್ಲಿ ರೈತ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳು. ಪಂಜಾಬ್ ಮತ್ತು ಹರಿಯಾಣ ಉತ್ತರದಲ್ಲಿ ಹೋರಾಟ ಮುನ್ನಡೆಸುತ್ತಿವೆ. ಕರ್ನಾಟಕ, ದಕ್ಷಿಣದಲ್ಲಿ ಹೋರಾಟವನ್ನು ಮುನ್ನಡೆಸಲಿದೆ. ಶಿವಮೊಗ್ಗದಲ್ಲಿ ನಡೆದ ರೈತ ಮಹಾ ಪಂಚಾಯತ್ ಇದಕ್ಕೆ ಸಾಕ್ಷಿ.

ಬಸವ ಕಲ್ಯಾಣದಿಂದ ಬಳ್ಳಾರಿವರೆಗೆ ಪಾದಯಾತ್ರೆ ಮುಕ್ತಾಯ

# ರೈತ ಸ್ಮಾರಕಕ್ಕೆ ಹೋರಾಟದ ಮಣ್ಣು ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ರಾಜ್ಯ ರೈತ ಸಂಘವು ಬಸವ ಕಲ್ಯಾಣದಿಂದ ಬಳ್ಳಾರಿವರೆಗೆ ಹಮ್ಮಿಕೊಂಡಿದ್ದ ಪಾದಯಾತ್ರೆ ನಗರದಲ್ಲಿ ಮಂಗಳವಾರ ಮುಕ್ತಾಯವಾಗಿದ್ದು, 26 ಗ್ರಾಮಗಳ ಮಣ್ಣನ್ನು ದೆಹಲಿಯಲ್ಲಿ ರೈತರ ಸ್ಮಾರಕ ನಿರ್ಮಾಣಕ್ಕೆ ಬಳಸುವ ಉದ್ದೇಶಕ್ಕಾಗಿ ಮುಖಂಡ ಬಿ.ಆರ್. ಪಾಟೀಲ ಅವರಿಗೆ ರೈತ ಮುಖಂಡರು ಹಸ್ತಾಂತರಿಸಿದರು.

ನಂತರ ಮಾತನಾಡಿದ ಪಾಟೀಲ, 'ರೈತರನ್ನು ಕೃಷಿ ಕ್ಷೇತ್ರದಿಂದಲೇ ಒಕ್ಕಲೆಬ್ಬಿಸುವ ಹುನ್ನಾರವನ್ನು ಕೇಂದ್ರ ಸರ್ಕಾರ ಮಾಡುತ್ತಿರುವುದು ಅಮಾನವೀಯ. ಕೃಷಿ ತಿದ್ದುಪಡಿ ಕಾಯ್ದೆಗಳ ವಿರುದ್ಧ ದೇಶವ್ಯಾಪಿ ಹೋರಾಟ ನಡೆಯುತ್ತಿದ್ದರೂ ಪ್ರಧಾನಿ ಮೋದಿ ಸ್ಪಂದಿಸದೇ ಇರುವುದು ಸರಿಯಲ್ಲ' ಎಂದು ದೂರಿದರು.

'ಪಾದಯಾತ್ರೆಯಲ್ಲಿ ಸಂಗ್ರಹಿಸಿದ ಮಣ್ಣು, ನರಗುಂದ ರೈತ ಹೋರಾಟದ ನೆನಪಿಗಾಗಿ ಅಲ್ಲಿನ ಮಣ್ಣು ಹಾಗೂ ಹಾವೇರಿಯಲ್ಲಿ ರೈತರ ಮೇಲೆ ನಡೆದ ಗೋಲಿಬಾರ್ ದುರಂತದ ನೆನಪಿಗಾಗಿ ಅಲ್ಲಿನ ಮಣ್ಣನ್ನು ಕೂಡ ದೆಹಲಿಯಲ್ಲಿ ಸ್ಮಾರಕ ನಿರ್ಮಾಣಕ್ಕೆ ಕೊಡಲಾಗುವುದು. ಮಣ್ಣನ್ನು ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರಿಗೆ ಹಸ್ತಾಂತರಿಸುವೆ' ಎಂದರು.

ರಾಜ್ಯದ ವಿವಿಧ ಜಿಲ್ಲೆಗಳ, ದೇಶದ ವಿವಿಧ ರಾಜ್ಯಗಳ ರೈತ ಮುಖಂಡರು ಪಾದಯಾತ್ರೆ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಬಸವ ಕಲ್ಯಾಣದಿಂದ ಬಳ್ಳಾರಿವರೆಗಿನ ಪಾದಯಾತ್ರೆ ಮಂಗಳವಾರ ಮುಕ್ತಾಯವಾಗಿದ್ದು, 26 ಗ್ರಾಮಗಳ ಮಣ್ಣನ್ನು ದೆಹಲಿಯಲ್ಲಿ ರೈತರ ಸ್ಮಾರಕ ನಿರ್ಮಾಣಕ್ಕೆ ಬಳಸುವ ಉದ್ದೇಶಕ್ಕಾಗಿ ಮುಖಂಡ ಬಿ.ಆರ್.ಪಾಟೀಲ ಅವರಿಗೆ ರೈತ ಮುಖಂಡರು ಹಸ್ತಾಂತರಿಸಿದರು.

# ‘ಕಾಂಗ್ರೆಸ್–ಬಿಜೆಪಿ ಒಳ ಒಪ್ಪಂದ’

**ತಮ್ಮ ಸರ್ಕಾರದ ವಿರುದ್ಧ ಇರುವ ಭ್ರಷ್ಟಾಚಾರ ಆರೋಪಗಳಾಗಲಿ ಶಬರಿಮಲೆ ವಿವಾದವಾಗಲಿ ಸತತ ಎರಡನೇ ಅವಧಿಗೆ ಅಧಿಕಾರಕ್ಕೆ ಬರುವ ಎಲ್‌ಡಿಎಫ್‌ನ ಸಾಧ್ಯತೆಗಳ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಒಳ ಒಪ್ಪಂದ ಏರ್ಪಟ್ಟಿದೆ ಎಂದು ವಿಜಯನ್ ಆರೋಪಿಸಿದ್ದಾರೆ. ‘ಪ್ರಜಾವಾಣಿ’ಯ ಅರ್ಜುನ್ ರಘುನಾಥ್ ನಡೆಸಿರುವ ಸಂದರ್ಶನದ ಆಯ್ದ ಭಾಗ ಇಲ್ಲಿದೆ..**

ಪ್ರಜಾವಾಣಿ ಸಂದರ್ಶನ

- **ಬಿಜೆಪಿಯ ಪ್ರಚಾರ ಭಾರಿ ಬಿರುಸುಗೊಂಡಿದೆ. 140 ಸದಸ್ಯ ಬಲದ ವಿಧಾನಸಭೆಯ 35 ಕ್ಷೇತ್ರಗಳಲ್ಲಿ ಗೆದ್ದರೂ ಸರ್ಕಾರ ರಚಿಸುವ ವಿಶ್ವಾಸವನ್ನು ಬಿಜೆಪಿ ಮುಖಂಡರು ವ್ಯಕ್ತಪಡಿಸಿದ್ದಾರಲ್ಲ...**

ಈಗಿರುವ ಒಂದು ಸ್ಥಾನಕ್ಕಿಂತ ಹೆಚ್ಚಿನದನ್ನು ಬಿಜೆಪಿ ಪಡೆಯುವ ಪ್ರಶ್ನೆಯೇ ಇಲ್ಲ. ಹಾಗೆ ನೋಡಿದರೆ, ಅವರ ಬೆಳವಣಿಗೆಯನ್ನು ನಾವು ತಡೆದಿದ್ದೇವೆ. 2016ರ ಚುನಾವಣೆಯಲ್ಲಿ ಆ ಪಕ್ಷದ ಮತ ಪ್ರಮಾಣ ಶೇ 14.96ರಷ್ಟಿತ್ತು. 2019ರಲ್ಲಿ ಅದು ಶೇ 14.88ಕ್ಕೆ ಇಳಿಯಿತು. 2020ರಲ್ಲಿ ಅದು ಶೇ 14.52ಕ್ಕೆ ಕುಸಿದಿದೆ. ಇರುವ ಒಂದು ಸ್ಥಾನವನ್ನಾದರೂ ಅವರು ಉಳಿಸಿಕೊಳ್ಳಬಹುದೇ ಎಂಬುದನ್ನು ಕಾಯ್ದು ನೋಡೋಣ.

- **ಕಾಂಗ್ರೆಸ್ ಅನ್ನು ಮುಗಿಸಿಬಿಡಬೇಕು ಎಂಬುದು ಬಿಜೆಪಿಯ ಗುರಿ. ಇದು ಕೇರಳದಲ್ಲಿ ಸಿಪಿಎಂ ನೇತೃತ್ವದ ಎಲ್‌ಡಿಎಫ್‌ಗೆ ಈ ಚುನಾವಣೆಯಲ್ಲಿ ನೆರವಾಗಲಿದೆಯೇ?**

ನಿಜವಾದ ಪ್ರಶ್ನೆ ಏನೆಂದರೆ, ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಒಳ ಒಪ್ಪಂದ ಇದೆಯೇ ಎಂಬುದಾಗಿದೆ. ಗೆದ್ದರೆ ಬಿಜೆಪಿ ಜತೆಗೆ ಹೋಗುವುದಾಗಿ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರೇ ಹೇಳುತ್ತಿದ್ದಾರೆ. ಸೋತರೆ ಬಿಜೆಪಿ ಜತೆ ಹೋಗುವುದಾಗಿ ಕಾಂಗ್ರೆಸ್‌ನ ರಾಜ್ಯದ ನಾಯಕರು ಹೇಳುತ್ತಿದ್ದಾರೆ. ನಮ್ಮನ್ನು ಸೋಲಿಸುವುದಕ್ಕಾಗಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಒಳ ಒಪ್ಪಂದ ಆಗಿದೆ ಎಂಬುದರ ಎಲ್ಲ ಸೂಚನೆಗಳೂ ಇವೆ.

- **ಆದರೆ, ಇತ್ತೀಚಿನ ನಿಮ್ಮ ಪ್ರಚಾರ ಭಾಷಣಗಳಲ್ಲಿ ಬಿಜೆಪಿಯ ಟೀಕೆಯು ಮೃದುವಾಗಿದೆ. ಬಿಜೆಪಿ ಜತೆಗೆ ನೀವು ಒಪ್ಪಂದ ಮಾಡಿಕೊಂಡ ಕಾರಣಕ್ಕೆ ಹೀಗಾಗಿದೆ ಎಂದು ಕಾಂಗ್ರೆಸ್ ಮುಖಂಡರು ಆರೋಪಿಸುತ್ತಿದ್ದಾರೆ...**

ಕೋಮುವಾದವೇ ಮೈವೆತ್ತಂತಹ ವ್ಯಕ್ತಿ ಅಮಿತ್ ಶಾ ಎಂದು ಇತ್ತೀಚೆಗಷ್ಟೇ ಹೇಳಿದ್ದೇನೆ. ಬಿಜೆಪಿ ಆಳ್ವಿಕೆಯ ಅವಧಿಯಲ್ಲಿ ಕಳ್ಳ ಸಾಗಾಟವು ಹೇಗೆ ಹೆಚ್ಚಳವಾಗಿದೆ ಎಂಬುದನ್ನೂ ತೋರಿಸಿಕೊಟ್ಟಿದ್ದೇನೆ. ಐದು ವರ್ಷಗಳ ಅವಧಿಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಸಂಘ ಪರಿವಾರದ ವಿರುದ್ಧ ಎಷ್ಟೊಂದು ಮಾತನಾಡಿದ್ದೇನೆ ಎಂದರೆ ನನಗೆ ಜೀವ ಬೆದರಿಕೆಗಳೂ ಬಂದಿವೆ. ಹೀಗಿರುವಾಗ ನಾನು ಮೃದುವಾಗಿದ್ದೇನೆ ಎಂಬ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ?

- **ನಿಮ್ಮ ಕಚೇರಿಯ ಜತೆ ತಳಕು ಹಾಕಿಕೊಂಡಿರುವ ಚಿನ್ನ ಕಳ್ಳಸಾಗಾಟದ ಆರೋಪಗಳು ಸರ್ಕಾರದ ವರ್ಚಸ್ಸನ್ನು ಬಾಧಿಸಲಿದೆಯೇ?**

ಪ್ರಕರಣದ ಜತೆಗೆ ನನ್ನ ಕಚೇರಿಯನ್ನು ಸೇರಿಸಿಬಿಡುವ ಯತ್ನ ನಡೆದಿದೆ. ಆದರೆ, ಮೊದಲಿಗೆ ಈ ಆರೋಪ ಮಾಡಿದ ವ್ಯಕ್ತಿಯೇ ಈಗ ಹಿಂದೆ ಸರಿದಿದ್ದಾರೆ. ಅವರು ಬಿಜೆಪಿಯ ನಾಯಕ ಎಂಬುದನ್ನೂ ನಾವು ಮರೆಯಬಾರದು. ಹಾಗಾಗಿ, ಈ ವಿಚಾರವು ನಮ್ಮ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ನಾನು ಭಾವಿಸಿಲ್ಲ.

- **ಶಬರಿಮಲೆಗೆ ಎಲ್ಲ ವಯಸ್ಸಿನ ಮಹಿಳೆಯರ ಪ್ರವೇಶದಂತಹ ವಿಚಾರಗಳಲ್ಲಿ ನೀವು ಕಠಿಣ ನಿಲುವು ತಳೆದಿದ್ದೀರಿ ಎಂಬ ಆರೋಪ ಇದೆ. ಇದು ನಿಮಗೆ ಪ್ರತಿಕೂಲ ಆಗದೇ?**

ಸಂವಿಧಾನವನ್ನು ಎತ್ತಿ ಹಿಡಿಯುತ್ತೇವೆ ಎಂದು ಪ್ರಮಾಣ ಸ್ವೀಕರಿಸಿ ಅಧಿಕಾರಕ್ಕೆ ಬಂದವರು ನಾವು. ದೇಶದಲ್ಲಿರುವ ಕಾನೂನುಗಳು ಸಂವಿಧಾನಕ್ಕೆ ಅನುಗುಣವಾಗಿ ಇದೆಯೇ ಎಂಬುದನ್ನು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸುತ್ತದೆ. ಅಸಾಂವಿಧಾನಿಕ ಎಂದು ಒಂದು ನಿಯಮವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದರೆ ಅದನ್ನು ಪಾಲಿಸುವುದು ರಾಜ್ಯ ಸರ್ಕಾರದ ಸಾಂವಿಧಾನಿಕ ಕರ್ತವ್ಯ.

- **ಕೋವಿಡ್–19 ಎರಡನೇ ಅಲೆಯನ್ನು ನೀವು ನಿಭಾಯಿಸಿದ ರೀತಿಯ ಬಗ್ಗೆ ಟೀಕೆಗಳಿವೆಯಲ್ಲ...**

ಸಂಖ್ಯೆಗಳನ್ನು ಗಮನಿಸಿದರೆ, ಹೊಸ ಪ್ರಕರಣಗಳ ಸಂಖ್ಯೆ ತೀವ್ರವಾಗಿ ಕಡಿಮೆ ಆಗಿರುವುದನ್ನು ಗುರುತಿಸಬಹುದು. ಐದು ತಿಂಗಳ ಹಿಂದೆ ಇದ್ದುದಕ್ಕಿಂತ ಉತ್ತಮ ಸ್ಥಿತಿಯಲ್ಲಿ ಇಂದು ನಾವು ಇದ್ದೇವೆ. ಕಳೆದ ಒಂದೇ ವಾರದಲ್ಲಿ ಪ್ರಕರಣಗಳ ಪ್ರಮಾಣ ಶೇ 15ರಷ್ಟು ಕಡಿಮೆ ಆಗಿದೆ.

- **ಹಾಗಿದ್ದರೆ ಗಡಿ ಭಾಗಗಳಲ್ಲಿ ಕರ್ನಾಟಕವು ಪ್ರಯಾಣ ನಿರ್ಬಂಧ ಹೇರಿದ್ದು ಏಕೆ? ಕಾಸರಗೋಡಿನ ಜನರು ವಿವಿಧ ಸೌಲಭ್ಯಗಳಿಗಾಗಿ ಮಂಗಳೂರಿಗೆ ಏಕೆ ಹೋಗಬೇಕು?**

ದುರಂತಗಳ ಸಂದರ್ಭದಲ್ಲಿ ಮೊದಲಿಗೆ ರಾಜ್ಯದ ಜನರ ಯೋಗಕ್ಷೇಮ ನೋಡಿಕೊಳ್ಳುವುದು ಯಾವುದೇ ಸರ್ಕಾರದ ಸಹಜ ನಡೆ. ಇಡೀ ಜಗತ್ತನ್ನು ಕಾಡಿದ ಕೋವಿಡ್‌ನಂತಹ ಸಾಂಕ್ರಾಮಿಕದ ಸಂದರ್ಭದಲ್ಲಿ ಎಲ್ಲರೂ ಜತೆಯಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇದಕ್ಕಿಂತ ಹೆಚ್ಚೇನನ್ನೂ ಈಗ ಹೇಳುವುದಿಲ್ಲ. ಕಾಸರಗೋಡು ವಿಚಾರಕ್ಕೆ ಬಂದರೆ, ಚಾರಿತ್ರಿಕವಾಗಿಯೇ ಇದು ದಕ್ಷಿಣ ಕನ್ನಡ ಭಾಗ.

ವಿವಿಧ ಕಾರಣಗಳಿಗಾಗಿ ಕಾಸರಗೋಡಿನ ಜನರು ಮಂಗಳೂರಿಗೆ ಹೋಗುವುದು ಸಹಜ. ಇದನ್ನು ನಾವು ನೆನಪಿನಲ್ಲಿ ಇರಿಸಿಕೊಳ್ಳಬೇಕು. ಕಳೆದ ಕೆಲವು ವರ್ಷಗಳಲ್ಲಿ ಕಾಸರಗೋಡಿನ ಅಭಿವೃದ್ಧಿಯಲ್ಲಿ ದಾಪುಗಾಲು ಇರಿಸಲಾಗಿದೆ. ಹೆದ್ದಾರಿಗಳು, ಆಸ್ಪತ್ರೆಗಳು, ಶಾಲೆಗಳು ಇತ್ಯಾದಿ ನಿರ್ಮಾಣ ಆಗಿವೆ. ಮುಂದಿನ ಐದು ವರ್ಷಗಳಲ್ಲಿ ಕಾಸರಗೋಡನ್ನು ಅಭಿವೃದ್ಧಿ ಹೊಂದಿದ ಪ್ರದೇಶವಾಗಿಸುವ ಬಗ್ಗೆ ಯೋಚಿಸುತ್ತಿದ್ದೇವೆ.

ಬಿಜೆಪಿ ಸೇರುವಂತೆ ಒತ್ತಡ, ಅಧಿಕಾರಿಗಳಿಂದ ಚಿತ್ರಹಿಂಸೆ: ಅಖಿಲ್ ಗೊಗೊಯ್

# ‘ಸಿಎಎ ವಿರೋಧಿ ಹೋರಾಟ ತೊರೆದರೆ ಸಚಿವ ಸ್ಥಾನದ ಆಮಿಷ’

**ಗುವಾಹಟಿ:** 2019ರಲ್ಲಿ ತನಿಖಾಧಿಕಾರಿಗಳು ತಮಗೆ ಚಿತ್ರಹಿಂಸೆ ನೀಡಿದ್ದಾರೆ ಎಂದು ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ವಿರೋಧಿ ಕಾರ್ಯಕರ್ತ, ಈಗ ನ್ಯಾಯಾಂಗ ಬಂಧನದಲ್ಲಿ ಇರುವ ಅಖಿಲ್ ಗೊಗೊಯ್ ಅವರು ಹೇಳಿದ್ದಾರೆ. ನ್ಯಾಯಾಂಗ ಬಂಧನದಿಂದಲೇ ಅವರು ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಸಿಎಎ ಮತ್ತು ದೊಡ್ಡ ಅಣೆಕಟ್ಟೆಗಳ ವಿರುದ್ಧದ ಹೋರಾಟ ಕೈಬಿಡುವಂತೆ ಅವರು ಬೆದರಿಸಿದ್ದರು; ಹೋರಾಟ ಕೈಬಿಟ್ಟು ಆರ್‌ಎಸ್‌ಎಸ್–ಬಿಜೆಪಿ ಸೇರಿದರೆ ಸಚಿವನನ್ನಾಗಿ ಮಾಡಲಾಗುವುದು ಎಂದು ಆಮಿಷ ಒಡ್ಡಿದ್ದರು ಎಂದು ಅಖಿಲ್ ಮಂಗಳವಾರ ಆರೋಪಿಸಿದ್ದಾರೆ.

ಅವರು ಹೊಸದಾಗಿ ಸ್ಥಾಪಿಸಿರುವ ರಾಯ್‌ಜೊರ್ ದಳ್, ಅಸ್ಸಾಂನ 126 ಕ್ಷೇತ್ರಗಳ ಪೈಕಿ 32ರಲ್ಲಿ ಸ್ಪರ್ಧಿಸುತ್ತಿದೆ.

‘ಸಿಎಎ ವಿರುದ್ಧ ಹಿಂಸಾತ್ಮಕ ಪ್ರತಿಭಟನೆ ನಡೆಯುತ್ತಿದ್ದ 2019ರ ಡಿಸೆಂಬರ್ 17ರ ರಾತ್ರಿ ನನ್ನನ್ನು ಬಲವಂತವಾಗಿ ವಿಮಾನ ಮೂಲಕ ದೆಹಲಿಗೆ ಕರೆದೊಯ್ಯಲಾಗಿತ್ತು. ಡಿಸೆಂಬರ್ 18ರಂದು ಬೆಳಿಗ್ಗೆ 9 ಗಂಟೆಗೆ ತನಿಖೆ ಆರಂಭಿಸಲಾಗಿತ್ತು. ಈ ತನಿಖೆ ಎಂದರೆ ರಾಜಕೀಯ ಚರ್ಚೆಯೇ ಆಗಿತ್ತು. ಸಿಎಎಯನ್ನು ವಿರೋಧಿಸುವುದು ಎಂದರೆ ಮುಸ್ಲಿಮರ ಜತೆ ಸೇರಿದಂತೆ. ಇದು ದೇಶದ್ರೋಹ ಎಂದು ನನಗೆ ಹೇಳಲಾಯಿತು’ ಎಂದು ಜೈಲಿನಿಂದ ಬಿಡುಗಡೆ ಮಾಡಿದ ಪತ್ರದಲ್ಲಿ ಅಖಿಲ್ ಆಪಾದಿಸಿದ್ದಾರೆ. ಅವರ ವಕೀಲ ಈ ಪತ್ರವನ್ನು ಬಹಿರಂಗಪಡಿಸಿದ್ದಾರೆ.

‘ಆರ್‌ಎಸ್‌ಎಸ್ ಸೇರಿದರೆ ತಕ್ಷಣ ಜಾಮೀನು ನೀಡಲಾಗುವುದು. ಅಸ್ಸಾಂನಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರ ಆಗುತ್ತಿರುವುದನ್ನು ತಡೆಯಬೇಕು ಎಂದು ಅವರು ನನಗೆ ಹೇಳಿದರು. ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಮತಾಂಧ ಸಿದ್ಧಾಂತದ ವಿರುದ್ಧ ಮಾತನಾಡಿದಾಗ ನೇರವಾಗಿ ಬಿಜೆಪಿ ಸೇರುವಂತೆ ಹೇಳಿದರು. ಆಗ ಖಾಲಿ ಇದ್ದ ಒಂದು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಕೊಡುವುದಾಗಿ ಹೇಳಿದರು. ಬಳಿಕ ಸಚಿವನನ್ನಾಗಿ ಮಾಡುವ ಭರವಸೆಯನ್ನೂ ಕೊಟ್ಟರು. ಆದರೆ ಈ ಎಲ್ಲ ಕೊಡುಗೆಗಳನ್ನು ನಾನು ತಿರಸ್ಕರಿಸಿದೆ. ಜನವಿರೋಧಿ ಸಿಎಎ ಮತ್ತು ದೊಡ್ಡ ಅಣೆಕಟ್ಟೆಗಳ ವಿರುದ್ಧದ ಹೋರಾಟ ಮುಂದುವರಿಸುವುದಾಗಿ ಹೇಳಿದೆ’ ಎಂದು ಅಖಿಲ್ ಅವರು ಪತ್ರದಲ್ಲಿ ವಿವರಿಸಿದ್ದಾರೆ.

ಅಖಿಲ್ ಅವರ ವಿರುದ್ಧ ದೇಶದ್ರೋಹ ಪ್ರಕರಣವನ್ನು ದಾಖಲಿಸಲಾಗಿದೆ. ಅವರಿಗೆ ನಕ್ಸಲರ ಜತೆಗೆ ನಂಟು ಇದೆ ಎಂದು ರಾಷ್ಟ್ರೀಯ ತನಿಖಾ ತಂಡ (ಎನ್‌ಐಎ) ಸಲ್ಲಿಸಿರುವ ಆರೋಪಪಟ್ಟಿಯಲ್ಲಿ ಹೇಳಲಾಗಿದೆ.

**ನನಗೆ ಜೀವ ಬೆದರಿಕೆ ಮತ್ತು 10 ವರ್ಷ ಜೈಲಿನಲ್ಲಿ ಕೊಳೆಸುವ ಬೆದರಿಕೆ ಒಡ್ಡಲಾಗಿದೆ. ನನ್ನ ಜಾಮೀನು ಅರ್ಜಿ ಮತ್ತೆ ಮತ್ತೆ ತಿರಸ್ಕೃತಗೊಂಡಿದೆ. ನಾನು ಜೈಲಿನಲ್ಲಿ ನರಳುತ್ತಿದ್ದೇನೆ**

**ಅಖಿಲ್ ಗೊಗೊಯ್,** ಸಿಎಎ ವಿರೋಧಿ ಹೋರಾಟಗಾರ

## ನುಡಿ–ಕಿಡಿ

ಸರ್ಕಾರಿ ಸ್ವಾಮ್ಯದ ಎಲ್ಲ ಸಂಸ್ಥೆಗಳನ್ನು ಅವರು (ಬಿಜೆಪಿ ಸರ್ಕಾರ) ಮಾರಾಟ ಮಾಡುತ್ತಿದ್ದಾರೆ. ನರೇಂದ್ರ ಮೋದಿ ಅವರ ಸುಳ್ಳುಗಳು ಮತ್ತು ಬಿಜೆಪಿಯ ವಂಚನೆಯ ಒಂದು ಕಾರ್ಖಾನೆ ಮಾತ್ರ ಕೊನೆಗೆ ಉಳಿಯಲಿದೆ

**ಮಮತಾ ಬ್ಯಾನರ್ಜಿ,** ಟಿಎಂಸಿ ಮುಖ್ಯಸ್ಥೆ



ಸೋದರಳಿಯನನ್ನು ಮುಂದಿನ ಮುಖ್ಯಮಂತ್ರಿ ಮಾಡುವುದಷ್ಟೇ ದೀದಿಯ (ಮಮತಾ ಬ್ಯಾನರ್ಜಿ) ಆಸಕ್ತಿ. ಸೋದರಳಿಯ ಮುಖ್ಯಮಂತ್ರಿ ಆಗಬೇಕೇ? ಬೇಡ ಎಂದಿದ್ದರೆ ಬಿಜೆಪಿಗೆ ಮತ ಹಾಕಿ

**ಅಮಿತ್ ಶಾ,** ಬಿಜೆಪಿ ನಾಯಕ

ತಮಿಳುನಾಡು ಚುನಾವಣೆಯಲ್ಲಿ ಡಿಎಂಕೆ ಗೆದ್ದರೆ ಮತ್ತೆ ಅರಾಜಕತೆ ತಲೆದೋರಬಹುದು ಎಂಬ ಭೀತಿ ಜನರಲ್ಲಿ ಇದೆ. ಹಾಗಾಗಿ, ಸ್ಟಾಲಿನ್ ಮುಖ್ಯಮಂತ್ರಿ ಆಗಲು ಜನರು ಅವಕಾಶ ಕೊಡುವುದಿಲ್ಲ

**ಒ. ಪನ್ನೀರಸೆಲ್ವಂ,** ಎಐಎಡಿಎಂಕೆ ಮುಖಂಡ

ಎಡರಂಗವೇ ನಿಜವಾದ ಪರ್ಯಾಯ ಎಂಬುದು ಅವರಿಗೆ ತಿಳಿದಿದೆ. ಕೇಂದ್ರದ ಸಂಸ್ಥೆಗಳ ದುರ್ಬಳಕೆ ಮಾಡಿ ಎಲ್‌ಡಿಎಫ್ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸಲಾಗಿದೆ. ಐದು ವರ್ಷ ಅವರು ಈ ಯತ್ನದಲ್ಲಿ ವಿಫಲರಾಗಿದ್ದಾರೆ. ಮತ್ತೆ ಅವರು ಯತ್ನಿಸುತ್ತಾರೆ, ಅವರನ್ನು ನೀವು ವಿಫಲಗೊಳಿಸಬೇಕು

**ಸೀತಾರಾಮ್ ಯೆಚೂರಿ,** ಸಿಪಿಎಂ ಪ್ರಧಾನ ಕಾರ್ಯದರ್ಶಿ

# ಉಪಚುನಾವಣೆ: ವರಿಷ್ಠರ ಮನವೊಲಿಕೆ ಕಸರತ್ತು

• ಸಿದ್ದಯ್ಯ ಹಿರೇಮಠ

**ನವದೆಹಲಿ:** ರಾಜ್ಯದ ಬೆಳಗಾವಿ ಲೋಕಸಭೆ ಮತ್ತು ಬಸವಕಲ್ಯಾಣ ವಿಧಾನಸಭೆ ಕ್ಷೇತ್ರಗಳಿಗೆ ಏಪ್ರಿಲ್ 17ರಂದು ನಿಗದಿಯಾಗಿರುವ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಕಣಕ್ಕಿಳಿಯಬೇಕೆಂಬ ಆಕಾಂಕ್ಷಿಗಳ ದಂಡು ದೆಹಲಿಯಲ್ಲಿ ಬೀಡುಬಿಟ್ಟಿದೆ.

‘ಪುತ್ರ ಬಿ.ವೈ. ವಿಜಯೇಂದ್ರ ಸ್ಪರ್ಧಾಕಾಂಕ್ಷಿಯಲ್ಲ’ ಎಂದು ಸ್ವತಃ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ ನಂತರ ಬಸವಕಲ್ಯಾಣ ಕ್ಷೇತ್ರದಿಂದ ಸ್ಪರ್ಧೆಗಿಳಿಯಲು ಬಯಸುವವರ ದಂಡೇ ಸೃಷ್ಟಿಯಾಗಿದ್ದು, ಬಹುತೇಕರು ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ರಾಷ್ಟ್ರ ರಾಜಧಾನಿಗೆ ದೌಡಾಯಿಸಿದ್ದಾರೆ.

ಮಾಜಿ ಸಚಿವ, ದಿವಂಗತ ಗುರುಪಾದಪ್ಪ ನಾಗಮಾರಪಳ್ಳಿ ಅವರ ಪುತ್ರ ಸೂರ್ಯಕಾಂತ ಹಾಗೂ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಅವರ ನಡುವೆ ಟಿಕೆಟ್‌ಗಾಗಿ ತೀವ್ರ ಸ್ಪರ್ಧೆ ಏರ್ಪಟ್ಟಿದ್ದು, ಹೈಕಮಾಂಡ್ ಯಾರಿಗೆ ಮಣೆ ಹಾಕಲಿದೆ ಎಂಬುದೇ ಕುತೂಹಲದ ಸಂಗತಿಯಾಗಿದೆ.

ಸೂರ್ಯಕಾಂತ ನಾಗಮಾರಪಳ್ಳಿ ಅವರು ಮಂಗಳವಾರ ಕೇಂದ್ರದ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಅವರನ್ನು ಭೇಟಿ ಮಾಡಿ ಸ್ಪರ್ಧೆಗೆ ಅವಕಾಶ ಒದಗಿಸುವಂತೆ ಕೋರಿದ್ದಾರೆ.

ಕ್ಷೇತ್ರದಲ್ಲಿನ ಜಿಲ್ಲಾ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು ಸೇರಿದಂತೆ ಅನೇಕ ಕಾರ್ಯಕರ್ತರೂ ಅರ್ಜಿ ಸಲ್ಲಿಸಿ, ಉಪಚುನಾವಣೆಯ ಉಮೇದುವಾರಿಕೆಯ ಹೊಣೆ ದೊರೆಯಬಹುದೆಂಬ ಉಮೇದಿಯೊಂದಿಗೆ ವರಿಷ್ಠರ ಭೇಟಿಗಾಗಿ ಎಡತಾಕುತ್ತಿದ್ದಾರೆ.

ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಸುರೇಶ ಅಂಗಡಿ ಅವರ ನಿಧನದಿಂದ ತೆರವಾಗಿರುವ ಬೆಳಗಾವಿ ಲೋಕಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸಿರುವ ಐವರು ಆಕಾಂಕ್ಷಿಗಳ ಪಟ್ಟಿಯನ್ನು ಪಕ್ಷದ ರಾಜ್ಯ ಕೋರ್ ಕಮಿಟಿ ಈಗಾಗಲೇ ಹೈಕಮಾಂಡ್‌ಗೆ ರವಾನಿಸಿದೆ.

ಸಚಿವ ಜಗದೀಶ್ ಶೆಟ್ಟರ್ ಸೊಸೆಯಾಗಿರುವ ಅಂಗಡಿ ಅವರ ಪುತ್ರಿ ಶ್ರದ್ಧಾ, ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಉಮೇಶ್ ಕತ್ತಿ ಸೋದರ, ಮಾಜಿ ಸಂಸದ ರಮೇಶ್ ಕತ್ತಿ, ಸಂಘ ಪರಿವಾರದ ಹಿನ್ನೆಲೆಯ ವೈದ್ಯ ಗಿರೀಶ್ ಸೋನ್ವಾಲ್ಕರ್, ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ ಹಾಗೂ ಡಾ.ರವಿ ಪಾಟೀಲ ಅವರ ಹೆಸರುಗಳು ಪಟ್ಟಿಯಲ್ಲಿವೆ. ವರಿಷ್ಠರು ಈ ಪಟ್ಟಿಯನ್ನು ಪರಿಗಣಿಸುವರೇ ಅಥವಾ ತಮ್ಮಿಚ್ಛೆಯ ಪ್ರತ್ಯೇಕ ಅಭ್ಯರ್ಥಿಯನ್ನೇ ಘೋಷಿಸುವರೇ ಎಂಬುದು ವಿಶೇಷ.

ಅಮಿತ್ ಶಾ ಆಹ್ವಾನದ ಮೇರೆಗೆ ದೆಹಲಿಗೆ ಬಂದಿರುವ ಡಾ.ಗಿರೀಶ್ ಸೋನ್ವಾಲ್ಕರ್ ಸಂಜೆ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದು, ಟಿಕೆಟ್ ದೊರೆಯಲಿದೆ ಎಂಬ ಆತ್ಮವಿಶ್ವಾಸದಲ್ಲಿದ್ದಾರೆ.

ಕಳೆದ ಮೂರು ದಿನಗಳಿಂದ ಇಲ್ಲೇ ಬೀಡುಬಿಟ್ಟಿರುವ ರಮೇಶ್ ಕತ್ತಿ, ಸೋದರ ಉಮೇಶ ಜೊತೆ ಅರುಣ್ ಸಿಂಗ್, ಅಮಿತ್ ಶಾ ಸೇರಿದಂತೆ ಇತರ ವರಿಷ್ಠರನ್ನು ಮಂಗಳವಾರ ಭೇಟಿ ಮಾಡಿ ಆಕಾಂಕ್ಷೆಯನ್ನು ಹೊರಹಾಕಿದ್ದಾರೆ. 2019ರ ಲೋಕಸಭೆ ಚುನಾವಣೆಯಲ್ಲಿ ಚಿಕ್ಕೋಡಿ ಕ್ಷೇತ್ರದಿಂದ ಸ್ಪರ್ಧೆಗೆ ಅವಕಾಶ ದೊರೆಯದೆ ವಂಚಿತರಾಗಿದ್ದಾಗಿ ಮನವರಿಕೆ ಮಾಡಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಆಕಾಂಕ್ಷಿಗಳೊಂದಿಗೆ ಕೊನೆಯ ಹಂತದ ಮಾತುಕತೆಯಲ್ಲಿ ತೊಡಗಿರುವ ವರಿಷ್ಠರು ಮಾರ್ಚ್ 25 ಅಥವಾ 26ರಂದು ಟಿಕೆಟ್ ಘೋಷಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

## ಬಸವ ಕಲ್ಯಾಣ: ‘ಮೌನಿ ಬಾಬಾ’ ನಾಮಪತ್ರ

**ಬಸವಕಲ್ಯಾಣ:** ಈ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಮೊದಲ ದಿನ ಮಂಗಳವಾರ ಒಂದು ನಾಮಪತ್ರ ಸಲ್ಲಿಕೆಯಾಗಿದೆ. ಬೆಂಗಳೂರಿನವರಾದ ಪರಿಸರವಾದಿ ಅಂಬ್ರೋಸ್ ಡಿ ಮೆಲ್ಲೋ ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣಾಧಿಕಾರಿ ಭುವನೇಶ ಪಾಟೀಲ ಅವರಿಗೆ ನಾಮಪತ್ರ ಸಲ್ಲಿಸಿದರು.

ಅಂಬ್ರೋಸ್ ಡಿ ಮೆಲ್ಲೋ ಅವರ ಬಳಿ ಅಲ್ಪ ಪ್ರಮಾಣದ ನಗದು ಬಿಟ್ಟರೆ ಬೇರೆ ಆಸ್ತಿ ಇಲ್ಲ. ಮೌನವ್ರತ ಪಾಲಿಸುತ್ತಿದ್ದು, ತಮ್ಮ ವಿಚಾರಗಳನ್ನು ಸ್ಲೇಟಿನಲ್ಲಿ ಬರೆದು ತಿಳಿಸುತ್ತಾರೆ. ಆದ್ದರಿಂದ ಇವರನ್ನು ‘ಮೌನಿ ಬಾಬಾ’ ಎಂದೇ ಗುರುತಿಸಲಾಗುತ್ತದೆ.

# ಅಸ್ಸಾಂಗೆ ಬಿಜೆಪಿ ಪ್ರಣಾಳಿಕೆ ಪ್ರಕಟ

**ಗುವಾಹಟಿ:** ಅಸ್ಸಾಂ ವಿಧಾನಸಭಾ ಚುನಾವಣೆಗೆ ಬಿಜೆಪಿಯ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆ ಮಾಡಲಾಗಿದ್ದು, ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಮೂಲಕ ನುಸುಳುಕೋರರನ್ನು ಪತ್ತೆ ಮಾಡಲಾಗುವುದು ಎಂದು ಭರವಸೆ ನೀಡಲಾಗಿದೆ. ಆದರೆ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಬಗ್ಗೆ ಯಾವುದೇ ಉಲ್ಲೇಖ ಮಾಡಿಲ್ಲ.



ಅಸ್ಸಾಂ ವಿಧಾನಸಭಾ ಚುನಾವಣೆಗೆ ಬಿಜೆಪಿಯ ಪ್ರಣಾಳಿಕೆಯನ್ನು ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಮಂಗಳವಾರ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು. ಪ್ರವಾಹ ನಿಯಂತ್ರಣ, ಅಸ್ಸಾಂನ ರಾಜಕೀಯ ಹಕ್ಕುಗಳ ರಕ್ಷಣೆಗೆಗಾಗಿ ಮರುವಿಂಗಡಣೆ ಪ್ರಕ್ರಿಯೆ, ಎನ್‌ಆರ್‌ಸಿಗೆ ತಿದ್ದುಪಡಿ, ಎರಡು ಲಕ್ಷ ಸರ್ಕಾರಿ ಹಾಗೂ ಎಂಟು ಲಕ್ಷ ಖಾಸಗಿ ಉದ್ಯೋಗ ಸೃಷ್ಟಿ, 30 ಲಕ್ಷ ಅರ್ಹ ಕುಟುಂಬಗಳಿಗೆ ₹3000 ನಗದು, ನಾಮಘರ್‌ಗಳಿಗೆ (ವೈಷ್ಣವ ಪ್ರಾರ್ಥನಾ ಮಂದಿರ)ತಲಾ ₹2.5 ಲಕ್ಷ ನೆರವು, ಮಕ್ಕಳ ಅಭಿವೃದ್ಧಿಗೆ ವಿಶೇಷ ಯೋಜನೆ, ಭೂರಹಿತರಿಗೆ ಭೂಮಿಯ ಹಕ್ಕು ಹಾಗೂ ಆತ್ಮನಿರ್ಭರ ಅಸ್ಸಾಂ ನಿರ್ಮಾಣಕ್ಕಾಗಿ ಉದ್ಯಮಶೀಲತೆಗೆ ಪ್ರೋತ್ಸಾಹ ನೀಡುವ ‘ಸಂಕಲ್ಪ’ಗಳನ್ನು ಘೋಷಿಸಲಾಗಿದೆ.

ಸಿಎಎ ಬಗ್ಗೆ ಪ್ರಣಾಳಿಕೆಯಲ್ಲಿ ಯಾವುದೇ ಉಲ್ಲೇಖವಿಲ್ಲ. ಈ ಕುರಿತು ಮಾಧ್ಯಮಪ್ರತಿನಿಧಿಗಳ ಪ್ರಶ್ನೆಗೆ ಉತ್ತರಿಸಿದ ನಡ್ಡಾ, ‘ಸಿಎಎಯನ್ನು ಈಗಾಗಲೇ ಸಂಸತ್ತಿನಲ್ಲಿ ಅಂಗೀಕರಿಸಿಯಾಗಿದೆ. ಅದರ ಜಾರಿಗೆ ಬಿಜೆಪಿ ಬದ್ಧವಾಗಿದೆ’ ಎಂದರು.

ಪಶ್ಚಿಮ ಬಂಗಾಳದಲ್ಲಿ ಮಾಡಿರುವಂತೆ, ಅಸ್ಸಾಂನಲ್ಲೂ ಪ್ರಣಾಳಿಕೆಯಲ್ಲಿ ಸಿಎಎ ಸೇರ್ಪಡೆ ಮಾಡುವಂತೆ ಬಿಜೆಪಿಗೆ ಕಾಂಗ್ರೆಸ್ ಸೋಮವಾರ ಸವಾಲು ಹಾಕಿತ್ತು.

# ಅಧಿಕಾರಕ್ಕೆ ಬಂದರೆ ‘ನ್ಯಾಯ್’ ಜಾರಿ: ರಾಹುಲ್

**ಕೋಟಯಂ (ಕೇರಳ) (ಪಿಟಿಐ):** ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟವು ಅಧಿಕಾರಕ್ಕೆ ಬಂದರೆ, ಕನಿಷ್ಠ ಆದಾಯ ಖಾತ್ರಿಪಡಿಸುವ ‘ನ್ಯಾಯ್’ ಯೋಜನೆಯನ್ನು ಜಾರಿ ಮಾಡುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಭರವಸೆ ನೀಡಿದ್ದಾರೆ.

ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಅವರು ಕಳೆದ 50 ವರ್ಷಗಳಿಂದ ಪ್ರತಿನಿಧಿಸುತ್ತಿರುವ ಪುದುಪ್ಪಳ್ಳಿ ವಿಧಾನಸಭಾ ಕ್ಷೇತ್ರದ ಮಣ್ಣಾರ್‌ಕಾಡ್‌ನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ದಕ್ಷಿಣದ ರಾಜ್ಯ ಕೇರಳದಲ್ಲಿ ನಮ್ಮ ಹೊಸ ಆಲೋಚನೆಯನ್ನು ಪರೀಕ್ಷಿಸುತ್ತೇವೆ. ವರ್ಷಕ್ಕೆ ₹72,000 ಮೊತ್ತವು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹೋಗುತ್ತದೆ. ಯೋಜನೆ ಜಾರಿಯಲ್ಲಿ ನನ್ನ ಸ್ವಾರ್ಥವೂ ಇದೆ’ ಎಂದು ಹೇಳಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಜನ್ಮತಳೆದ ನ್ಯಾಯ್ ಯೋಜನೆಯನ್ನು ನಿರ್ಣಾಯಕ ಎಂದು ಕರೆದಿರುವ ರಾಹುಲ್, ಬಡತನ ನಿರ್ಮೂಲನೆಯಲ್ಲಿ ಇದು ಆರಂಭಿಕ ಕೊಡುಗೆ ನೀಡುತ್ತದೆ ಎಂದು ವಿವರಿಸಿದರು. ಪಕ್ಷದ ಪ್ರಣಾಳಿಕೆಯಲ್ಲಿ ನ್ಯಾಯ್ ಪ್ರಸ್ತಾಪಿಸಿದ್ದರೂ ಚುನಾವಣೆಯಲ್ಲಿ ಗೆಲ್ಲಲು ಕಾಂಗ್ರೆಸ್‌ಗೆ ಸಾಧ್ಯವಾಗಿರಲಿಲ್ಲ.

ಕೇರಳದಲ್ಲಿ ಈ ಯೋಜನೆ ಫಲ ನೀಡಿದಲ್ಲಿ, ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಯೋಜನೆ ಜಾರಿಗೊಳಿಸುವ ಉದ್ದೇಶವಿದೆ ಎಂದು ಅವರು ತಿಳಿಸಿದ್ದಾರೆ. ‘ರಾಜ್ಯದಲ್ಲಿ ಪಕ್ಷ ಅಧಿಕಾರ ವಹಿಸಿಕೊಂಡ ನಂತರ ಯೋಜನೆ ಜಾರಿ ಮಾಡಲಿದ್ದೇವೆ. ಈ ಮೂಲಕ ಬಡತನ ನಿರ್ಮೂಲನೆಯ ಹೋರಾಟದಲ್ಲಿ ಕೇರಳವು ಮಾದರಿಯಾಗಲಿದೆ’ ಎಂದರು.

ಚಾಂಡಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರ ಜೊತೆ ತೆರೆದ ವಾಹನದಲ್ಲಿ ರಾಹುಲ್ ಮೆರವಣಿಗೆ ನಡೆಸಿದರು.

ಕೇರಳದ ಕೋಟಯಂ ಜಿಲ್ಲೆಯ ಮಣ್ಣಾರ್‌ಕಾಡ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಂಗಳವಾರ ರೋಡ್‌ಶೋ ನಡೆಸಿದರು–ಪಿಟಿಐ ಚಿತ್ರ

## ಏಜೆಂಟ್ ನೇಮಕ ನಿಯಮ ಬದಲು

**ಕೋಲ್ಕತ್ತ (ಪಿಟಿಐ):** ಮತಗಟ್ಟೆ ಏಜೆಂಟರ ನೇಮಕ ನಿಯಮದಲ್ಲಿ ಚುನಾವಣಾ ಆಯೋಗವು ಬದಲಾವಣೆ ಮಾಡಿದೆ. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ವ್ಯಕ್ತಿಯನ್ನು ಆ ಕ್ಷೇತ್ರದ ಯಾವುದೇ ಮತಗಟ್ಟೆಗೆ ಪಕ್ಷಗಳು ತಮ್ಮ ಪ್ರತಿನಿಧಿಯನ್ನಾಗಿ ನೇಮಕ ಮಾಡಬಹುದು. ಈ ಮೊದಲು ಆಯಾ ಮತಗಟ್ಟೆಯ ಮತದಾರನಾಗಿರುವ ವ್ಯಕ್ತಿ ಮಾತ್ರ ಏಜೆಂಟ್ ಆಗಿ ನೇಮಕವಾಗಬಹುದಿತ್ತು.

ಕೋವಿಡ್ ಆವರಿಸಿರುವ ಈ ಸಮಯದಲ್ಲಿ ಆಯಾ ಮತಗಟ್ಟೆಯ ಮತದಾರನಾಗಿರುವ ವ್ಯಕ್ತಿಯನ್ನೇ ಏಜೆಂಟ್ ಆಗಿ ನೇಮಕ ಮಾಡುವ ಅನಿವಾರ್ಯ ಇಲ್ಲ. ಈ ನಿರ್ಧಾರದಿಂದ ಪಕ್ಷಗಳಿಗೆ ಅನುಕೂಲವಾಗಲಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

## ಚುನಾವಣಾ ಕಣದಲ್ಲಿ...

- ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಸ್ಪರ್ಧಿಸುತ್ತಿರುವ ಸುವೇಂದು ಅಧಿಕಾರಿ ಅವರು ಹೊರಗಿನ ಗೂಂಡಾಗಳನ್ನು ತಂದು ಕ್ಷೇತ್ರದ ನಾಲ್ಕು ಕಡೆ ಇರಿಸಿದ್ದಾರೆ. ಒಂದು ಸ್ಥಳಕ್ಕೆ ಸುವೇಂದು ಭೇಟಿ ಕೊಟ್ಟಿದ್ದಾರೆ. ತಕ್ಷಣ ಕ್ರಮ ಕೈಗೊಂಡು ಈ ಎಲ್ಲ ಗೂಂಡಾಗಳನ್ನು ಬಂಧಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಟಿಎಂಸಿ ದೂರು ಕೊಟ್ಟಿದೆ
- ಅಸ್ಸಾಂನ ಬರಾಕ್ ಕಣಿವೆಯಲ್ಲಿ ಚುನಾವಣಾ ಪ್ರಚಾರದ ಸರಣಿ ಕಾರ್ಯಕ್ರಮಗಳಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಭಾಗಿಯಾಗಿದ್ದಾರೆ. ಕಾಂಗ್ರೆಸ್ ಪಕ್ಷವು ಧ್ರುವೀಕರಣ ರಾಜಕಾರಣ ನಡೆಸುತ್ತಿದೆ. 1947ರಲ್ಲಿ ದೇಶ ವಿಭಜನೆಗೂ ಈ ಮನಸ್ಥಿತಿಯೇ ಕಾರಣ ಎಂದು ಅವರು ಆರೋಪಿಸಿದ್ದಾರೆ
- ಅಸ್ಸಾಂನಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ 345 ಅಭ್ಯರ್ಥಿಗಳ ಪೈಕಿ ಶೇ 11 ಮಂದಿಯ ವಿರುದ್ಧ ಅಪರಾಧ ಪ್ರಕರಣಗಳಿವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಸಂಸ್ಥೆಯ ವರದಿ ಹೇಳಿದೆ
- ಕಾಂಗ್ರೆಸ್‌ನ ಕೇರಳ ಘಟಕದ ಮಾಜಿ ಪ್ರಧಾನ ಕಾರ್ಯದರ್ಶಿ ಸುರೇಶ್ ಬಾಬು ಅವರು ಪಕ್ಷ ತೊರೆದಿದ್ದಾರೆ. ಪೂರ್ಣಾವಧಿ ಅಧ್ಯಕ್ಷ ಕೂಡ ಇಲ್ಲದ ಪಕ್ಷವು ಈಗ ಪ್ರಸ್ತುತತೆ ಕಳೆದುಕೊಂಡಿದೆ ಎಂದು 37 ವರ್ಷಗಳಿಂದ ಕಾಂಗ್ರೆಸ್‌ನಲ್ಲಿದ್ದ ಅವರು ಹೇಳಿದ್ದಾರೆ. ಸಿಪಿಎಂ ನೇತೃತ್ವದ ಎಲ್‌ಡಿಎಫ್ ಸೇರುವುದಾಗಿ ಅವರು ಹೇಳಿದ್ದಾರೆ
- ತಮಿಳುನಾಡಿನ ವೆಲಚೇರಿ ಕ್ಷೇತ್ರದ ಎಐಎಡಿಎಂಕೆ ಅಭ್ಯರ್ಥಿ ಎ.ಕೆ. ಅಶೋಕ್ ಅವರು ತನ್ನ ಅಭ್ಯರ್ಥಿಗೆ ಕೊಲೆ ಬೆದರಿಕೆ ಒಡ್ಡಿದ್ದಾರೆ ಎಂದು ಕಾಂಗ್ರೆಸ್ ಪಕ್ಷವು ಚುನಾವಣಾ ಆಯೋಗಕ್ಕೆ ದೂರು ನೀಡಿದೆ

ಮನ್‌ಸುಖ್ ಹಿರೇನ್ ಶಂಕಾಸ್ಪದ ಸಾವಿನ ಪ್ರಕರಣ

# ವಾಜೆ ಪ್ರಮುಖ ಆರೋಪಿ: ಎಟಿಎಸ್

**ಮುಂಬೈ (ಪಿಟಿಐ):** ಉದ್ಯಮಿ ಮುಕೇಶ್ ಅಂಬಾನಿ ನಿವಾಸದ ಬಳಿ ಪತ್ತೆಯಾಗಿದ್ದ, ಸ್ಫೋಟಕಗಳಿದ್ದ ವಾಹನದ ಮಾಲೀಕ ಮನ್‌ಸುಖ್ ಹಿರೇನ್ ಶಂಕಾಸ್ಪದ ಸಾವಿನ ಪ್ರಕರಣದಲ್ಲಿ ಅಮಾನತುಗೊಂಡಿರುವ ಪೊಲೀಸ್ ಅಧಿಕಾರಿ ಸಚಿವ್ ವಾಜೆ ‘ಪ್ರಮುಖ ಆರೋಪಿ’ ಎಂದು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಮಂಗಳವಾರ ತಿಳಿಸಿದೆ.

ಅಲ್ಲದೆ ವಾಜೆ ಅವರನ್ನು ವಿಚಾರಣೆ ಸಲುವಾಗಿ ವಶಕ್ಕೆ ಪಡೆಯಲು ಮಾರ್ಚ್ 25ರಂದು ವಿಶೇಷ ಎನ್‌ಐಎ ನ್ಯಾಯಾಲಯದ ಮೊರೆ ಹೋಗುವುದಾಗಿ ಎಟಿಎಸ್ ಮುಖ್ಯಸ್ಥ ಜೈಜೀತ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಪ್ರಕರಣದ ಆರೋಪಿಗಳು ಸಿಮ್ ಕಾರ್ಡ್‌ಗಳು, ಮೊಬೈಲ್ ಫೋನ್ ಮತ್ತು ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ನಾಶಪಡಿಸಿದ್ದಾರೆ ಎಂದ ಅವರು, ಈ ಪ್ರಕರಣದಲ್ಲಿ ಇನ್ನಷ್ಟು ಜನರ ಬಂಧನವಾಗುವ ಸಾಧ್ಯತೆ ಇದೆ ಎಂದರು.

**ದುಬಾರಿ ಬೆಲೆಯ ಕಾರು ವಶಕ್ಕೆ:** ಈ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಎಟಿಎಸ್ ದಮನ್‌ನಲ್ಲಿ ದುಬಾರಿ ಬೆಲೆಯ ಕಾರೊಂದನ್ನು ವಶಪಡಿಸಿಕೊಂಡಿದ್ದಾರೆ.

‘ಮಹಾರಾಷ್ಟ್ರದ ನೋಂದಣಿ ಸಂಖ್ಯೆಯಿರುವ ವೊಲ್ವೊ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಇದು ಯಾರ ಒಡೆತನದಲ್ಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಭ್ರಷ್ಟಾಚಾರ: ಸಿಬಿಐ ತನಿಖೆಗೆ ಆಗ್ರಹ

**ಮುಂಬೈ:** ಮಹಾರಾಷ್ಟ್ರದಲ್ಲಿ ಪೊಲೀಸರ ವರ್ಗಾವಣೆಯಲ್ಲಿ ನಡೆಯುತ್ತಿರುವ ಭಾರಿ ಭ್ರಷ್ಟಾಚಾರ ಕುರಿತ ಗುಪ್ತಚರ ವರದಿಯನ್ನು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ನಿರ್ಲಕ್ಷ್ಯಿಸಿ ಮೌನಕ್ಕೆ ಶರಣಾಗಿದ್ದಾರೆ ಎಂದು ಮಹಾರಾಷ್ಟ್ರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ದೂರಿದ್ದಾರೆ. ಈ ಕುರಿತು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರಿಗೆ ಪೂರಕ ದಾಖಲೆಗಳನ್ನು ಸಲ್ಲಿಸಿರುವ ಅವರು ಸಿಬಿಐ ತನಿಖೆಗೆ ಆಗ್ರಹಿಸಿದ್ದಾರೆ.

# ಕೊಲೊರಾಡೊ: 10 ಜನರ ಹತ್ಯೆ

**ಬೋಲ್ಡರ್ (ಕೊಲೊರಾಡೊ, ಎಎಫ್‌ಪಿ):** ಅಮೆರಿಕದಕೊಲೊರಾಡೊದಲ್ಲಿ 21 ವರ್ಷದ ಬಂದೂಕುಧಾರಿಯೊಬ್ಬ ಗುಂಡು ಹಾರಿಸಿ ಪೊಲೀಸ್ ಅಧಿಕಾರಿ ಸೇರಿದಂತೆ 10 ಜನರನ್ನು ಹತ್ಯೆ ಮಾಡಿದ್ದಾನೆ.

ಬೋಲ್ಡರ್‌ನ ಕಿಂಗ್ ಸೂಪರ್ಸ್ ಸ್ಟೋರ್‌ನಲ್ಲಿ ಈ ಕೃತ್ಯ ನಡೆದಿದ್ದು, ಶಂಕಿತನನ್ನು ವಶಕ್ಕೆ ಪಡೆಯಲಾಗಿದೆ. ಈ ಘಟನೆಯಲ್ಲಿ ಮೃತಪಟ್ಟವರು 20ರಿಂದ 65 ವರ್ಷದೊಳಗಿನವರು ಎಂದು ಪೊಲೀಸರು ತಿಳಿಸಿದ್ದಾರೆ.

# ನಕ್ಸಲರಿಂದ ಐಇಡಿ ಸ್ಫೋಟ; ಐವರು ಪೊಲೀಸರ ಸಾವು

**ರಾಯಪುರ (ಪಿಟಿಐ):** ಛತ್ತೀಸಗಡದ ನಾರಾಯಣಪುರ ಜಿಲ್ಲೆಯಲ್ಲಿ ನಕ್ಸಲರು ಸುಧಾರಿತ ಸ್ಫೋಟಕ ಸಾಧನ (ಐಇಡಿ) ಬಳಸಿ ಮಂಗಳವಾರ ಜಿಲ್ಲಾ ಮೀಸಲು ರಕ್ಷಣಾ ಪಡೆಯ (ಡಿಆರ್‌ಜಿ) ಬಸ್ ಅನ್ನು ಸ್ಫೋಟಿಸಿದ್ದಾರೆ. ಈ ದುರಂತದಲ್ಲಿ ಐವರು ಪೊಲೀಸರು ಹುತಾತ್ಮರಾಗಿದ್ದು, 13 ಸಿಬ್ಬಂದಿ ಗಾಯಗೊಂಡಿದ್ದಾರೆ.

'ಬಸ್‌ನ ಚಾಲಕ ಸೇರಿದಂತೆ ಡಿಆರ್‌ಜಿಯ ಐದು ಸಿಬ್ಬಂದಿ ಮೃತಪಟ್ಟಿದ್ದಾರೆ' ಎಂದು ಬಸ್ತರ್ ವಲಯದ ಐಜಿಪಿ ಪಿ.ಸುಂದರ್‌ರಾಜ್ ಹೇಳಿದ್ದಾರೆ.

ಕದೆನಾರ್ ಮತ್ತು ಕಂಹಾರ್‌ಗಾಂವ್ ನಡುವಿನ ಪ್ರದೇಶದಲ್ಲಿ ಐಇಡಿ ಸ್ಫೋಟ ಆಗಿರುವುದಾಗಿ ವರದಿಯಾಗಿದೆ. ಸುತ್ತಲಿನ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಸ್ಫೋಟದ ಪರಿಣಾಮ ಬಸ್ ಸೇತುವೆಯಿಂದ ಕೆಳಕ್ಕೆ ಉರುಳಿದೆ. ಗಾಯಗೊಂಡವರನ್ನು ಭಾರತೀಯ ವಾಯು ಪಡೆಯ ಹೆಲಿಕಾಪ್ಟರ್ ಮೂಲಕ ಆಸ್ಪತ್ರೆಗೆ ಸಾಗಿಸಲಾಗಿದೆ.

# ಗ್ವಾಲಿಯರ್: ಆಟೊರಿಕ್ಷಾ–ಬಸ್ ಡಿಕ್ಕಿ, 13 ಮಂದಿ ಸಾವು

**ಭೋಪಾಲ್ (ಪಿಟಿಐ):** ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಮಂಗಳವಾರ ಬೆಳಿಗ್ಗೆ ಆಟೊರಿಕ್ಷಾ ಮತ್ತು ಬಸ್ ಮುಖಾಮುಖಿ ಡಿಕ್ಕಿ ಹೊಡೆದುದರಿಂದ 12 ಮಂದಿ ಮಹಿಳೆಯರ ಸಹಿತ 13 ಮಂದಿ ಮೃತಪಟ್ಟಿದ್ದಾರೆ.

‘ಬೆಳಿಗ್ಗೆ 7 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ. ಮಹಿಳೆಯರು ಅಂಗನವಾಡಿ ಕೇಂದ್ರದಲ್ಲಿ ಅಡುಗೆ ಮಾಡಿಟ್ಟು ತಮ್ಮ ಮನೆಗೆ ಹಿಂತಿರುಗುತ್ತಿದ್ದರು’ ಎಂದು ಗ್ವಾಲಿಯರ್ ಎಸ್‌ಪಿ ಅಮಿತ್ ಸಂಘಿ ತಿಳಿಸಿದ್ದಾರೆ.

**₹4 ಲಕ್ಷ ಪರಿಹಾರ:** ಮೃತರ ಕುಟುಂಬಸ್ಥರಿಗೆ ತಲಾ ₹4 ಲಕ್ಷ ಹಾಗೂ ಗಾಯಗೊಂಡವರಿಗೆ ₹50,000 ಪರಿಹಾರ ನೀಡುವುದಾಗಿ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

# ಯುಪಿಎಸ್‌ಸಿ: ಸಂದರ್ಶನದಲ್ಲಿ ವಿಫಲವಾದರೂ ಉದ್ಯೋಗಾವಕಾಶ

**ನವದೆಹಲಿ:** ಭಾರತೀಯ ನಾಗರಿಕ ಸೇವಾ ಪರೀಕ್ಷೆಯ ಸ್ಪರ್ಧಾರ್ಥಿಗಳಿಗೆ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಲೋಕಸೇವಾ ಆಯೋಗ ಶುಭ ಸುದ್ದಿ ನೀಡಿವೆ. ಐಎಎಸ್ ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಳಲ್ಲಿ ಅರ್ಹತೆ ಗಳಿಸಿ, ಸಂದರ್ಶನ/ ವ್ಯಕ್ತಿತ್ವ ಪರೀಕ್ಷೆಯ ಹಂತದಲ್ಲಿ ವಿಫಲರಾದ ಸ್ಪರ್ಧಾರ್ಥಿಗಳಿಗೆ ಸರ್ಕಾರದ ಇತರ ವಿಭಾಗಗಳು ಹಾಗೂ ಖಾಸಗಿ ವಲಯದಲ್ಲಿ ಉದ್ಯೋಗಕ್ಕೆ ಸೇರುವ ಅವಕಾಶ ಲಭಿಸಲಿದೆ.

ಇಂತಹ ಸ್ಪರ್ಧಾರ್ಥಿಗಳು ಪರೀಕ್ಷೆಯಲ್ಲಿ ಗಳಿಸಿದ ಅಂಕ, ವೈಯಕ್ತಿಕ ವಿವರಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸುವ, ಆ ಮೂಲಕ ಸರ್ಕಾರದ ಬೇರೆ ಬೇರೆ ವಿಭಾಗಗಳು, ಖಾಸಗಿ ಸಂಸ್ಥೆಗಳು ಇಂಥವರಿಗೆ ಉದ್ಯೋಗಾವಕಾಶವನ್ನು ನೀಡಲು ಅನುವಾಗುವಂತಹ ಪ್ರಸ್ತಾವವನ್ನು ಕೇಂದ್ರ ಲೋಕಸೇವಾ ಆಯೋಗವು ಎರಡು ವರ್ಷಗಳ ಹಿಂದೆಯೇ ಮುಂದಿಟ್ಟಿತ್ತು. ಈಗ ಅದಕ್ಕೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿದೆ.

ಈ ಹಿಂದೆ ನಾಗರಿಕ ಸೇವಾ ಪರೀಕ್ಷೆಯಲ್ಲಿ ಆಯ್ಕೆಯಾಗುವುದನ್ನು ಕೂದಲೆಳೆಯಲ್ಲಿ ತಪ್ಪಿಸಿಕೊಂಡ ಪ್ರತಿಭಾವಂತರಿಗೆ ಅಂತಹ ಉದ್ಯೋಗಾವಕಾಶವೇನೂ ಇರಲಿಲ್ಲ. ಆದರೆ ಸಂದರ್ಶನದ ಹಂತದವರೆಗೆ ಹೋಗಿ ವಿಫಲರಾದವರ ಅಂಕಗಳು ಹಾಗೂ ಇತರ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿ ಇತರ ಉದ್ಯೋಗದಾತರಿಗೆ ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಕೇಂದ್ರ ಸರ್ಕಾರದ ಈ ಅನುಮೋದನೆ ಅನುವು ಮಾಡಿಕೊಟ್ಟಿದೆ. ಇದುವರೆಗೆ ಸ್ಪರ್ಧಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳ ವಿವರ ಸರ್ಕಾರದ ಬಳಿಯೇ ಇರುತ್ತಿತ್ತು.

ಸಂದರ್ಶನದ ಹಂತದವರೆಗೆ ಹೋಗಿ ವಿಫಲರಾದವರ ಈ ವಿವರಗಳನ್ನು, ನ್ಯಾಷನಲ್ ಇನ್‌ಫಾರ್ಮಾಟಿಕ್ಸ್ ಕೇಂದ್ರ (ಎನ್‌ಐಸಿ) ಅಭಿವೃದ್ಧಿಪಡಿಸಿದ ಇಂಟಿಗ್ರೇಟೆಡ್ ಇನ್‌ಫಾರ್ಮೇಶನ್ ಸಿಸ್ಟಂಗೆ ಸಂಪರ್ಕಿಸಲಾಗುವುದು.

ಆದರೆ ಈ ಪ್ರಸ್ತಾವಕ್ಕೆ ಅಂದರೆ ವಿವರಗಳನ್ನು ಬಹಿರಂಗಪಡಿಸುವ ಯೋಜನೆಗೆ ಒಪ್ಪಿಗೆ ಸೂಚಿಸುವ ಅಥವಾ ನಿರಾಕರಿಸುವ ನಿರ್ಧಾರದ ಆಯ್ಕೆಯನ್ನು ಅಭ್ಯರ್ಥಿಗಳಿಗೆ ನೀಡಲಾಗಿದೆ. ಯುಪಿಎಸ್‌ಸಿ ವೆಬ್‌ಸೈಟ್‌ನಲ್ಲಿ ಸಂದರ್ಶನದ ಕರೆಯನ್ನು ಸ್ವೀಕರಿಸುವಾಗಲೇ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಸೇನೆ, ಕೇಂದ್ರ ಕೈಗಾರಿಕೆ ಭದ್ರತಾ ಪಡೆ ಮೊದಲಾದ ಪರೀಕ್ಷೆಗಳಿಗೆ ಬರೆಯುವ ಸ್ಪರ್ಧಾರ್ಥಿಗಳಿಗೆ ಈ ಅವಕಾಶ ನೀಡಿಲ್ಲ ಎಂದು ಲೋಕಸೇವಾ ಆಯೋಗ ಸ್ಪಷ್ಟಪಡಿಸಿದೆ. ಹಾಗೆಯೇ ಅಭ್ಯರ್ಥಿಗಳು ಗಳಿಸಿದ ಅಂಕ ಮತ್ತಿತರ ವಿವರಗಳನ್ನು ಪ್ರಕಟಿಸುವ ಹೊಣೆ ಮಾತ್ರ ತನ್ನದು ಎಂದು ಆಯೋಗ ಹೇಳಿದೆಯೇ ಹೊರತು ಅಂಥವರಿಗೆ ಉದ್ಯೋಗ ಕೊಡುವಂತೆ ಯಾವುದೇ ನೇಮಕಾತಿ ಏಜೆನ್ಸಿಗಳಿಗೆ ಶಿಫಾರಸು ಮಾಡಲಾಗುವುದಿಲ್ಲ ಎಂದು ತಿಳಿಸಿದೆ. ಈ ಹಿಂದಿನ ವರ್ಷಗಳಲ್ಲಿ ಸಂದರ್ಶನ ಹಂತದವರೆಗೆ ಹೋಗಿ ವಿಫಲರಾದವರಿಗೆ ಈ ಅವಕಾಶ ಇದೆಯೇ ಎಂಬುದನ್ನೂ ಸ್ಪಷ್ಟಪಡಿಸಿಲ್ಲ.

### ಏಕದಿನ ಪಂದ್ಯ; ಭಾರತಕ್ಕೆ ಭರ್ಜರಿ ಜಯ; ಶಿಖರ್, ರಾಹುಲ್, ವಿರಾಟ್ ಕೊಹ್ಲಿ ಅರ್ಧಶತಕ

# ಪದಾರ್ಪಣೆಯಲ್ಲಿ ಮಿಂಚಿದ ಪ್ರಸಿದ್ಧ

**ಪುಣೆ (ಪಿಟಿಐ):** ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಕನ್ನಡಿಗ ಪ್ರಸಿದ್ಧ ಕೃಷ್ಣ ಮತ್ತು ಕೃಣಾಲ್ ಪಾಂಡ್ಯ ಅವರ ಅಮೋಘ ಆಟದ ನೆರವಿನಿಂದ ಭಾರತ ತಂಡವು ಮಂಗಳವಾರ ಇಂಗ್ಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಜಯಿಸಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಪಡೆಯು 66 ರನ್‌ಗಳಿಂದ ಗೆದ್ದಿತು. ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆತಿಥೇಯ ಬಳಗವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 317 ರನ್‌ಗಳನ್ನು ಪೇರಿಸಿತು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡಕ್ಕೆ ಜೇಸನ್ ರಾಯ್ ಮತ್ತು ಜಾನಿ ಬೆಸ್ಟೊ ಅಮೋಘ ಆರಂಭ ನೀಡಿದರು. ಆದರೆ ಮಧ್ಯಮವೇಗಿ ಪ್ರಸಿದ್ಧಕೃಷ್ಣ (8.1–1–54–4) ಅಮೋಘ ಬೌಲಿಂಗ್ ಮುಂದೆ ಇಂಗ್ಲೆಂಡ್ ತಂಡವು 42.1 ಓವರ್‌ಗಳಲ್ಲಿ 251 ರನ್ ಗಳಿಸಲು ಮಾತ್ರ ಶಕ್ತವಾಯಿತು. ವಿರಾಟ್ ಕೊಹ್ಲಿ ಬಳಗವು ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಟಿ. ನಟರಾಜನ್ ಮತ್ತು ಮೊಹಮ್ಮದ್ ಸಿರಾಜ್ ಅವರು ತಂಡದಲ್ಲಿದ್ದರೂ ಪ್ರಸಿದ್ಧಗೆ ಅವಕಾಶ ನೀಡಲಾಯಿತು. ತಮ್ಮ ಮೊದಲ ಮೂರು ಓವರ್‌ಗಳಲ್ಲಿ ಪ್ರಸಿದ್ಧ ದುಬಾರಿಯಾದರು. ಆದರೆ, ನಂತರ ಲಯ ಕಂಡುಕೊಂಡ ಪ್ರಸಿದ್ಧ, ಇನಿಂಗ್ಸ್‌ನ 15ನೇ ಓವರ್‌ನಲ್ಲಿ ಜೇಸನ್ ರಾಯ್ (46 ರನ್) ವಿಕೆಟ್ ಪಡೆದರು. ರಾಯ್ ಮತ್ತು ಜಾನಿ ಬೆಸ್ಟೊ (94 ರನ್) ಅವರ ಮೊದಲ ವಿಕೆಟ್ ಜೊತೆಯಾಟವನ್ನು (135 ರನ್) ಮುರಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಬೆನ್ ಸ್ಟೋಕ್ಸ್ (1 ರನ್) ವಿಕೆಟ್ ಕೂಡ ಕಬಳಿಸಿದ ಪ್ರಸಿದ್ಧ ಮಿಂಚಿದರು.

ಇಂಗ್ಲೆಂಡ್ ಇನಿಂಗ್ಸ್‌ಗೆ ಸ್ಥಿರತೆ ನೀಡುವ ಪ್ರಯತ್ನ ಮಾಡಿದ ಸ್ಯಾಮ್ ಬಿಲಿಂಗ್ಸ್ ಅವರ ವಿಕೆಟ್ ಕೂಡ ಪ್ರಸಿದ್ಧ ಖಾತೆ ಸೇರಿತು. ಕೊನೆಯಲ್ಲಿ ಟಾಮ್ ಕರನ್ ವಿಕೆಟ್ ಕೂಡ ಕಬಳಿಸಿದ ಪ್ರಸಿದ್ಧ ಇಂಗ್ಲೆಂಡ್ ಇನಿಂಗ್ಸ್‌ಗೆ ತೆರೆ ಎಳೆದರು. ಭುವನೇಶ್ವರ್ ಕುಮಾರ್ (30ಕ್ಕೆ 2), ಶಾರ್ದೂಲ್ ಠಾಕೂರ್ (37ಕ್ಕೆ3) ಮತ್ತು ಕೃಣಾಲ್ ಪಾಂಡ್ಯ (59ಕ್ಕೆ1) ಉತ್ತಮ ದಾಳಿ ಸಂಘಟಿಸಿದರು.

**ಕೃಣಾಲ್–ರಾಹುಲ್ ಜೊತೆಯಾಟ:** ವಿಕೆಟ್‌ಕೀಪರ್ ರಿಷಭ್ ಪಂತ್ ಅವರಿಗೆ ವಿಶ್ರಾಂತಿ ನೀಡಿದ ಕಾರಣ ಮಧ್ಯಮ-ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ಕೆ.ಎಲ್. ರಾಹುಲ್ ಕೊನೆಗೂ ತಮ್ಮ ಲಯ ಕಂಡುಕೊಂಡರು. ಪದಾರ್ಪಣೆಯ ಪಂದ್ಯವಾಡಿದ ಕೃಣಾಲ್ ಪಾಂಡ್ಯ ಅವರೊಂದಿಗೆ ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 112 ರನ್ ಸೇರಿಸಿದರು. ಇದರಿಂದಾಗಿ ತಂಡವು ಮುನ್ನೂರು ರನ್‌ಗಳ ಗಡಿ ದಾಟಲು ಸಾಧ್ಯವಾಯಿತು.

ಪ್ರಸಿದ್ಧ ಕೃಷ್ಣ ಸಂಭ್ರಮ– ಎಎಫ್‌ಪಿ ಚಿತ್ರ

### ಅಪ್ಪನಿಗೆ ವಿಶ್ವದಾಖಲೆ ಅರ್ಪಿಸಿದ ಕೃಣಾಲ್

ಬುಧವಾರ ತಮ್ಮ 30ನೇ ಜನ್ಮದಿನ ಆಚರಿಸಿಕೊಳ್ಳಲಿರುವ ಆಲ್‌ರೌಂಡರ್ ಕೃಣಾಲ್ ಪಾಂಡ್ಯ, ಪದಾರ್ಪಣೆಯ ಏಕದಿನ ಪಂದ್ಯದಲ್ಲಿ ವೇಗದ ಅರ್ಧಶತಕ ಬಾರಿಸಿದ ವಿಶ್ವದಾಖಲೆಯನ್ನು ತಮ್ಮ ತಂದೆಗೆ ಅರ್ಪಿಸಿದರು. ಅವರ ತಂದೆ ಹಿಮಾಂಶು ಪಾಂಡ್ಯ ಈಚೆಗೆ ನಿಧನರಾಗಿದ್ದರು.



ಕೃಣಾಲ್ ಪಾಂಡ್ಯ ಅವರನ್ನು ಅಭಿನಂದಿಸಿದ ಸಹೋದರ ಹಾರ್ದಿಕ್– ರಾಯಿಟರ್ಸ್ ಚಿತ್ರ

ಕೃಣಾಲ್ 26 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. 1990ರಲ್ಲಿ ಇಂಗ್ಲೆಂಡ್‌ನ ಜಾನ್ ಮೊರಿಸ್ 35 ಎಸೆತಗಳಲ್ಲಿ ಮಾಡಿದ್ದ ದಾಖಲೆಯನ್ನು ಅವರು ಮೀರಿದರು. ಚೊಚ್ಚಲ ಪಂದ್ಯದಲ್ಲಿ ಅರ್ಧಶತಕ ಗಳಿಸಿದ ಭಾರತದ 15ನೇ ಆಟಗಾರನೆಂಬ ಹೆಗ್ಗಳಿಕೆಯೂ ಅವರದ್ದಾಯಿತು. ಅರ್ಧಶತಕ ಪೂರೈಸಿದಾಗ ಕೃಣಾಲ್, ತಮ್ಮ ಪೋಷಾಕಿನ ಮೇಲಿದ್ದ ಭಾರತ ತಂಡದ ಲಾಂಛನವನ್ನು ತಟ್ಟಿಕೊಂಡು ಆಕಾಶದತ್ತ ಬ್ಯಾಟ್ ತೋರಿಸಿದರು. ಕೆಲಕ್ಷಣ ಭಾವುಕರಾದರು. ಮತ್ತೆ ಆಟ ಮುಂದುವರಿಸಿದರು. ಇನಿಂಗ್ಸ್ ಮುಗಿದ ನಂತರ ಪೆವಿಲಿಯನ್‌ಗೆ ಮರಳಿದ ಕೃಣಾಲ್ ಅವರನ್ನು ತಮ್ಮ ಹಾರ್ದಿಕ್ ಪಾಂಡ್ಯ ಬಿಗಿದಪ್ಪಿಕೊಂಡರು. ಟಿ.ವಿಗೆ ಸಂದರ್ಶನ ನೀಡುವ ಸಂದರ್ಭದಲ್ಲಿ ತಮ್ಮ ತಂದೆಗೆ ಈ ಸಾಧನೆ ಅರ್ಪಿಸುವುದಾಗಿ ಹೇಳಿ ಗದ್ಗದಿತರಾದರು.

‘1990ರಲ್ಲಿ ಅಡಿಲೇಡ್‌ನಲ್ಲಿ ನಡೆದಿದ್ದ ನ್ಯೂಜಿಲೆಂಡ್ ಎದುರಿನ ಏಕದಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಇಂಗ್ಲೆಂಡ್‌ನ ಜಾನ್ ಮಾರಿಸ್ 35 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದರು. ಇದೀಗ ಕೃಣಾಲ್ ಆ ದಾಖಲೆಯನ್ನು ಮುರಿದಿದ್ದಾರೆ’ ಎಂದು ಬೆಂಗಳೂರಿನ ಕ್ರಿಕೆಟ್ ಅಂಕಿ ಸಂಖ್ಯೆ ತಜ್ಞ ಎಚ್‌.ಆರ್. ಗೋಪಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

**ಶತಕ ತಪ್ಪಿಸಿಕೊಂಡ ಶಿಖರ್:** ಹೋದ ಟ್ವೆಂಟಿ–20 ಕ್ರಿಕೆಟ್ ಸರಣಿಯಲ್ಲಿ ವೈಫಲ್ಯ ಅನುಭವಿಸಿದ್ದ ಶಿಖರ್ ಧವನ್ ಅವರ ಅಂದದ ಬ್ಯಾಟಿಂಗ್ ರಂಗೇರಿತು. ರೋಹಿತ್ ಶರ್ಮಾ ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ದೆಹಲಿಯ ಎಡಗೈ ಬ್ಯಾಟ್ಸ್‌ಮನ್ ಎರಡು ರನ್‌ಗಳಿಂದ ಶತಕ ತಪ್ಪಿಸಿಕೊಂಡರು. 11 ಬೌಂಡರಿ ಮತ್ತು ಎರಡು ಸಿಕ್ಸರ್‌ಗಳನ್ನು ಸಿಡಿಸಿದ ಧವನ್, 106 ಎಸೆತಗಳನ್ನು ಎದುರಿಸಿದರು.

ಅವರು ರೋಹಿತ್ ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ನಾಯಕ ವಿರಾಟ್ ಕೊಹ್ಲಿ (56; 60ಎ) ಅವರೊಂದಿಗೆ 105 ರನ್ ಪೇರಿಸಿದರು. 39ನೇ ಓವರ್‌ನಲ್ಲಿ ಬೆನ್ ಸ್ಟೋಕ್ಸ್ ಎಸೆತದಲ್ಲಿ ಏಯಾನ್ ಮಾರ್ಗನ್ ಪಡೆದ ಕ್ಯಾಚ್‌ಗೆ ಧವನ್ ಪೆವಿಲಿಯನ್‌ಗೆ ಮರಳಿದರು.

ಶಿಖರ್ ಧವನ್ ಅವರು ಪಂದ್ಯಶ್ರೇಷ್ಠ ಗೌರವ ತಮ್ಮದಾಗಿಸಿಕೊಂಡರು.

### ಸ್ಕೋರ್‌ಕಾರ್ಡ್

**ಭಾರತ 5ಕ್ಕೆ 317** (50 ಓವರ್‌ಗಳಲ್ಲಿ)

| | |
|---|---|
| ರೋಹಿತ್ ಶರ್ಮಾ ಸಿ ಜೋಸ್ ಬಟ್ಲರ್ ಬಿ ಬೆನ್ ಸ್ಟೋಕ್ಸ್ | 28 |
| ಶಿಖರ್ ಧವನ್ ಸಿ ಏಯಾನ್ ಮಾರ್ಗನ್ ಬಿ ಬೆನ್ ಸ್ಟೋಕ್ಸ್ | 98 |
| ವಿರಾಟ್ ಕೊಹ್ಲಿ ಸಿ ಮೋಯಿನ್ ಅಲಿ ಬಿ ಮಾರ್ಕ್ ವುಡ್ | 56 |
| ಶ್ರೇಯಸ್ ಅಯ್ಯರ್ ಸಿ ಲಿವಿಂಗ್‌ಸ್ಟೋನ್ (ಬದಲಿ) ಬಿ ಮಾರ್ಕ್ ವುಡ್ | 6 |
| ಕೆ.ಎಲ್.ರಾಹುಲ್ ಔಟಾಗದೆ | 62 |
| ಹಾರ್ದಿಕ್ ಪಾಂಡ್ಯ ಸಿ ಜಾನಿ ಬೆಸ್ಟೊ ಬಿ ಬೆನ್ ಸ್ಟೋಕ್ಸ್ | 1 |
| ಕೃಣಾಲ್ ಪಾಂಡ್ಯ ಔಟಾಗದೆ | 58 |
| ಇತರೆ (ಲೆಗ್ ಬೈ 3, ವೈಡ್ 5) | 08 |

**ವಿಕೆಟ್ ಪತನ:** 1–64 (ರೋಹಿತ್ ಶರ್ಮಾ, 15.1), 2–169 (ವಿರಾಟ್ ಕೊಹ್ಲಿ, 32.1), 3–187 (ಶ್ರೇಯಸ್ ಅಯ್ಯರ್, 34.5), 4–197 (ಶಿಖರ್ ಧವನ್, 38.1), 5–205 (ಹಾರ್ದಿಕ್ ಪಾಂಡ್ಯ, 40.3)

**ಬೌಲಿಂಗ್:** ಮಾರ್ಕ್ ವುಡ್ 10–1–75–2, ಸ್ಯಾಮ್ ಕರನ್ 10–1–48–0, ಟಾಮ್ ಕರನ್ 10–0–63–0, ಬೆನ್ ಸ್ಟೋಕ್ಸ್ 8–1–34–3, ಆದಿಲ್ ರಶೀದ್ 9–0–66–0, ಮೋಯಿನ್ ಅಲಿ 3–0–28–0

**ಇಂಗ್ಲೆಂಡ್ 251** (42.1 ಓವರ್‌ಗಳಲ್ಲಿ)

| | |
|---|---|
| ಜೇಸನ್ ರಾಯ್ ಸಿ ಸೂರ್ಯಕುಮಾರ್ (ಬದಲಿ) ಬಿ ಪ್ರಸಿದ್ಧ ಕೃಷ್ಣ | 46 |
| ಜಾನಿ ಬೆಸ್ಟೊ ಸಿ ಕುಲದೀಪ್ ಯಾದವ್ ಬಿ ಶಾರ್ದೂಲ್ ಠಾಕೂರ್ | 94 |
| ಬೆನ್ ಸ್ಟೋಕ್ಸ್ ಸಿ ಶುಭಮನ್ ಗಿಲ್ (ಬದಲಿ) ಬಿ ಪ್ರಸಿದ್ಧ ಕೃಷ್ಣ | 1 |
| ಏಯಾನ್ ಮಾರ್ಗನ್ ಸಿ ಕೆ.ಎಲ್.ರಾಹುಲ್ ಬಿ ಶಾರ್ದೂಲ್ ಠಾಕೂರ್ | 22 |
| ಜೋಸ್ ಬಟ್ಲರ್ ಎಲ್‌ಬಿಡಬ್ಲ್ಯು ಶಾರ್ದೂಲ್ ಠಾಕೂರ್ | 2 |
| ಸ್ಯಾಮ್ ಬಿಲಿಂಗ್ಸ್ ಸಿ ವಿರಾಟ್ ಕೊಹ್ಲಿ ಬಿ ಪ್ರಸಿದ್ಧ ಕೃಷ್ಣ | 18 |
| ಮೋಯಿನ್ ಅಲಿ ಸಿ ಕೆ.ಎಲ್.ರಾಹುಲ್ ಬಿ ಭುವನೇಶ್ವರ ಕುಮಾರ್ | 30 |
| ಸ್ಯಾಮ್ ಕರನ್ ಸಿ ಶುಭಮನ್ ಗಿಲ್ (ಬದಲಿ) ಬಿ ಕೃಣಾಲ್ ಪಾಂಡ್ಯ | 12 |
| ಟಾಮ್ ಕರನ್ ಸಿ ಭುವನೇಶ್ವರ ಕುಮಾರ್ ಬಿ ಪ್ರಸಿದ್ಧ ಕೃಷ್ಣ | 11 |
| ಆದಿಲ್ ರಶೀದ್ ಸಿ ಕೆ.ಎಲ್.ರಾಹುಲ್ ಬಿ ಭುವನೇಶ್ವರ ಕುಮಾರ್ | 0 |
| ಮಾರ್ಕ್ ವುಡ್ ಔಟಾಗದೆ | 2 |
| ಇತರೆ (ಲೆಗ್ ಬೈ 3, ವೈಡ್ 10) | 13 |

**ವಿಕೆಟ್ ಪತನ:** 1–135 (ಜೇಸನ್ ರಾಯ್, 14.2), 2–137 (ಬೆನ್ ಸ್ಟೋಕ್ಸ್, 16.2), 3–169 (ಜಾನಿ ಬೆಸ್ಟೊ, 22.1), 4–175 (ಏಯಾನ್ ಮಾರ್ಗನ್, 24.1), 5–176 (ಜೋಸ್ ಬಟ್ಲರ್, 24.4), 6–217 (ಸ್ಯಾಮ್ ಬಿಲಿಂಗ್ಸ್, 32.1), 7–237 (ಮೋಯಿನ್ ಅಲಿ, 37.1), 8–239 (ಸ್ಯಾಮ್ ಕರನ್, 38.1), 9–241 (ಆದಿಲ್ ರಶೀದ್, 39.2), 10–251 (ಟಾಮ್ ಕರನ್, 42.1)

**ಬೌಲಿಂಗ್:** ಭುವನೇಶ್ವರ ಕುಮಾರ್ 9–0–30–2, ಪ್ರಸಿದ್ಧ ಕೃಷ್ಣ 8.1–1–54–4, ಶಾರ್ದೂಲ್ ಠಾಕೂರ್ 6–0–37–3, ಕೃಣಾಲ್ ಪಾಂಡ್ಯ 10–0–59–1, ಕುಲದೀಪ್ ಯಾದವ್ 9–0–68–0

**ಫಲಿತಾಂಶ:** ಭಾರತ ತಂಡಕ್ಕೆ 66 ರನ್‌ಗಳ ಜಯ, ಸರಣಿಯಲ್ಲಿ 1–0 ಮುನ್ನಡೆ

**ಮುಂದಿನ ಪಂದ್ಯ:** ಮಾರ್ಚ್ 26, ಪುಣೆಯಲ್ಲಿ

ಶಿಖರ್ ಧವನ್– ಪಿಟಿಐ ಚಿತ್ರ

## ಟೆನಿಸ್: ಕ್ವಾರ್ಟರ್‌ಗೆ ನವೀನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಮೋಘ ಆಟವಾಡಿದ ನವೀನ್ ಸುಂದರಂ ಹಾಗೂ ಕಾರ್ತಿಕಾ ಪದ್ಮ ಕುಮಾರ್, ಇಲ್ಲಿ ನಡೆಯುತ್ತಿರುವ ಎಂಎಟಿ–ಎಐಟಿಎ ಸಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

ಟೂರ್ನಿಯ ಬಾಲಕರ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನವೀನ್ 6–0, 6–0ಯಿಂದ ಎರಡನೇ ಶ್ರೇಯಾಂಕದ ಮಾನವ್ ಸಿಯಾಲ್‌ಗೆ ಸೋಲುಣಿಸಿದರು. ಬಾಲಕಿಯರ ವಿಭಾಗದಲ್ಲಿ ಕಾರ್ತಿಕಾ 2-6, 6-1, 6-2ರಿಂದ ಎರಡನೇ ಶ್ರೇಯಾಂಕದ ಸಂಗೀತಾ ರಾಮನ್ ಅವರಿಗೆ ಆಘಾತ ನೀಡಿದರು.

ನವೀನ್ ಸುಂದರಂ ಆಟದ ವೈಖರಿ

ಬಾಲಕರ ಪ್ರೀಕ್ವಾರ್ಟರ್‌ಫೈನಲ್ ಇನ್ನುಳಿದ ಹಣಾಹಣಿಗಳಲ್ಲಿ ಶ್ರೀಕರ ದೋಣಿ 6-3, 7-6ರಿಂದ ಹವೀಶ್ ಕುಮಾರ್ ಎದುರು, ಗಂಧರ್ವ ಜಿ.ಕೆ. 6-0, 6-1ರಿಂದ ಡೈಲನ್ ರೆಮೆಡಿಯೋಸ್ ವಿರುದ್ಧ, ಅನಂತ್ ಕೃಷ್ಣನ್ 7-5, 6-4ರಿಂದ ಸರಣ್ ಪ್ರಕಾಶ್ ಎದುರು ಗೆದ್ದರು.

ಬಾಲಕಿಯರ ವಿಭಾಗದ ಇತರ ಪ್ರೀ-ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ದಿಶಾ ಬೆಹ್ರಾ 6-0, 6-2ರಿಂದ ಕಾಶ್ವಿ ಸುನಿಲ್ ಎದುರು ಗೆದ್ದರು.

ದೇವಂಶ್ರೀ ಪ್ರಭು ದೇಸಾಯಿ 6-0, 6-1ರಿಂದ ಆಯಲಿನ್ ಮಿರಿಯಮ್ ಎದುರು ಜಯಗಳಿಸಿ ಎಂಟರಘಟ್ಟ ತಲುಪಿದರು.

## ಮಹಿಳಾ ಕ್ರಿಕೆಟ್: ಭಾರತಕ್ಕೆ ಜಯ

**ಲಖನೌ (ಪಿಟಿಐ):** ರಾಜೇಶ್ವರಿ ಗಾಯಕವಾಡ್ (9ಕ್ಕೆ3) ಉತ್ತಮ ಬೌಲಿಂಗ್ ಬಲದಿಂದ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರಿನ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯ ಕೊನೆಯ ಪಂದ್ಯದಲ್ಲಿ ಜಯಿಸಿತು.

ಆದರೆ ಮೊದಲ ಎರಡು ಪಂದ್ಯಗಳಲ್ಲಿ ಜಯಿಸಿದ ಪ್ರವಾಸಿ ಬಳಗವು ಸರಣಿ ಗೆಲುವು ಸಾಧಿಸಿತು. ಭಾರತರತ್ನ ಅಟಲ್‌ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಮೊದಲು ಬ್ಯಾಟಿಂಗ್ ಮಾಡಿತು. 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 112 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 11 ಓವರ್‌ಗಳಲ್ಲಿ 1 ವಿಕೆಟ್‌ಗೆ 114 ರನ್ ಗಳಿಸಿ ಜಯಿಸಿತು. ಶೆಫಾಲಿ ವರ್ಮಾ (60) ಅರ್ಧಶತಕ ಗಳಿಸಿದರು.

**ಸಂಕ್ಷಿಪ್ತ ಸ್ಕೋರು:** ದಕ್ಷಿಣ ಆಫ್ರಾ 20 ಓವರ್‌ಗಳಲ್ಲಿ 7ಕ್ಕೆ112 (ಸುನ್ ಲಸ್ 28, ಲಾರಾ ಗುಡೇಲ್ ಔಟಾಗದೆ 25, ರಾಜೇಶ್ವರಿ ಗಾಯಕವಾಡ್ 9ಕ್ಕೆ3) ಭಾರತ: 11 ಓವರ್‌ಗಳಲ್ಲಿ 1 ವಿಕೆಟ್‌ಗೆ 114 (ಶೆಫಾಲಿ ವರ್ಮಾ 60, ಸ್ಮೃತಿ ಮಂದಾನ ಔಟಾಗದೆ 48) ಫಲಿತಾಂಶ: ಭಾರತ ತಂಡಕ್ಕೆ9 ವಿಕೆಟ್‌ಗಳ ಜಯ.

## ಪ್ಯಾರಾ ಶೂಟಿಂಗ್: ಶ್ರೀಹರ್ಷಗೆ ಕಂಚು

**ಹುಬ್ಬಳ್ಳಿ:** ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಲ್ ಐನ್‌ನಲ್ಲಿ ನಡೆಯುತ್ತಿರುವ ಪ್ಯಾರಾ ವಿಶ್ವಕಪ್ ಶೂಟಿಂಗ್ ಸ್ಪರ್ಧೆಯಲ್ಲಿ ಹುಬ್ಬಳ್ಳಿಯ ಶ್ರೀಹರ್ಷ ಆರ್. ದೇವರೆಡ್ಡಿ ಕಂಚಿನ ಪದಕ ಜಯಿಸಿದ್ದಾರೆ.

ಮಂಗಳವಾರ ಅವರು 10 ಮೀಟರ್ ಏರ್ ರೈಫಲ್ ಸ್ಟ್ಯಾಂಡಿಂಗ್‌ನ ಆರ್–4 ಎಸ್‌ಎಚ್ 2 ವಿಭಾಗದಲ್ಲಿ ಒಟ್ಟು 230.8 ಅಂಕಗಳನ್ನು ಗಳಿಸುವ ಮೂಲಕ ಈ ಸಾಧನೆ ಮಾಡಿದರು. ಮೊದಲ ಎರಡು ಸ್ಥಾನಗಳು ಕ್ರಮವಾಗಿ ಇಟಲಿ ಹಾಗೂ ಉಕ್ರೇನ್ ಶೂಟರ್‌ಗಳ ಪಾಲಾದವು.

ಶ್ರೀಹರ್ಷ

ಇದಕ್ಕೂ ಮೊದಲು ನಡೆದ ಪ್ರಾಥಮಿಕ ಸುತ್ತಿನಲ್ಲಿ ಮೊದಲ ಎಂಟು ಸ್ಥಾನ ಪಡೆದ ಶೂಟರ್‌ಗಳು ಫೈನಲ್‌ಗೆ ಅರ್ಹತೆ ಪಡೆದುಕೊಂಡಿದ್ದರು. ಶ್ರೀಹರ್ಷ ಪ್ರಾಥಮಿಕ ಸುತ್ತಿನಲ್ಲಿ 629.6 ಅಂಕ ಗಳನ್ನು ಗಳಿಸಿ, ನಾಲ್ಕನೇ ಸ್ಥಾನ ಪಡೆದಿದ್ದರು.

ಶ್ರೀಹರ್ಷ ಅವರು 2019ರ ಫೆಬ್ರುವರಿಯಲ್ಲಿ ಶಾರ್ಜಾದಲ್ಲಿ ನಡೆದಿದ್ದ ಐವಾಸ್ ಪ್ಯಾರಾ ಕ್ರೀಡಾಕೂಟದ ಶೂಟಿಂಗ್ ಲೆವಲ್–3 ವಿಶ್ವ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

## ರ‍್ಯಾಂಕಿಂಗ್: ಅಗ್ರಸ್ಥಾನಕ್ಕೆ ಶೆಫಾಲಿ

**ದುಬೈ (ಪಿಟಿಐ):** ಬಿರುಸಿನ ಹೊಡೆತಗಳ ಆಟಗಾರ್ತಿ, ಭಾರತದ ಶೆಫಾಲಿ ವರ್ಮಾ ಐಸಿಸಿ ಟಿ20 ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೆ ಮರಳಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧ ನಡೆಯುತ್ತಿರುವ ಸರಣಿಯಲ್ಲಿ ತೋರಿದ ಉತ್ತಮ ಸಾಮರ್ಥ್ಯದಿಂದಾಗಿ ಅವರ ಸ್ಥಾನದಲ್ಲಿ ಬಡ್ತಿಯಾಗಿದೆ.

17 ವರ್ಷದ ಶೆಫಾಲಿ, ಹೋದ ವರ್ಷ ಆಸ್ಟ್ರೇಲಿಯಾದಲ್ಲಿ ನಡೆದ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡವನ್ನು ನಾಕೌಟ್ ಹಂತಕ್ಕೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆ ಸಂದರ್ಭದಲ್ಲಿ ಅವರು ರ‍್ಯಾಂಕಿಂಗ್‌ನಲ್ಲಿ ಮೊದಲ ಬಾರಿ ಅಗ್ರಸ್ಥಾನಕ್ಕೇರಿದ್ದರು.

ದಕ್ಷಿಣ ಆಫ್ರಿಕಾ ವಿರುದ್ಧ ನಡೆದ ಮೊದಲ ಎರಡು ಪಂದ್ಯಗಳಲ್ಲಿ ಕ್ರಮವಾಗಿ 23 ಹಾಗೂ 47 ರನ್ ಗಳಿಸಿರುವ ಶೆಫಾಲಿ, ಆಸ್ಟ್ರೇಲಿಯಾದ ಬೆಥ್ ಮೂನಿ ಅವರನ್ನು ಹಿಂದಿಕ್ಕಿ ಮೊದಲ ಸ್ಥಾನ ಗಳಿಸಿದ್ದಾರೆ. ದಕ್ಷಿಣ ಆಫ್ರಿಕಾ ತಂಡದ ಲಿಜೆಲಿ ಲೀ 11ನೇ ಸ್ಥಾನದಲ್ಲಿದ್ದಾರೆ.

## ಸೈಕ್ಲಿಂಗ್: ರಾಜ್ಯ ತಂಡದಲ್ಲಿ ಸುಜಲ್

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ಹೈದರಾಬಾದ್‌ನಲ್ಲಿ ಮಾ. 27ರಿಂದ 31ರ ತನಕ ಆಯೋಜನೆಯಾಗಿರುವ 72ನೇ ಸೀನಿಯರ್, 49ನೇ ಜೂನಿಯರ್ ಮತ್ತು 35ನೇ ಸಬ್ ಜೂನಿಯರ್ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡವನ್ನು ಆಯ್ಕೆ ಮಾಡಲಾಗಿದೆ. ಇತ್ತೀಚಿಗೆ ಬೆಳಗಾವಿ ಜಿಲ್ಲೆಯ ಚಂದರಗಿ ಕ್ರೀಡಾ ಶಾಲೆಯಲ್ಲಿ ತಂಡಗಳನ್ನು ಆಯ್ಕೆ ಮಾಡಲಾಯಿತು.

**ತಂಡಗಳು ಇಂತಿವೆ: ಪುರುಷರು ಹಾಗೂ ಬಾಲಕರು:** ಸುಜಲ್ ಜಾಧವ, ರಾಹುಲ್ ರಾಠೋಡ, ಪ್ರತಾಪ ಪಡಚಿ, ರಾಘವೇಂದ್ರ ವಂದಾಲ, ಅನಿಲ್ ಕಾಳಪ್ಪಗೋಳ, ಶ್ರೀಶೈಲ ವೀರಾಪೂರ (ಕ್ರೀಡಾನಿಲಯ, ವಿಜಯಪುರ), ವರುಣ ಶಿರೂರ (ಕ್ರೀಡಾನಿಲಯ, ಬಾಗಲಕೋಟೆ), ಸಂಪತ್ ಪಾಸಮೇಲ, ಮಲ್ಲಿಕಾರ್ಜುನ ಯಾದವಾಡ, ಮಧು ಕಾಡಾಪೂರ (ಬಾಗಲಕೋಟೆ ಜಿಲ್ಲೆ), ಲಾಯಪ್ಪ ಮುಧೋಳ, ವಿಶ್ವನಾಥ ಗಡಾದ, ಅಭಿಷೇಕ ಮರನೂರ, ಗಣೇಶ ಕುಡಿಗಾನೂರ, ಯಲಗೂರಪ್ಪ ಗಡ್ಡಿ (ವಿಜಯಪುರ ಜಿಲ್ಲೆ), ನವೀನ ಜಾನ್, ಮಂಜುನಾಥ ಸಿ. (ಬೆಂಗಳೂರು ಜಿಲ್ಲೆ). ಮ್ಯಾನೇಜರ್: ಮಹಾಂತೇಶ ಮಮದಾಪುರ. ಕೋಚ್: ವಿಠ್ಠಲ ಬೋರ್ಜಿ.

**ಮಹಿಳೆಯರು ಮತ್ತು ಬಾಲಕಿಯರು:** ಅಂಕಿತಾ ರಾಠೋಡ, ಆರತಿ ಬಾಟಿ (ವಿಜಯಪುರ ಜಿಲ್ಲೆ), ಪಾಯಲ್ ಚವ್ಹಾಣ, ಗಂಗಾ ದಂಡಿನ, ಶೈಲಾ ನ್ಯಾಮಗೌಡ, ಸೌಮ್ಯಾ ಅಂತಾಪುರ, ಕಾವೇರಿ ಮುರನಾಳ (ಕ್ರೀಡಾನಿಲಯ, ವಿಜಯಪುರ), ಸವಿತಾ ಆಡಗಲ್ (ಕ್ರೀಡಾನಿಲಯ, ಬಾಗಲಕೋಟೆ), ಕೀರ್ತಿ ರಂಗಸ್ವಾಮಿ (ಬೆಂಗಳೂರು ಜಿಲ್ಲೆ), ಕೀರ್ತಿ ನಾಯ್ಕ (ಕ್ರೀಡಾನಿಲಯ, ಗದಗ), ಅನುಪಮಾ ಗುಳೇದ, ಚೈತ್ರಾ ಬೋರ್ಜಿ, ಭಾಗ್ಯಶ್ರೀ ಮಠಪತಿ, ಭಾವನಾ ಪಾಟೀಲ, ದಾನಮ್ಮ ಚಿಚಖಂಡಿ (ಬಾಗಲಕೋಟೆ ಜಿಲ್ಲೆ). ಮ್ಯಾನೇಜರ್: ರಮೇಶ ರಾಠೋಡ, ಕೋಚ್: ಅಲ್ಕಾ ಫಡತಾರೆ.

### ಬದುಕು ನಡೆಸಲು ಕಷ್ಟವಾದರೂ ಸ್ಕೇಟಿಂಗ್ ಕಲಿಕೆಗೆ ಪ್ರೋತ್ಸಾಹ

# ರಾಷ್ಟ್ರೀಯ ಟೂರ್ನಿಗೆ ಚಾಲಕನ ಪುತ್ರ

• ಪ್ರಮೋದ

**ಹುಬ್ಬಳ್ಳಿ:** ಟಾಟಾ ಏಸ್ ವಾಹನ ಚಾಲನೆ ಮಾಡಿ ದಿನಕ್ಕೆ ₹300 ಸಂಪಾದಿಸಿ ಬದುಕಿನ ಬಂಡಿ ಸಾಗಿಸುತ್ತಿರುವ ಇಲ್ಲಿನ ಅಮರಗೋಳದ ಮಾರುತಿ ಕದಂ ಅವರ ಪುತ್ರ ಹನುಮಂತಪ್ಪ ಸ್ಕೇಟಿಂಗ್ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದ ಟೂರ್ನಿಗೆ ಆಯ್ಕೆಯಾಗಿದ್ದಾನೆ.

ಇತ್ತೀಚೆಗೆ ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ 36ನೇ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನ 9ರಿಂದ 11 ವರ್ಷದ ಒಳಗಿನ ವಿಭಾಗದ ಕ್ವಾಡ್ ಸ್ಪರ್ಧೆಯಲ್ಲಿ ಹನುಮಂತಪ್ಪ ಒಂದು ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದುಕೊಂಡಿದ್ದಾನೆ. ಮೊದಲ ಎರಡು ರಾಜ್ಯಮಟ್ಟದ ಟೂರ್ನಿಗಳಲ್ಲಿ ಪದಕ ಬಂದಿರಲಿಲ್ಲ. ಮೂರನೇ ಬಾರಿ ಈ ಸಾಧನೆ ಮಾಡಿದ್ದಾನೆ. ಮೊಹಾಲಿಯಲ್ಲಿ ಏಪ್ರಿಲ್ 1ರಿಂದ 3ರ ತನಕ ರಾಷ್ಟ್ರೀಯ ಟೂರ್ನಿ ಆಯೋಜನೆಯಾಗಿದ್ದು, ಮಗನ ಸಾಧನೆ ಅಪ್ಪ ಮಾರುತಿ ಹಾಗೂ ಅಮ್ಮ ಶಕುಂತಲಾ ಅವರ ಸಂಭ್ರಮ ಹೆಚ್ಚಿಸಿದೆ.

ಹನುಮಂತಪ್ಪ ಕದಂ

ಹನುಮಂತಪ್ಪನಿಗೆ ಮೊದಲು ಕರಾಟೆ ಬಗ್ಗೆ ಆಸಕ್ತಿಯಿತ್ತು. ಕ್ರಮೇಣವಾಗಿ ಮನೆಯಲ್ಲಿಯೇ ಸ್ಕೇಟಿಂಗ್ ಕಲಿತು ಸದ್ಯಕ್ಕೆ ಹುಬ್ಬಳ್ಳಿ ರೋಲರ್ ಸ್ಕೇಟಿಂಗ್ ಅಕಾಡೆಮಿ (ಎಚ್‌ಆರ್‌ಎಸ್‌ಎ)ಯಲ್ಲಿ ತರಬೇತಿ ಪಡೆಯುತ್ತಿದ್ದಾನೆ. ಮೂರು ವರ್ಷಗಳ ಹಿಂದೆ ಸ್ಕೇಟಿಂಗ್ ತರಬೇತಿ ಆರಂಭಿಸಿದ ಹನುಮಂತಪ್ಪ ಕಡಿಮೆ ಅವಧಿಯಲ್ಲಿ ವೇಗವಾಗಿ ಆಟದ ಕೌಶಲಗಳನ್ನು ಕಲಿತುಕೊಂಡಿದ್ದಾನೆ.

> **ಹನುಮಂತಪ್ಪ ಪ್ರತಿಭಾನ್ವಿತ ಸ್ಕೇಟರ್. ನಿರಂತರ ತರಬೇತಿ ಪಡೆದರೆ ರಾಷ್ಟ್ರೀಯ ಮಟ್ಟದಲ್ಲಿಯೂ ಪದಕ ಗೆಲ್ಲುವುದರಲ್ಲಿ ಅನುಮಾನವಿಲ್ಲ.**
> **ಅಕ್ಷಯ ಸೂರ್ಯವಂಶಿ,** ತರಬೇತುದಾರ ಎಚ್‌ಆರ್‌ಎಸ್‌ಎ ಅಕಾಡೆಮಿ

ದಿನಗೂಲಿಯಲ್ಲಿ ಮನೆ ನಡೆಸಲು ಪರದಾಡುತ್ತಿರುವ ಮಾರುತಿ ಕದಂ; ಎಷ್ಟೇ ಕಷ್ಟವಾದರೂ ಮಗನ ಕ್ರೀಡಾ ಆಸಕ್ತಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.

‘ಮಗನನ್ನು ಈ ವರ್ಷ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಓದಿಸಬೇಕು ಎನ್ನುವ ಆಸೆಯಿತ್ತು. ಹಣಕಾಸಿನ ಅಡಚಣೆಯಿಂದಾಗಿ ಸಾಧ್ಯವಾಗಲಿಲ್ಲ. ಆದರೆ, ಆತನ ಸ್ಕೇಟಿಂಗ್ ಅಭ್ಯಾಸಕ್ಕೆ ಯಾವುದೇ ತೊಂದರೆಯಾಗಂತೆ ನೋಡಿಕೊಂಡಿದ್ದೇನೆ. ಸ್ಕೇಟಿಂಗ್ ತರಬೇತಿಗೆ ಮಾಸಿಕ ಶುಲ್ಕ, ಸಾಮಗ್ರಿಗಳನ್ನು ಕೊಡಿಸಲು ಸಾವಿರಾರು ರೂಪಾಯಿ ಖರ್ಚು ಮಾಡಿದ್ದೇನೆ. ಸ್ನೇಹಿತರು, ಹಿತೈಷಿಗಳು, ಅಕಾಡೆಮಿಯವರು ಇದಕ್ಕೆ ನೆರವಾಗಿದ್ದಾರೆ’ ಎಂದು ಮಾರುತಿ ತಿಳಿಸಿದರು.

‘ನನಗೆ ಎಷ್ಟೇ ಕಷ್ಟವಾದರೂ ಮಗನಿಗೆ ಸ್ಕೇಟಿಂಗ್ ತರಬೇತಿ ಕೊಡಿಸುವುದನ್ನು ನಿಲ್ಲಿಸುವುದಿಲ್ಲ. ಪರಿಚಯದ ಆಟೊ ಚಾಲಕ ಶಿವಾನಂದ ಮಗನನ್ನು ನಿತ್ಯ ಅಭ್ಯಾಸಕ್ಕೆ ಕರೆದುಕೊಂಡು ಹೋಗುತ್ತಾರೆ. ಮಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಬೇಕು ಎನ್ನುವ ಮಹದಾಸೆಯಿದೆ’ ಎಂದರು.

## ಬ್ಯಾಸ್ಕೆಟ್‌ಬಾಲ್ ಆಟಗಾರರಿಗೆ ಧನಸಹಾಯ

**ಬೆಂಗಳೂರು:** ಕರ್ನಾಟಕ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು ವಿಶೇಷ ಪ್ರತಿಭೆ ಹೊಂದಿರುವ ಹಾಗೂ ಆರ್ಥಿಕವಾಗಿ ಹಿಂದುಳಿದ, ಕೋವಿಡ್–19 ಪಿಡುಗಿನಿಂದಾಗಿ ಸಂಕಷ್ಟದಲ್ಲಿರುವ ಆರು ಮಂದಿ ಬ್ಯಾಸ್ಕೆಟ್‌ಬಾಲ್ ಪಟುಗಳಿಗೆ ತಲಾ ₹ 10 ಸಾವಿರ ಧನಸಹಾಯ ನೀಡಿದೆ.

‘ಅರ್ಪಣ್ ಸಿ. (ಭಾರತ ಕ್ರೀಡಾ ಪ್ರಾಧಿಕಾರ, ಧಾರವಾಡ), ಜೇಷ್ಣವಿ ಎಂ. ಗುಡಿಮನಿ (ಡಿವೈಇಎಸ್ ಮೈಸೂರು), ಜನನಿ ಎನ್ (ಡಿವೈಇಎಸ್ ಮೈಸೂರು), ಶಬಾನಾ ಶೇಖ್ (ಡಿವೈಇಎಸ್ ವಿಜಯಪುರ), ಯಶಸ್ವಿನಿ ಕೆ.ಎಂ (ಡಿವೈಇಎಸ್, ಮಂಡ್ಯ) ಹಾಗೂ ಸ್ನೇಹಾ ಬಿ. ಹಡ್ಲಿ (ಡಿವೈಇಎಸ್, ವಿದ್ಯಾನಗರ ಬೆಂಗಳೂರು) ಅವರಿಗೆ ಸಹಾಯಧನ ಒದಗಿಸಲಾಗಿದೆ‘ ಎಂದು ಕರ್ನಾಟಕ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಗೋವಿಂದರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಟೂರ್ನಿ

# ಗಣೆಮತ್–ಅಂಗದ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಯುವ ಪ್ರತಿಭೆ ಗಣೆಮತ್ ಸೆಕೋಂವ್ ಹಾಗೂ ಅಂಗದ್ ವೀರ್ ಸಿಂಗ್ ಬಾಜ್ವಾ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡರು. ಇಲ್ಲಿಯ ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಐದನೇ ದಿನವಾದ ಮಂಗಳವಾರ ಈ ಜೋಡಿಯು, ಮಿಶ್ರ ತಂಡಕ್ಕಾಗಿ ಇದ್ದ ಸ್ಕೀಟ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿತು.

ಗಣೆಮತ್ ಹಾಗೂ ಅಂಗದ್ ಫೈನಲ್ ಹಣಾಹಣಿಯಲ್ಲಿ 33–29ರಿಂದ ಕಜಕಸ್ತಾನದ ಓಲ್ಗಾ ಪನಾರಿನಾ-ಅಲೆಕ್ಸಾಂಡರ್ ಯೆಚ್‌ಶೆಂಕೊ ಜೋಡಿಯನ್ನು ಪರಾಭವಗೊಳಿಸಿದರು. ಅರ್ಹತಾ ಸುತ್ತಿನಲ್ಲಿ ಭಾರತದ ಜೋಡಿಯು 141 ಪಾಯಿಂಟ್ಸ್ ಕಲೆಹಾಕಿತ್ತು. ಈ ಗೆಲುವಿನೊಂದಿಗೆ ಟೂರ್ನಿಯಲ್ಲಿ ಅಗ್ರಸ್ಥಾನದಲ್ಲಿರುವ ಭಾರತ ಗೆದ್ದ ಚಿನ್ನದ ಪದಕಗಳ ಸಂಖ್ಯೆ ಏಳಕ್ಕೇರಿತು.

ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಪರಿನಾಜ್ ಧಲಿವಾಲ್-ಮೈರಾಜ್ ಅಹಮ್ಮದ್ ಖಾನ್ ಕೂದಲೆಳೆ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡರು. ಮೂರನೇ ಸ್ಥಾನಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಅವರು 31–32ರಿಂದ ಕತಾರ್‌ನ ರೀಮ್ ಎ ಶರ್ಶಾನಿ–ರಶೀದ್ ಹಮಾದ್ ಎದುರು ಸೋತರು.

ಗಣೆಮತ್, ಟೂರ್ನಿಯ ಮೂರನೇ ದಿನ ಮಹಿಳಾ ವೈಯಕ್ತಿಕ ಸ್ಕೀಟ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದರು. ಇದರೊಂದಿಗೆ ಐಎಸ್‌ಎಸ್‌ಎಫ್ ವಿಶ್ವಕಪ್‌ವೊಂದರಲ್ಲಿ ಈ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದ ಭಾರತದ ಮೊದಲ ಮಹಿಳೆ ಎನಿಸಿಕೊಂಡಿದ್ದರು.

**ಫೈನಲ್ಸ್‌ಗೆ ಸಂಜೀವ್, ತೋಮರ್:** ಭಾರತದ ಸಂಜೀವ್ ರಜಪೂತ್, ಐಶ್ವರಿ ಪ್ರತಾಪ್ ಸಿಂಗ್ ಹಾಗೂ ನೀರಜ್ ಕುಮಾರ್ ಅವರು 50 ಮೀ. ರೈಫಲ್ 3 ಪೊಸಿಷನ್ಸ್ ವಿಭಾಗದಲ್ಲಿ ಫೈನಲ್ಸ್ ತಲುಪಿದರು. ಅರ್ಹತಾ ಸುತ್ತಿನಲ್ಲಿ ಸಂಜೀವ್ (1172 ಪಾಯಿಂಟ್ಸ್) ಮೊದಲ ಸ್ಥಾನ ಗಳಿಸಿದರು. ತೋಮರ್ (1165) ಐದನೇ ಹಾಗೂ ನೀರಜ್‌ಗೆ 8ನೇ ಸ್ಥಾನ ಲಭಿಸಿತು.

ಮಿಶ್ರ ಸ್ಕೀಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಅಂಗದ್ ವೀರ್ ಸಿಂಗ್ ಬಜ್ವಾ ಹಾಗೂ ಗಣೆಮತ್ ಸೆಕೋಂವ್

# ಇಂದಿನಿಂದ ಪ್ಯಾರಾ ಅಥ್ಲೆಟಿಕ್ಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಬುಧವಾರದಿಂದ 26ರವರೆಗೆ ನಗರದಲ್ಲಿ ನಡೆಯಲಿದೆ. ಈ ಮೊದಲು ತಮಿಳುನಾಡಿನಲ್ಲಿ ಚಾಂಪಿಯನ್‌ಷಿಪ್ ನಿಗದಿಯಾಗಿತ್ತು. ಆದರೆ ಅಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುತ್ತಿರುವ ಕಾರಣ ಕೊನೇ ಕ್ಷಣದಲ್ಲಿ ಕರ್ನಾಟಕಕ್ಕೆ ಚಾಂಪಿಯನ್‌ಷಿಪ್‌ನ ಆತಿಥ್ಯ ದೊರೆತಿದೆ.

ಟೋಕಿಯೊ ಪ್ಯಾರಾಲಿಂಪಿಕ್ ಕೂಟಕ್ಕೆ ಭಾರತ ತಂಡದ ಆಯ್ಕೆ ಟ್ರಯಲ್ಸ್ ಆಗಿಯೂ ಈ ಟೂರ್ನಿಯನ್ನು ಪರಿಗಣಿಸಲಾಗುತ್ತದೆ. ಭಾರತದಾದ್ಯಂತ 850ಕ್ಕೂ ಹೆಚ್ಚು ಅಥ್ಲೀಟ್‌ಗಳು ವಿವಿಧ ಗುಂಪು ಹಾಗೂ ವೀಲ್ ಚೇರ್ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ. ಟ್ರ್ಯಾಕ್, ಜಾವೆಲಿನ್, ಹೈ ಜಂಪ್ ಸ್ಪರ್ಧೆಗಳು ವಿದ್ಯಾನಗರ ಕ್ರೀಡಾಂಗಣದಲ್ಲಿ, ವೀಲ್ ಚೇರ್, ಥ್ರೊ ಸ್ಪರ್ಧೆಗಳು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿವೆ.

ಕೂಟದಲ್ಲಿ ಒಟ್ಟು 170 ವಿಭಾಗಗಳು ಇರಲಿವೆ ಎಂದು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಕಾರ್ಯದರ್ಶಿ ಎ.ರಾಜವೇಲು ಹಾಗೂ ಭಾರತ ಪ್ಯಾರಾಲಿಂಪಿಕ್ ಕಮಿಟಿಯ ತಾಂತ್ರಿಕ ಸಮಿತಿ ಅಧ್ಯಕ್ಷ ಸತ್ಯನಾರಾಯಣ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚೆಸ್: ಸುಜಯ್, ಆರ್ಯನ್, ವಿವಾನ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸುಜಯ್ ಬಿ.ಎಂ. ಅವರು ಚಾಂಪಿಯನ್ಸ್ ಚೆಸ್ ಅಕಾಡೆಮಿಯು ಇತ್ತೀಚೆಗೆ ಆಯೋಜಿಸಿದ್ದ ಮುಕ್ತ ಬ್ರಿಟ್ಜ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಮುಕ್ತ ವಿಭಾಗದಲ್ಲಿ ಸ್ಪರ್ಧಿಸಿದ್ದ ಸುಜಯ್ (3.5 ಪಾಯಿಂಟ್ಸ್), ಶ್ರೀಪಾದ್ ಕೆ.ವಿ. (3.5) ಅವರನ್ನು ಬಕ್ವರ್ತ್ ನಿಯಮದಡಿ ಹಿಂದಿಕ್ಕಿ ಮೊದಲ ಸ್ಥಾನ ಗಳಿಸಿದರು. ಮೂರು ಪಾಯಿಂಟ್ಸ್ ಕಲೆಹಾಕಿದ ಉಪೇಂದ್ರ ಮೂರನೇ ಸ್ಥಾನ ಗಳಿಸಿದರು.

16 ವರ್ಷದೊಳಗಿನವರ ವಿಭಾಗದಲ್ಲಿ ಆರ್ಯನ್ ಸೂರ್ಯ (4 ಪಾಯಿಂಟ್ಸ್) ಮೊದಲ ಸ್ಥಾನ ತಮ್ಮದಾಗಿಸಿಕೊಂಡರೆ, ಅನಿರುದ್ಧನ್ ಜಿ. (3) ಹಾಗೂ ಸಮರ್ಥ್ ಜಿ. ಮುತಾಲಿಕ್ ದೇಸಾಯಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು. ಪ್ರಣವ್ ಅಂಕಿತ್ ಮರ್ದಯ್ಯ ನಾಲ್ಕನೇ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಚಿನ್ಮಯಿ ಆರ್.ಕೆ. ಶ್ರೇಷ್ಠ ಪಟುವಾಗಿ ಹೊರಹೊಮ್ಮಿದರು.

11 ವರ್ಷದೊಳಗಿನವರ ವಿಭಾಗದ ಪ್ರಶಸ್ತಿಯು ವಿವಾನ್ ಸಚ್‌ದೇವ್ (4 ಪಾಯಿಂಟ್ಸ್) ಅವರ ಪಾಲಾಯಿತು. ಆರವ್ ಸರ್ಬಾಲಿಯಾ ಮತ್ತು ತರುಣ್ ಮಂಟೂರ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು. ಆದಿತ್ಯ ಅಯ್ಯರ್‌ಗೆ ನಾಲ್ಕನೇ ಸ್ಥಾನ ಲಭಿಸಿತು. ಅನನ್ಯಾ ಮಿಶ್ರಾ ಬಾಲಕಿಯರ ವಿಭಾಗದಲ್ಲಿ ಶ್ರೇಷ್ಠ ಪಟು ಎನಿಸಿಕೊಂಡರು.

**Honda Motorcycle and Scooter India Pvt. Ltd., Registered Office:** Commercial Complex II, Sector - 49-50, Golf Course Extension Road, Gurugram - 122018 (Haryana), India; **Website:** www.honda2wheelersindia.com; **Customer Care:** customercare@honda2wheelersindia.com

^ಮೋಟಾರ್‌ಸೈಕಲ್‌ಗಳಲ್ಲಿ 125cc ಭಾರತದಲ್ಲಿ ಪ್ರಪ್ರಥಮ ಬಾರಿಗೆ ಪರಿಚಯಿಸಲಾಗುತ್ತಿದೆ. *ಅಂತರ-ದಿಂದ ಖಾಲಿ, ರಿಯಲ್ ಟೈಮ್ ಮತ್ತು ಸರಾಸರಿ ಮೈಲೇಜ್ ರೀಡಿಂಗ್ಸ್ ವೇರಿಯೆಂಟ್ ಪ್ರಕಾರ ಮತ್ತು ಸವಾರಿ ಪರಿಸ್ಥಿತಿಗೆ ಅನುಗುಣವಾಗಿ ಭಿನ್ನವಾಗಿರಬಹುದಾಗಿದೆ. ಚಿತ್ರದಲ್ಲಿ ತೋರಿಸಿರುವ ಪ್ರೊಡಕ್ಟ್ ಮಾರುಕಟ್ಟೆಯಲ್ಲಿ ತೋರಿಸಿರುವ ಪ್ರೊಡಕ್ಟ್‌ಗಿಂತ ಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿರುವ ಆಕ್ಸೆಸ್ಸರಿಗಳು ಸ್ಟಾಂಡರ್ಡ್ ಉಪಕರಣದ ಭಾಗವಾಗಿರುವುದಿಲ್ಲ. ಎಲ್ಲಾ ವೈಶಿಷ್ಟ್ಯತೆಗಳು ಎಲ್ಲಾ ವೇರಿಯೆಂಟ್‌ಗಳಲ್ಲಿ ಲಭ್ಯವಿಲ್ಲದಿರಬಹುದು. #ಫೈನಾನ್ಸ್ ಸ್ಕೀಮ್ ಸೌಲಭ್ಯ ಹಣಕಾಸು ಕಂಪೆನಿಯ ಸಂಪೂರ್ಣ ಅಧಿಕಾರದಲ್ಲಿರುತ್ತದೆ. ಇದು ಕಂಪೆನಿಯ ಸಂಪೂರ್ಣ ಅಧಿಕಾರದ ಮೇರೆಗೆ ಆದ್ಯತೆಯ ಹಣಕಾಸು ಪಾಲುದಾರರೊಂದಿಗೆ ಮಾತ್ರವೇ ಲಭ್ಯವಿರುತ್ತದೆ. ಹಣಕಾಸು ನೀತಿಗೆ ಅನುಗುಣವಾಗಿ ಹಣಕಾಸು ಆಯ್ದ ಗ್ರಾಹಕರಿಗೆ ಆಯ್ದ ಮಾಡೆಲ್‌ಗಳ ಮೇಲೆ ಮಾತ್ರವೇ ಲಭ್ಯವಿರುತ್ತದೆ. ಎರಡು ಕೊಡುಗೆಗಳನ್ನು ಯಾವತ್ತೂ ಒಟ್ಟು ಸೇರಿಸಲು ಸಾಧ್ಯವಿಲ್ಲ. ಎಲ್ಲಾ ಸ್ಕೀಮ್‌ಗಳು ಕೇವಲ ಸೀಮಿತ ಅವಧಿಯ ವರೆಗೆ ಮಾತ್ರವೇ ಜಾರಿಯಲ್ಲಿರುತ್ತದೆ ಹಾಗೂ ಯಾವುದೇ ಮುನ್ಸೂಚನೆ ಇಲ್ಲದೆಯೇ ಇವುಗಳನ್ನು ಮಾರುಕಟ್ಟೆಯಿಂದ ಹಿಂತೆಗೆಯಬಹುದಾಗಿದೆ. **ಷರತ್ತುಗಳು ಅನ್ವಯಿಸುತ್ತವೆ.

**Honda Exclusive Authorised Dealerships:** Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSUR ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 25320623, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 8884434200; Haiku Honda - **DOMLUR:** 49656565, 9342432156; **INDIRANAGAR:** 9343796289, 08049692323; Dhruvdesh Honda - **MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** 23010300, 8050503111; **NAGARBHAVI:** 23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BANNERAGHATTA RD:** 08068818881; **KANAKAPURA RD:** 08068818881; **PUTTENAHALLI:** 08068818881; **GOTTIGERE:** 08068818881; VFM Honda - **KR PURAM:** 49499299, 9071858885; **HENNUR ROAD:** 9108989817, 9108989818; Tansi Honda - **HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 08042620600, 9686573013; **GUNJUR:** 9606450642, 9606450641; Turbo Honda - **DODDABALLAPURA:** 7022038682; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 08152-221414, 9900018515; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; Namma Honda - **CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; SLN Honda - **SHIDLAGATTA:** 9986160961; Century Honda - **TUMKUR:** 7829767340, 8892610223; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 0816-2279979, 9449334359; **KUNIGAL:** 7022276603; **KUNIGAL ROAD:** 9844351599, 9844351399; Honey Honda - **PAVAGADA:** 9686724405; Annapoorna Honda - **MADHUGIRI:** 9886627429; Vignesh Honda - **TIPTUR:** 9448214014; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030; **KANAKAPURA:** 9606036053; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579.

**For Bulk/Institutional enquiries, please write us at: institutionalsales@honda2wheelersindia.com**